ಸಂಪುಟ: 14 Volume | ಸಂಚಿಕೆ: 36 Issue | ಪುಟಗಳು 08 Pages | ಸೋಮವಾರ 11 ಮೇ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಕಲಿಕೆ ವಿಷಯ ಬರೀ ತಿಳುವಳಿಕೆಯ ಮಟ್ಟದಲ್ಲಿ ಉಳಿಯದೆ ಹೆಚ್ಚು ಅರ್ಥಪೂರ್ಣ ಮಾಡಬಲ್ಲ ಮನುಷ್ಯನೊಬ್ಬ ಬೇಕು. ಆತನೇ ಕೋಚ್ ಅಥವಾ ಗುರು.

–ಪಿ. ಲಂಕೇಶ್



ಬಸವಕಲ್ಯಾಣ: ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠದ ದಾಸೋಹ ಮನೆಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ನಿಮಿತ್ಯ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಭಾವಚಿತ್ರಕ್ಕೆ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ, ಹೇಮಲತಾ ಎಂ. ಹಿರೇಮಠ, ಶಿವಶರಣಯ್ಯ ಸ್ವಾಮಿ ಕಂಬಳಿಮಠ, ಅಲ್ಲಮ ಪ್ರಭು ಹಿರೇಮಠ ಮುಂತಾದವರು ಉಪಸ್ಥಿತರಿದ್ದರು.



ಹುಮನಾಬಾದ: ಪಟ್ಟಣದ ತಹಸೀಲ್ ಕಛೇರಿಯಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ "ನವರ 604ನೇ ಜಯಂತೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಹಸೀಲ್ದಾರ್ ಅಜುಂ ತಬಸ್ಸುಮ್ ರವರು ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಧರ್ಮರೆಡ್ಡಿ ವಾಂಜರಿ, ಪಶು ಇಲಾಖೆ ಅಧಿಕಾರಿ ಗೋವಿಂದ, ಬ್ರಹ್ಮಾರೆಡ್ಡಿ ವಾಂಜರಿ, ಆನಂದರೆಡ್ಡಿ ವಾಂಜರಿ, ಗಿರಿಧರರೆಡ್ಡಿ, ರವಿರೆಡ್ಡಿ, ರಘುರೆಡ್ಡಿ, ಉಪಸ್ಥಿತರಿದ್ದರು.

## ಸಿಎಂ ಬದಲಾವಣೆ ಹೈಗೆ ಬಿಟ್ಟ ವಿಚಾರ



**ಮುದಗಲ್:** ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಸಿಎಂ ಬದಲಾವಣೆ ವಿಚಾರ ತಾರಕ್ಕೆರಿದ್ದು,ಕೈಹೈಕಮಾಂಡ್ ಬಯಸಿದರೆ ಮಾತ್ರ ಸಿಎಂ ಬದಲಾವಣೆಯಾಗುತ್ತದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಪಟ್ಟಣದ ಮಾಜಿ ಶಾಸಕ ಡಿ.ಎಸ್. ಹೂಲಿಗೇರಿ ಅವರ ಸುಪುತ್ರಿಯ ಮದುವೆ ಸಮಾರಭಕ್ಕೆ ಆಗಮಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ನಾನು ಸಿಎಂ ಆಕಾಂಕ್ಷಿಯಲ್ಲ. ಸಿಎಂ ಆಗುವವರು ಖರ್ಗೆ, ಡಿಕೆಸಿ, ಪರಮೇಶ್ವರ ಅವರುಗಳು ಆಕಾಂಕ್ಷಿಗಳಿದ್ದಾರೆ. ತಮಿಳುನಾಡಿನಲ್ಲಿ ಸೆಕ್ಯೂಲರ್ ಉಳಿಯುವ ನಿಟ್ಟಿನಲ್ಲಿ ಕಾಂಗ್ರೆಸ್ ಶಾಸಕರು ಟಿವಿಕೆ ಪಕ್ಷಕ್ಕೆ ಬೆಂಬಲ ನೀಡಿದ್ದಾರೆ. ರಾಜ್ಯದಲ್ಲಿ ಗ್ಯಾರಂಟಿ ಯೊಜನೆಗಳಿಂದ ಅಭಿವೃದ್ಧಿ ಕುಂಠಿತವಾಗಿದೆ ವಿರೋಧ ಪಕ್ಷಗಳ ಆರೋಪ ಸತ್ಯಕ್ಕೆ ದೂರ ವಾಗಿದೆ ಹಟ್ಟಿ ಕಂಪನಿಯ ಅದ್ಯಕ್ಷ ಗಾದಿ ಹುದ್ದೆಗೆ ಸ್ಥಳಿಯರ ನೇಮಕ ಹಾಗೂ ಮುದಗಲ್ ಪಟ್ಟಣವನ್ನು ತಾಲೂಕಾ ಕೇಂದ್ರ, ಕುಡಿಯುವ ನಿರಿನ ಸಮಸ್ಯೆ ಕುರಿತು ಸಿಎಂ ಬಳಿ ಚರ್ಚಿಸಲಾಗುವುದು.ಈ ವೇಳೆ ಮಾಜಿ ಸಚಿವ ಅಮರೇಗೌಡ ಬಯ್ಯಾಪೂರ,ಮಸ್ಕಿ ಶಾಸಕ ಬಸನಗೌಡ ತುರವಿಹಾಳ,ಅಮರಗುಂಡಪ್ಪ ಮೇಟಿ ಇದ್ದರು.

## ಮಲ್ಲಮ್ಮ ತಾಯಿಯ ಆದರ್ಶ ಅನುಕರಣೀಯ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಹೇಮರೆಡ್ಡಿ ಮಲ್ಲಮ್ಮ ತಾಯಿ ಸತ್ಯ, ಶಾಂತಿ, ಸೇವೆ ಹಾಗೂ ಭಕ್ತಿಯ ಮೂಲಕ ಸಮಾಜಕ್ಕೆ ದಾರಿ ತೋರಿದ ಮಹಾನ್ ಶಿವಶರಣೆ ಆಗಿದ್ದರು. ಅವರ ತತ್ವಗಳು ಇಂದಿನ ಯುವಜನತೆಗೆ ಮಾರ್ಗದರ್ಶಕವಾಗಿವೆ. ಸಮಾಜದಲ್ಲಿ ಮಾನವೀಯತೆ, ಸಹೋದರತ್ವ ಹಾಗೂ ನಿಸ್ವಾರ್ಥ ಸೇವಾಭಾವ ಬೆಳೆಸಲು ಮಲ್ಲಮ್ಮ ತಾಯಿಯ ಆದರ್ಶಗಳು ಪ್ರೇರಣೆಯಾಗಿವೆ ಎಂದು ತಿಳಿಸಿದರು.

ಬಸವಕಲ್ಯಾಣ ತಾಲೂಕಿನ ಇಸ್ಲಾಂಪೂರ ಗ್ರಾಮದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತೋತ್ಸವ ಕಾರ್ಯಕ್ರಮನ್ನುದ್ದೇಶಿಸಿ ಮಾತನಾಡುತ್ತಿದ್ದರು. ಪ್ರತಿಯೊಬ್ಬರೂ ಮಹಾಪುರುಷರ ತತ್ವಗಳನ್ನು ಪಾಲಿಸಿ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು. ಧರ್ಮ, ಜಾತಿ ಭೇದವಿಲ್ಲದೆ ಎಲ್ಲರೂ ಒಂದಾಗಿ ಬಾಳಿದಾಗ




ಮಾತ್ರ ಸುಂದರ ಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಂಕರರೆಡ್ಡಿ ಅವಳಿ, ಬಸವರಾಜ ರೆಡ್ಡಿ ಬಯ್ಯಾನ, ನಾಗರೆಡ್ಡಿ ಬಯ್ಯಾನ, ಪ್ರಭುರೆಡ್ಡಿ, ಸುಭಾಷರೆಡ್ಡಿ, ರಾಮಲಿಂಗರೆಡ್ಡಿ, ಶ್ರೀಕಾಂತ ರೆಡ್ಡಿ ಮಂಠಾಳೆ, ಭೀಮರೆಡ್ಡಿ ಪುಟ್ಟಾ, ವೆಂಕಟರೆಡ್ಡಿ ಬಿ, ಬ್ರಹ್ಮರೆಡ್ಡಿ ಚಿಲ್ಲಾಮಿ, ಚನ್ನಾರೆಡ್ಡಿ ಕನಾಟೆ, ನರೇಂದ್ರ, ಅವಿನಾಷರೆಡ್ಡಿ, ಡಾ. ಪವನರೆಡ್ಡಿ ಸೇರಿದಂತೆ ಹಲವಾರು ಗಣ್ಯರು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

## ಸಮಾಜಕ್ಕೆ ದಾರಿ ತೋರಿದ ಶಿವಶರಣೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಹೇಮರೆಡ್ಡಿ ಮಲ್ಲಮ್ಮ ತಾಯಿ ಸತ್ಯ, ಶಾಂತಿ, ಸೇವೆ ಹಾಗೂ ಭಕ್ತಿಯ ಮೂಲಕ ಸಮಾಜಕ್ಕೆ ದಾರಿ ತೋರಿದ ಮಹಾನ್ ಶಿವಶರಣೆ ಆಗಿದ್ದರು. ಅವರ ತತ್ವಗಳು ಇಂದಿನ ಯುವಜನತೆಗೆ ಮಾರ್ಗದರ್ಶಕವಾಗಿವೆ. ಸಮಾಜದಲ್ಲಿ ಮಾನವೀಯತೆ, ಸಹೋದರತ್ವ ಹಾಗೂ ನಿಸ್ವಾರ್ಥ ಸೇವಾಭಾವ ಬೆಳೆಸಲು ಮಲ್ಲಮ್ಮ ತಾಯಿಯ ಆದರ್ಶಗಳು ಪ್ರೇರಣೆಯಾಗಿವೆ ಎಂದು ತಿಳಿಸಿದರು.

ಬೀದರ್ ನಗರದ ರೆಡ್ಡಿ ಸಮಾಜದವತಿಯಿಂದ ಆಯೊಜಿಸಿದ ಶಿವಶರಣೆ ಹೆಮರೆಡ್ಡಿ ಮಲ್ಲಮ್ಮ ತಾಯಿಯ ಜನ್ಮೋತ್ಸವ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಪ್ರತಿಯೊಬ್ಬರೂ ಮಹಾಪುರುಷರ ತತ್ವಗಳನ್ನು ಪಾಲಿಸಿ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು.



ಧರ್ಮ, ಜಾತಿ ಭೇದವಿಲ್ಲದೆ ಎಲ್ಲರೂ ಒಂದಾಗಿ ಬಾಳಿದಾಗ ಮಾತ್ರ ಸುಂದರ ಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷರು ಶ್ರೀಮತಿ ಶಾಲನಿ ಚಿಂತಾಮಣಿ,ಮುರಳಿಧರ ಎಕಲಾರಕರ್ , ರಾಜು ಚಿಂತಾಮಣಿ, ಸಂಗ್ರಾಮ ರೆಡ್ಡಿ, ಹುಗ್ಗಿ ಪಾಟೀಲ, ರಾಜರೆಡ್ಡಿ,ಶ್ರೀನಿವಾಸ ರೆಡ್ಡಿ, ಅಶೋಕರೆಡ್ಡಿ, ಸಂಜು–ರೆಡ್ಡಿ ಹಲವಾರು ಗಣ್ಯರು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಮೇಟಿ ಕಾಂಗ್ರೆಸ್ ಖಜಾನೆ ಲೂಟಿ

## ಕಾಂಗ್ರೆಸ್ ಸರ್ಕಾರದ ಒಳಜಗಳ | ನಾಯಕತ್ವದ ಕದನ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕ ಕಾಂಗ್ರೆಸ್ ಸರ್ಕಾರದ ಒಳಜಗಳ ಮತ್ತು ನಾಯಕತ್ವದ ಕದನ ವಿರುದ್ಧ ಪ್ರಧಾನಿ ನರೇಂದ್ರಮೋದಿ ವಾಗ್ದಾಳಿ ನಡೆಸಿದ್ದಾರೆ.

ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಎಷ್ಟು ದಿನ ಇರುತ್ತಾರೋ ಗೊತ್ತಿಲ್ಲ. ಇಲ್ಲಿನ ಖಜಾನೆ ಮಾತ್ರ ಲೂಟಿಯಾಗುತ್ತಿದೆ ಎಂದು ಆರೋಪಿಸಿದ್ದಾರೆ. ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಅವರಿಗೆ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಬಿಜೆಪಿ ವತಿಯಿಂದ ಹಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕರ್ನಾಟಕದ ಅಧಿಕಾರ ಹಂಚಿಕೆ, ಬಿಕ್ಕಟ್ಟು, ಆಡಳಿತ ವೈಫಲ್ಯ, ಭ್ರಷ್ಟಾಚಾರದ ಬಗ್ಗೆ ಉಲ್ಲೇಖಿಸಿದ್ದಾರೆ.

**ಕನ್ನಡದಲ್ಲೇ ಮೊದಲ ಮಾತು:** ಮೊದಲಿಗೆ ಎಲ್ಲರಿಗೂ ನಮಸ್ಕಾರಗಳು ಎಂದು ಕನ್ನಡದಲ್ಲೇ ಭಾಷಣ ಆರಂಭಿಸು ಮೂಲಕ ಮೋದಿಯವರು, ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಎಷ್ಟು ದಿನ ಇರುತ್ತಾರೋ ಗೊತ್ತಿಲ್ಲ. ಇಲ್ಲಿನ ಖಜಾನೆ ಮಾತ್ರ ಲೂಟಿಯಾಗುತ್ತಿದೆ ಎಂದು ಆರೋಪಿಸಿದ್ದಾರೆ.

**ನಾಯಕತ್ವದ ಗೊಂದಲ:** ಜನರ ಸಮಸ್ಯೆ ಪರಿಹರಿಸುವ ಬದಲು ಕಾಂಗ್ರೆಸ್ ಸರ್ಕಾರ ಮೂರು ವರ್ಷಗಳಿಂದ ನಾಯಕತ್ವ ಗೊಂದಲವನ್ನು ಬಗೆಹರಿಸುವಲ್ಲೇ ಸಮಯ ಕಳೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ನಾಯಕತ್ವ ಚರ್ಚೆಯನ್ನು ಉಲ್ಲೇಖಿಸಿದ್ದಾರೆ.



### ತಮಿಳುನಾಡಿನ ಡಿಎಂಕೆ ಬೆನ್ನಿಗೆ ಚೂರಿ

ತಮಿಳುನಾಡಿನ ಈಗಿನ ಪರಿಸ್ಥಿತಿ ನೋಡಿ. 30 ವರ್ಷಗಳಿಂದ ಕಾಂಗ್ರೆಸ್ ಜೊತೆ ಡಿಎಂಕೆ ನಿಕಟ ಸಂಬಂಧ ಹೊಂದಿತ್ತು. 2014ರಿಂದ ಪಕ್ಷ ಉಳಿದಿದ್ದೇ ಮೈತ್ರಿ ಕಾರಣಕ್ಕಾಗಿ. ಅಧಿಕ್ಕಾರ ಕಳೆದುಕೊಳ್ಳುತ್ತಿದ್ದಂತೆ ಕಾಂಗ್ರೆಸ್ ಮೈತ್ರಿ ಮುರಿದುಕೊಂಡು ಡಿಎಂಕೆ ಬೆನ್ನಿಗೆ ಚೂರಿ ಇರಿದಿದೆ ಎಂದು ಮೋದಿ ಅಭಿಪ್ರಾಯಪಟ್ಟಿದ್ದಾರೆ.

### ಬೆಂಗಳೂರಿನಿಂದ ಕೇಸರಿ ಬಣ್ಣದ ಸೂರ್ಯ..!

ಕಾಂಗ್ರೆಸ್‌ನವರು ಮಹಿಳಾ ಮೀಸಲಾತಿಯನ್ನು ತಡೆದಿದ್ದಾರೆ ಎಂದು ಮೋದಿ ದೂರಿದ್ದಾರೆ. ಬಿಜೆಪಿ ಪಕ್ಷವಾಗಿ ಇಂದು ಆಡಳಿತ ನಡೆಸುವ ಹಂತಕ್ಕೆ ಬಂದಿದೆ. ಬೆಂಗಳೂರಿನ ನೆಲದಿಂದ ಕೇಸರಿ ಬಣ್ಣದ ಸೂರ್ಯ ಉದಯಿಸಿರುವುದನ್ನು ನಾನು ಕಾಣುತ್ತಿದ್ದೇನೆ ಎಂದಿದ್ದಾರೆ.

ಮುಖ್ಯಮಂತ್ರಿ ಎಷ್ಟು ದಿನ ಹುದ್ದೆಯಲ್ಲಿರುತ್ತಾರೆ ಎಂಬುದನ್ನೂ ಕಾಂಗ್ರೆಸ್‌ನಿಂದ ನಿರ್ಧರಿಸಲಾಗುತ್ತಿಲ್ಲ. ಮತ್ತೊಬ್ಬರಿಗೆ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂಬುದು ಸ್ಪಷ್ಟವಿಲ್ಲ. ಎಲ್ಲವೂ ತೂಗುಹಗ್ಗದಲ್ಲಿ ಸಿಲುಕಿದೆ. ಜನರಿಗೆ ದ್ರೋಹ ಮಾಡುವುದೇ ಕಾಂಗೆಸ್‌ನ ಕೆಲಸವಾಗಿದೆ. ಅವರು ಹೇಳುವುದೆಲ್ಲಾ ಸುಳ್ಳು.

–ನರೇಂದ್ರ ಮೋದಿ, ಪ್ರಧಾನ ಮಂತ್ರಿ

### ಮುಖ್ಯಮಂತ್ರಿ ಕುರ್ಚಿ ಅನ್‌ಸೇಫ್

ಜನರ ಸಮಸ್ಯೆ ಪರಿಹರಿಸುವ ಬದಲು ಸರ್ಕಾರ ಮೂರು ವರ್ಷಗಳಿಂದ ನಾಯಕತ್ವ ಗೊಂದಲವನ್ನು ಬಗೆಹರಿಸುವಲ್ಲೇ ಸಮಯ ಕಳೆದಿದೆ. ಸಿಎಂ ಎಷ್ಟು ದಿನ ಹುದ್ದೆಯಲ್ಲಿರುತ್ತಾರೆ ಎಂಬುದನ್ನೂ ಗೊಂದಲವಿದೆ. ಮತ್ತೊಬ್ಬರಿಗೆ ಅವಕಾಶ ಸಿಗುತ್ತದೆ–ಯೋ ಇಲ್ಲವೋ ಎಂಬುದು ಸ್ಪಷ್ಟವಿಲ್ಲ. ಎಲ್ಲವೂ ತೂಗುಹಗ್ಗದಲ್ಲಿ ಸಿಲುಕಿದೆ ಎಂದು ಪಿಎಂ ವ್ಯಂಗ್ಯವಾಡಿದ್ದಾರೆ.

### ಗ್ಯಾರಂಟಿಗಳೇ ಸುಳ್ಳು: ಪಿಎಂ


ಜನರಿಗೆ ದ್ರೋಹ ಮಾಡುವುದೇ ಕಾಂಗ್ರೆಸ್‌ನ ಕೆಲಸವಾಗಿದೆ. ಅವರು ಸುಳ್ಳು. ಅವರ ಗ್ಯಾರಂಟಿಗಳೂ ಸುಳ್ಳು. ಕಾಂಗ್ರೆಸ್ ಅಧಿಕಾರದ ಪುಸ್ತಕದಲ್ಲಿ ಆಡಳಿತ ಎಂಬ ಅಧ್ಯಾಯವೇ ಇಲ್ಲ. ಅಧಿಕಾರದ ಆಸೆಗಾಗಿ ಯಾವುದೇ ಪಕ್ಷದೊಳಗೆ ಓಡಿಹೋಗುವ, ನಂಬಿದವರಿಗೆ ಕೈಕೊಡುವ, ಡಿಎಂಕೆ ಬೆನ್ನಿಗೆ ಚೂರಿ ಹಾಕಿರುವ ಕಾಂಗ್ರೆಸ್ ಪಕ್ಷವನ್ನು ಯಾರೊಬ್ಬರೂ ನಂಬಬಾರದು ಎಂದಿದ್ದಾರೆ.

## ಹಣ ಸರಿಯಾಗಿ ಪಾವತಿಸಿದರೂ ಕತ್ತಲಲ್ಲಿ ಹುಮನಾಬಾದ್ ನಗರ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಪ್ರತಿಮಾಸ ವಿದ್ಯುತ್ ಬಿಲ್ ಅನ್ನು ಸರಿಯಾಗಿ ಪಾವತಿಸುತ್ತಿದ್ದರೂ ಹುಮನಾಬಾದ್ ನಗರದ ಜನರು ನಿರಂತರ ವಿದ್ಯುತ್ ಸಮಸ್ಯೆಯಿಂದ ಕತ್ತಲಲ್ಲಿ ಜೀವನ ನಡೆಸುವಂತಾಗಿದೆ ಎಂಬ ಆಕ್ರೋಶ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ. ಪದೇ ಪದೇ ವಿದ್ಯುತ್ ಕಡಿತ, ರಾತ್ರಿ ವೇಳೆಯ ದೀರ್ಘ ವ್ಯತ್ಯಯ ಹಾಗೂ ನಿರ್ಲಕ್ಷ್ಯ ಧೋರಣೆಯಿಂದ ಜನರು ಬೇಸತ್ತಿದ್ದಾರೆ.

ನಗರದ ಹಲವು ಬಡಾವಣೆಗಳಲ್ಲಿ ಗಂಟೆಗಟ್ಟಲೆ ವಿದ್ಯುತ್ ಇರುವುದಿಲ್ಲ. ಇದರಿಂದ ವಿದ್ಯಾರ್ಥಿಗಳ ಓದು, ವ್ಯಾಪಾರಸ್ಥರ ವ್ಯವಹಾರ ಹಾಗೂ ಸಾರ್ವಜನಿಕರ ದೈನಂದಿನ ಜೀವನ ಸಂಪೂರ್ಣ ಅಸ್ತವ್ಯಸ್ತವಾಗುತ್ತಿದೆ. ಬೇಸಿಗೆಯ ಬಿಸಿಲಿನ ನಡುವೆ ವಿದ್ಯುತ್ ಇಲ್ಲದೆ ವೃದ್ಧರು, ಮಕ್ಕಳು ಹಾಗೂ ರೋಗಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. "ಬಿಲ್ ಕಟ್ಟದಿದ್ದರೆ ಇಲಾಖೆ ತಕ್ಷಣ ಸಂಪರ್ಕ ಕಡಿತ ಮಾಡುತ್ತದೆ. ಆದರೆ ನಾವು ಹಣ ಪಾವತಿಸಿದ ಬಳಿಕವೂ ಸರಿಯಾದ ಸೇವೆ



ಯಾಕೆ ಸಿಗುತ್ತಿಲ್ಲ?" ಎಂದು ನಾಗರಿಕರು ಪ್ರಶ್ನಿಸುತ್ತಿದ್ದಾರೆ. ಕರೆ ಮಾಡಿದರೂ ಕೆಲ ಅಧಿಕಾರಿಗಳು ಸ್ಪಂದಿಸುವುದಿಲ್ಲ ಎಂಬ ಆರೋಪವೂ ಕೇಳಿಬರುತ್ತಿದೆ. ವಿದ್ಯುತ್ ಇಲಾಖೆಯಲ್ಲಿ ತಾಂತ್ರಿಕ ದೋಷಗಳು, ಹಳೆಯ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ನಿರ್ವಹಣೆಯ ಕೊರತೆಯಿಂದ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಜನರಿಗೆ ಗುಣಮಟ್ಟದ ಸೇವೆ ನೀಡುವ ಬದಲು ನಿರ್ಲಕ್ಷ್ಯ ಧೋರಣೆ ಅನುಸರಿಸಲಾಗುತ್ತಿದೆ ಎಂಬ ಅಸಮಾಧಾನವೂ ಹೆಚ್ಚಾಗಿದೆ. ಹುಮನಾಬಾದ್ ನಗರದ ಜನರು ತಕ್ಷಣ ವಿದ್ಯುತ್ ಸರಬರಾಜು ವ್ಯವಸ್ಥೆ ಸುಧಾರಿಸಿ, ನಿರಂತರ ವಿದ್ಯುತ್ ಪೂರೈಕೆ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ. ಇಲ್ಲವಾದರೆ ಸಾರ್ವಜನಿಕರು ಹೋರಾಟಕ್ಕೆ ಇಳಿಯುವ ಎಚ್ಚರಿಕೆಯನ್ನೂ ನೀಡಿದ್ದಾರೆ.

## ಶ್ರೀ ಹೇಮರಡ್ಡಿ ಮಲ್ಲಮ್ಮ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತಾಲೂಕು ಆಡಳಿತದ ವತಿಯಿಂದ ತಹಶೀಲ್ ಕಚೇರಿಯಲ್ಲಿ ಸಾಂಕೇತಿಕವಾಗಿ ಬೆಳಿಗ್ಗೆ 9:00ಗೆ ಹೇಮರೆಡ್ಡಿ ಮಲ್ಲಮ್ಮಅವರ ಭಾವಚಿತ್ರಕ್ಕೆ ಹಾರ ಹಾಕುವುದರ ಮೂಲಕ ಆಚರಿಸಲಾಯಿತು. ಬಳಿಕ ಗಂಗಾವತಿ ಕನಕಗಿರಿ ರಸ್ತೆಯಲ್ಲಿರುವ ಹೇಮರೆಡ್ಡಿ ಮಲ್ಲಮ್ಮ ವೃತ್ತದಬಳಿ ಭಾವಚಿತ್ರ ಇಟ್ಟು ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ಪೂಜೆ ಸಲ್ಲಿಸುವುದರ ಮೂಲಕ ರೆಡ್ಡಿ ಸಮಾಜ ತಾಲೂಕು ಘಟಕ ಗಂಗಾವತಿ ನೇತೃತ್ವದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಎಲ್ಲಾ ಗಣ್ಯಮಾನ್ಯರು ಮುಖಂಡರುಗಳು ಪ್ರಮುಖರಿಂದ ಮಲ್ಲಮ್ಮ ನುಡಿ ಪ್ರಾದೇಶಿಕ ದಿನಪತ್ರಿಕೆಯನ್ನು ಉದ್ದೇಶಿಸಿ ಮಾತನಾಡಿ 9 ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟವಾಗುತ್ತಿರುವ ಮಲ್ಲಮ್ಮ ನುಡಿ ದಿನಪತ್ರಿಕೆಯನ್ನು ಮುಂದಿನ ದಿನಮಾನಗಳಲ್ಲಿ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಪ್ರಕಟವಾಗಲಿ ಎಂದು ಹಾರೈಸಿ ಬಿಡುಗಡೆಗೊಳಿಸಿದರು ಹಾಗೂ ಫಲಹಾರವನ್ನು ಏರ್ಪಡಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್‌ಪಿ ರೆಡ್ಡಿ ತಾಲೂಕ ಅಧ್ಯಕ್ಷರು ರೆಡ್ಡಿ ಸಮಾಜ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವಿರುಪಾಕ್ಷಪ್ಪ ಸಿಂಗನಾಳ ಮಾಜಿ ಜಿಲ್ಲಾಧ್ಯಕ್ಷರು ಮುಂತಾದವುರಿದ್ದರು.



ಗುರುಮಠಕಲ್: ಜನತಾದಳ (ಜೆಡಿಎಸ್) ಗುರುಮಠಕಲ್ ಶಾಸಕರಾದ ಶರಣಗೌಡ ಕಂದಕೂರ್ ಅವರ ಜನಸಂಪರ್ಕ ಕಚೇರಿಯಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಗುರುಮಠಕಲ್ ತಾಲ್ಲೂಕಿನ ಮತಕ್ಷೇತ್ರ ವ್ಯಾಪ್ತಿಯ ಏಳು ಗ್ರಾಮಗಳ ಸಾವಿರಾರು ಕಾರ್ಯಕರ್ತರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು.









## ರಾಜ್ಯದಲ್ಲಿ ಅರಾಜಕತೆ ತಾಂಡವವಾಡುತ್ತಿದೆ: ಬಿಎಸ್‌ವೈ ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

# ರೆಡ್ಡಿ ಸಮಾಜದ ಏಳಿಗೆಗೆ ಸೇವಾಭಾವ ಅವಶ್ಯಕ

ಯಾವುದೇ ಸಮಾಜದ ಬೆಳವಣಿಗೆ ಕೇವಲ ಆರ್ಥಿಕ ಶಕ್ತಿಯಿಂದ ಅಥವಾ ರಾಜಕೀಯ ಅಧಿಕಾರದಿಂದ ಮಾತ್ರ ಸಾಧ್ಯವಾಗುವುದಿಲ್ಲ. ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಕಣ್ಣೀರನ್ನು ಒರೆಸುವ ಮನೋಭಾವ ಇದ್ದಾಗ ಮಾತ್ರ ಆ ಸಮಾಜ ನಿಜವಾದ ಅರ್ಥದಲ್ಲಿ ಉನ್ನತಿಗೆ ಏರುತ್ತದೆ. ಇಂದು ವಿವಿಧ ಕ್ಷೇತ್ರಗಳಲ್ಲಿ ಅಧಿಕಾರ, ಆಸ್ತಿ ಹಾಗೂ ಪ್ರಭಾವ ಹೊಂದಿರುವ ರೆಡ್ಡಿ ಸಮಾಜದ ಮುಖಂಡರು ಸಮಾಜದ ಬಡವರು, ನಿರ್ಗತಿಕರು ಹಾಗೂ ಹಿಂದುಳಿದವರ ನೆರವಿಗೆ ಬರಬೇಕಾದ ಅಗತ್ಯ ಹೆಚ್ಚಾಗಿದೆ.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ಸಮಾಜದಲ್ಲಿ ಕೆಲವರು ಉನ್ನತ ಸ್ಥಾನದಲ್ಲಿದ್ದರೂ, ಇನ್ನೂ ಅನೇಕ ಕುಟುಂಬಗಳು ಶಿಕ್ಷಣ, ಉದ್ಯೋಗ, ಆರೋಗ್ಯ ಹಾಗೂ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿವೆ. ಇಂತಹವರನ್ನು ಗುರುತಿಸಿ ಅವರಿಗೆ ನೆರವು ನೀಡುವುದು ಪ್ರತಿಯೊಬ್ಬ ಸಾಮರ್ಥ್ಯವಂತರ ಜವಾಬ್ದಾರಿಯಾಗಿದೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಬಡ ಕುಟುಂಬಗಳಿಗೆ ಆರೋಗ್ಯ ಸಹಾಯ, ನಿರುದ್ಯೋಗಿಗಳಿಗೆ ಉದ್ಯೋಗ ಮಾರ್ಗದರ್ಶನ ನೀಡಿದಾಗ ಮಾತ್ರ ಸಮಾಜದ ನಿಜವಾದ ಅಭಿವೃದ್ಧಿ ಸಾಧ್ಯ. ರೆಡ್ಡಿ ಸಮಾಜಕ್ಕೆ ತನ್ನದೇ ಆದ ಇತಿಹಾಸ, ಪರಂಪರೆ ಹಾಗೂ ಗೌರವವಿದೆ. ಆ ಗೌರವ ಉಳಿಯಬೇಕಾದರೆ ಸಮಾಜದ ಒಳಗಿನ ಅಸಮಾನತೆ ಕಡಿಮೆಯಾಗಬೇಕು. ಅಧಿಕಾರದಲ್ಲಿರುವವರು ತಮ್ಮ ಸ್ಥಾನಮಾನವನ್ನು ಕೇವಲ ವೈಯಕ್ತಿಕ ಲಾಭಕ್ಕಾಗಿ ಬಳಸದೆ, ಸಮಾಜ ಸೇವೆಗೆ ಮೀಸಲಿಟ್ಟಾಗ ಮುಂದಿನ ಪೀಳಿಗೆಗೆ ಉತ್ತಮ ದಾರಿ ನಿರ್ಮಾಣವಾಗುತ್ತದೆ.

ಸಮಾಜದ ಏಕತೆ ಕೇವಲ ಸಭೆ–ಸಮಾರಂಭಗಳಿಂದ ಬರುವುದಿಲ್ಲ. ಸಂಕಷ್ಟದಲ್ಲಿರುವವರ ಮನೆ ಬಾಗಿಲಿಗೆ ನೆರವು ತಲುಪಿದಾಗ, ಬಡ ವಿದ್ಯಾರ್ಥಿಯೊಬ್ಬನಿಗೆ ಶಿಕ್ಷಣದ ಬೆಳಕು ದೊರಕಿದಾಗ, ರೈತನೊಬ್ಬನ ಕಷ್ಟಕ್ಕೆ ಸ್ಪಂದಿಸಿದಾಗ ಮಾತ್ರ ನಿಜವಾದ ಸಮಾಜ ಸೇವೆ ಅರ್ಥಪೂರ್ಣವಾಗುತ್ತದೆ.

ಹೀಗಾಗಿ ಅಧಿಕಾರ, ಸಂಪತ್ತು ಮತ್ತು ಪ್ರಭಾವ ಹೊಂದಿರುವ ರೆಡ್ಡಿ ಸಮಾಜದ ಮುಖಂಡರು ಕಟ್ಟ ಕಡೆಯ ಜನರ ನೋವಿಗೆ ಸ್ಪಂದಿಸಿ ಸೇವಾಭಾವದಿಂದ ಮುಂದಾದಾಗ ಮಾತ್ರ ರೆಡ್ಡಿ ಕುಲದ ಗೌರವ ಮತ್ತಷ್ಟು ಎತ್ತರಕ್ಕೆ ಏರಲಿದೆ.



ಬೀದರ: ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ರವಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ, ರೆಡ್ಡಿ ಸಮಾಜದ ಜಿಲ್ಲಾಧ್ಯಕ್ಷ ಶಂಕರರೆಡ್ಡಿ ಶೇರಿಕಾರ, ಓಂ ರೆಡ್ಡಿ ತಿರುಮಲಾ, ಬಲವಂತರೆಡ್ಡಿ, ರಾಜರೆಡ್ಡಿ ಚಿನ್ನಾರೆಡ್ಡಿ, ವಿಠಲರೆಡ್ಡಿ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು.

## ಡಾ.ಡಿ.ಸುಧಾಕರ್ ನಿಧನಕ್ಕೆ ಸಂತಾಪ

**ಬೀದರ:** ಹಿರಿಯೂರು ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವರು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಡಿ.ಸುಧಾಕರ್ ಅವರ ಅಕಾಲಿಕ ನಿಧನಕ್ಕೆ ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಭಗವಂತನು ಮೃತರ ಆತ್ಮ–ಕ್ಕೆ ಶಾಂತಿ ನೀಡಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದ ಸದಸ್ಯರಿಗೆ, ಬೆಂಬಲಿಗರಿಗೆ ಮತ್ತು ಹಿರಿಯೂರು ಕ್ಷೇತ್ರದ ಜನತೆಗೆ ನೀಡಲಿ ಎಂದು ಪ್ರಾರ್ಥಿಸುತ್ತೇನೆಂದು ಸಚಿವರು ತಮ್ಮ ಸಂತಾಪದಲ್ಲಿ ತಿಳಿಸಿದ್ದಾರೆ.

## ಹೇಮರೆಡ್ಡಿ ಮಲ್ಲಮ್ಮ ಅವರ ಜನ್ಮೋತ್ಸವ



**ಇಸ್ಲಾಂಪೂರ:** ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಲ್ಲಮ್ಮ ತಾಯಿಯ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು. ಮಹಿಳೆಯರು ಆರತಿ ಬೆಳಗಿ ಪೂಜೆ ಸಲ್ಲಿಸಿದರೆ, ಯುವಕರು ಜಯಘೋಷಗಳ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಕಳೆ ತಂದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಭಜನಾ ಕಾರ್ಯಕ್ರಮಗಳು ಜನರ ಗಮನ ಸೆಳೆದವು.

ಕಾರ್ಯಕ್ರಮದಲ್ಲಿ ಮಾತನಾಡಿದ ಗಣ್ಯರು, ಹೇಮರೆಡ್ಡಿ ಮಲ್ಲಮ್ಮ ತಾಯಿ ಸಮಾಜಕ್ಕೆ ಸತ್ಯ, ಸೇವೆ ಮತ್ತು ಭಕ್ತಿಯ ಸಂದೇಶ ಸಾರಿದ ಮಹಾನ್ ಶಿವಶರಣೆ ಎಂದು ತಿಳಿಸಿದರು. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು, ಯುವಕರು, ಮಹಿಳೆಯರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಅಂಬೇಡ್ಕರ್‌ರಿಂದ ಮಹಿಳೆಯರಿಗೆ ಆರ್ಥಿಕ, ಸಾಮಾಜಿಕ ಸಮಾನತೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಚತುರ್ವರ್ಣ ಪದ್ಧತಿ ಮತ್ತು ಮನಸ್ಮೃತಿ ಸಿದ್ಧಾಂತದಿಂದಾಗಿ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯಿಂದ ವಂಚಿತ ಮಹಿಳೆಯರಿಗೆ ಸ್ವಾಭಿಮಾನದ ಬದುಕು ನೀಡಿದವರು ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣ, ಸಂವಿಧಾನ ಶಿಲ್ಪಿ ಅಂಬೇಡ್ಕರರು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ–ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶನಿವಾರ ಇಲ್ಲಿನ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟನೆ ಮತ್ತು ನೂತನವಾಗಿ ನೇಮಕವಾದ 1,036 ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಮಹಿಳೆಯರಿಗೆ ಸಮಾನ ಹಕ್ಕು ದೊರಕಿಸಿಕೊಡಲು ಆ ಕಾಲದಲ್ಲೇ ಬಸವಣ್ಣನವರು ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಮಾನವಾದ ಅವಕಾಶ ನೀಡಿದ್ದರು ಎಂದರು.

ಮಹಿಳೆಯರು ಘನತೆಯ ಬದುಕು ಸಾಗಿಸಲು ಅನುವಾಗುವಂತೆ ಮಹಿಳೆಯರಿಗೂ ತಂದೆ ಆಸ್ತಿಯಲ್ಲಿ ಪಾಲು ನೀಡಬೇಕು. ವಿಚ್ಛೇದನಕ್ಕೆ ಅವಕಾಶ ಮಾಡಿಕೊಡಬೇಕು ಎಂಬಿತ್ಯಾದಿ ಹಿಂದು ಕೋಡ್ ಬಿಲ್ ಸಂಸತ್ತಿನಲ್ಲಿ ಪಾಸು ಆಗಿದಿದ್ದಾಗ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದವರು ಅಂಬೇಡ್ಕರರು. ಹನ್ನೆರಡನೇ ಶತಮಾನದಲ್ಲಿಯೂ ಮಹಿಳಾ ಸಮಾನತೆಗೆ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ನೀಲಾಂಬಿಕೆ ಹೀಗೆ ಬಸವಾದಿ ಶರಣರು ಹೋರಾಡಿದರು ಸಹ ಅದು ಕಾರ್ಯರೂಪಕ್ಕೆ



ಬಂದಿರಲಿಲ್ಲ. ಸಂವಿಧಾನದಲ್ಲಿ ಅವಕಾಶ ಮಾಡಿಕೊಟ್ಟ ಪರಿಣಾಮವಾಗಿ ಇಂದು ಮಹಿಳೆಯರು ಆಡಳಿತ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹೀಗೆ ಅನೇಕ ಕ್ಷೇತ್ರದಲ್ಲಿ ಪುರುಷನಿಗೆ ಸಮಾನವಾಗಿ ಬೆಳೆಯಲು ಸಾಧ್ಯವಾಗಿದೆ. ಹೆರಿಗೆ ರಜೆ, ಎಂಟು ಗಂಟೆ ಕೆಲಸ ಇವೆಲ್ಲ ಅಂಬೇಡ್ಕರ್ ಜಾರಿಗೆ ತಂದ ಕಾರ್ಮಿಕ ಸುಧಾರಣೆ ಕಾಯ್ದೆಗಳ ಪ್ರತಿಫಲ ಎಂದರು.

ನಮ್ಮ ಸರ್ಕಾರ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕೆ ಮತ್ತು ಆರ್ಥಿಕ ಸ್ಥಿರತೆಗೆಂದೆ ಪಂಚ ಗ್ಯಾರಂಟಿ ಯೋಜನೆಗಳನು ಜಾರಿಗೆ ತಂದಿದ್ದೇವೆ. ಆದರೆ ವಿರೋಧ ಪಕ್ಷಗಳು ಇವು ಬಿಟ್ಟಿ ಭಾಗ್ಯ ಎಂದು ವಿರೋಧ ಮಾಡುತ್ತಿದಾರೆ. ಮೋದಿ ಸರ್ಕಾರ ಬಂಡವಾಳ ಶಾಹಿಗಳಿಗೆ 10 ಲಕ್ಷ ಕೋಟಿ ಸಾಲ ಮನ್ನಾ ಮಾಡಿದನ್ನು ಚಕಾರ ಎತ್ತದ ಇವರು, ಜನರ ಹಣ ಜನರಿಗೆ ನೀಡಿದರೆ ಇವರಿಗೆ ಸಹಿಸಲು ಆಗುತ್ತಿಲ್ಲ ಎಂದು ವಿರೋಧ ಪಕ್ಷದ ನಡೆಗೆ ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಗೃಹಲಕ್ಷ್ಮಿ ಹಾಗೂ ಶಕ್ತಿ ಯೋಜನೆಗಳನ್ನು ನಾರಿಯರ ಸಲುವಾಗಿಯೇ ಜಾರಿಗೆ ತರಲಾಗಿದೆ. ಇದರಿಂದಾಗಿ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಅವರನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಅಂಗನವಾಡಿ ಕಾರ್ಯಕತೆ–ಯರ ಕೆಲಸ ಸುಲಭವಲ್ಲ. ಅಂಗನಾಡಿ ಕೇಂದ್ರಗಳು ಮಕ್ಕಳ ಜೀವನದ ಅಡಿಪಾಯಗಳಾಗಿರುತ್ತವೆ ಹಾಗೂ ಅವರಿಗೆ ಭವಿಷ್ಯ ರೂಪಿಸುವ ಕೇಂದ್ರಗಳಾಗಿವೆ. ಇದೂವರೆಗೆ ಜಿಲ್ಲೆಯಲ್ಲಿ 313 ಬಾಲಕಿಯರ ಬಾಲ್ಯವಿವಾಹವನ್ನು ತಪ್ಪಿಸಲಾಗಿದೆ ಎಂದರು.

**ಶೀಘ್ರ ಡೇ ಕೇರ್ ಆರಂಭ:** ವಿಶೇಷಚೇತನ ಮಕ್ಕಳನ್ನು ನೋಡಿಕೊಳ್ಳಲೆಂದೆ ಕಲಬುರಗಿ ನಗರದಲ್ಲಿ ಶೀಘ್ರದಲ್ಲಿಯೇ ಡೇ ಕೇರ್ ಸೆಂಟರ್ ಆರಂಭಿಸಲಾಗುತ್ತಿದೆ. ಇದರಿಂದ ಪಾಲಕ–ಪೋಷಕರು ತಮ್ಮ ವಿಕಲಾಂಗ ಮಕ್ಕಳನ್ನು ದಿನದಲ್ಲಿ ಇಲ್ಲಿ ಬಿಟ್ಟು ಕೆಲಸಕ್ಕೆ ಹೋಗಬಹುದಾಗಿದೆ. ಮಕ್ಕಳನ್ನು ನೋಡಿಕೊಳ್ಳಲು ಕೇರ್ ಟೇಕರ್ಸ್ ಇರಲಿದ್ದಾರೆ. ನಗರದಲ್ಲಿ ರಾಜ್ಯ ಮಹಿಳಾ ವಸತಿ ನಿಲಯ ಕಟ್ಟಡ ಸಹ ಹಳೆಯಾದಾಗಿದ್ದು, ಹೊಸ ಕಟ್ಟಡ ಮಂಜೂರು ಮಾಡಿಸಿಕೊಡಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.

ಎಂ.ಎಲ್.ಸಿ ತಿಪ್ಪಣ್ಣಪ್ಪ ಕಮಕನೂರು ಮಾತನಾಡಿ ಡಾ.ಅಂಬೇಡ್ಕರ್ ಅವರು ನೀಡಿದ ಸೌಲಭ್ಯವನ್ನು ಸಮರ್ಪಕವಾಗಿ ಜನಸಾಮಾನ್ಯರಿಗೆ ತಲುಪಿಸಿದ ಕೀರ್ತಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಸಲ್ಲಬೇಕು. ಅಂಬೇಡ್ಕರ್ ಅವರ ರಥವನ್ನು ಪ್ರಿಯಾಂಕ್ ಖರ್ಗೆ ಮುಂದೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಸಚಿವರ ಕೆಲಸ ಕಾರ್ಯಗಳನ್ನು ಕೊಂಡಾಡಿದರು. ಜನರ ಪರವಾಗಿ ನಿರಂತರವಾಗಿ ಕೆಲಸ ಮಾಡುವ ಹಿರಿಯ ನಾಯಕರಾದ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಹೊಸ ಹೊಸ ಯೋಜನೆಗಳನ್ನು ಜಿಲ್ಲೆಗೆ ತಂದಿದ್ದಾರೆ. ಆರ್ಟಿಕಲ್ 371(ಜೆ) ಜಾರಿಗೆ ತಂದ ಪರಿಣಾಮ ಈ ಭಾಗದ ಬಡವರ, ದಲಿತರ ಮಕ್ಕಳು ವೈದ್ಯರು, ಇಂಜಿನೈರ್‌ಗಳಾಗಿದ್ದಾರೆ. ಅವರ ಸಮಾಜ ಸೇವೆಯನ್ನು ಪರಿಗಣಿಸಿ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

**ದಾನಿಗಳಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಸನ್ಮಾನ:** ಅಂಗನವಾಡಿ ಕೇಂದ್ರಕ್ಕೆ ಉಚಿತ ಭೂಮಿ ನೀಡಿದ ನಿವೇಶನ ಮಾಲೀಕರಾದ ಮಾಲಾಶ್ರೀ ಶಿವಮೂರ್ತಿ ಮೇಲಕೇರಿ, ರೇವಣಸಿದ್ದಪ್ಪ ದುಕಾನದಾರ ಅವರಿಗೆ ಸಚಿವ ಪ್ರಿಯಾಂಕ್ ಖರ್ಗೆ ಆದಿಯಾಗಿ ಗಣ್ಯರು ವಿಶೇಷ ಸನ್ಮಾನ ಮಾಡಿ ಗೌರವಿಸಿದರು.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಕರ್ನಾಟಕ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸೈಯದ್ ಮಹೆಬೂಬ್ ಚಿಸ್ತಿ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಮೇಯರ್ ವರ್ಷಾ ರಾಜೀವ ಜಾನೆ, ಉಪ ಮೇಯರ್ ತೃಪ್ತಿ ಲಾಖೆ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಡಿಸಿಪಿ ಶಾಲೂ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ ಸೇರಿದಂತೆ ತಾಲೂಕಾ ಸಿ.ಡಿ.ಪಿ.ಓ.ಗಳು, ಅಧಿಕಾರಿ–ಸಿಬ್ಬಂದಿಗಳು, ಅಂಗನವಾಡಿ ಕಾಯಕರ್ತೆಯರು ಇದ್ದರು.

# ಪುರಸಭೆ ವತಿಯಿಂದ ಹೇಮರೆಡ್ಡಿ ಜಯಂತಿ



• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ಪಟ್ಟಣದ ಪುರಸಭೆ ವತಿಯಿಂದ ಹೇಮರೆಡ್ಡಿ ಜಯಂತಿಯನ್ನು ಭಕ್ತಿಭಾವ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಹೇಮರೆಡ್ಡಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಅವರ ಸಮಾಜಮುಖಿ ಚಿಂತನೆಗಳು, ಸೇವಾಭಾವ ಮತ್ತು ಆದರ್ಶ ಜೀವನದ ಕುರಿತು ಗಣ್ಯರು ಮಾತನಾಡಿದರು.

ಈ ಸಂದರ್ಭದಲ್ಲಿ ನಿಕಟಪೂರ್ವ ಪುರಸಭೆ ಅಧ್ಯಕ್ಷರಾದ ಶ್ರೀ ಮರಿರಾಮಣ್ಣ ಅವರು ಮಾತನಾಡಿ, ಮಹನೀಯರ ಆದರ್ಶಗಳು ಇಂದಿನ ಯುವಜನತೆಗೆ ಪ್ರೇರಣೆಯಾಗಬೇಕು ಎಂದು ತಿಳಿಸಿದರು. ಸಮಾಜದ ಏಕತೆ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳನ್ನು ಉಳಿಸಿಕೊಳ್ಳುವಲ್ಲಿ ಹೇಮರೆಡ್ಡಿಯವರ ಕೊಡುಗೆ ಅಪಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕೋರಿ ಗೋಣಿಬಸಪ್ಪ, ಸಿಖಂದರ್, ಹುಚ್ಚಪ್ಪ, ಬಾಳಪ್ಪ, ಗುಂಡ್ರು ಹನುಮಂತಪ್ಪ, ಕೃಷ್ಣನಾಯಕ್, ವಿಜಯ್ ಹೆಚ್.ಎಂ. ಸೇರಿದಂತೆ ಅನೇಕ ಹಿರಿಯರು, ಪುರಸಭೆ ಸದಸ್ಯರು ಹಾಗೂ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿದರು.

# ಪತ್ನಿಗೆ ಪತಿಯಿಂದ ಮತಾಂತರಕ್ಕೆ ಒತ್ತಾಯ

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ತಾಲೂಕಿನ ಗೋವಿಂದ ತಾಂಡಾದ ಮಹಿಳೆಯೊಬ್ಬಳಿಗೆ ತನ್ನ ಪತಿಯೇ ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳುವಂತೆ ಒತ್ತಾಯ ಮಾಡಿ ಕಿರುಕುಳ ನೀಡಿದ ಘಟನೆ ಪಕ್ಕದ ತೆಲಂಗಾಣ ರಾಜ್ಯದ ಮೊಗಡಮಪಲ್ಲಿ ಬಳಿಯ ಇಟ್ಟುನಾಯಕ ತಾಂಡಾದಲ್ಲಿ ಜರುಗಿದೆ. ಇಟ್ಟುನಾಯಕ ತಾಂಡಾದ ಬಲರಾಮ ಎಂಬ ಯುವಕನಿಗೆ ತಾಲೂಕಿನ ಗೋವಿಂದ ತಾಂಡಾದ ಯುವತಿ ಅರ್ಚನಾಳನ್ನು ಎರಡು ವರ್ಷಗಳ ಹಿಂದೆ ಗೋವಿಂದ ತಾಂಡಾದಲ್ಲಿ ಮದುವೆ ಮಾಡಿಕೊಡಲಾಗಿತ್ತು.

ಬಲರಾಮ ಮದುವೆ ಬಳಿಕ ತಾನು ಮದುವೆಗಿಂತ ಮೊದಲೇ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದ್ದೇನೆ ನನ್ನ ಹೆಸರು ಸಮೀರ ಎಂದು ಅರ್ಚನಾಳಿಗೆ ಹೇಳಿದ್ದ ಮತ್ತು ನೀನೂ ಕೂಡ ಇಸ್ಲಂ ಧರ್ಮಕ್ಕೆ ಮತಾಂತರವಾಗಬೇಕು ಎಂದು ಒತ್ತಾಯಿಸುತ್ತಿದ್ದ ಸ್ವಲ್ಪ ದಿನಗಳ ಬಳಿಕ ಅರ್ಚನಾಳ ಕೊರಳಿಗೆ ಆಕೆಯ ಗಂಡ ಸಮೀರ ಯಾವುದೋ ತಾಯಿತ ಹಾಕಿದ್ದಾನೆ. ಇವರಿಗೆ ಒಂದು ಗಂಡು ಮಗು ಜನಿಸಿದ್ದು. ಮಗುವಿಗೆ 9 ತಿಂಗಳಾದ ಬಳಿಕ ಮುಸ್ಲಿಂ ಪದ್ಧತಿಯಂತೆ ಖತನಾ ಮಾಡಿಸಲು ತಂದೆ ಸಮೀರ ಇದೇ ಮೇ 10ರಂದು ಆಯ್ಕೆ ಮಾಡಿದ್ದ.



ಈ ವಿಷಯ ಹೆಂಡತಿ ಅರ್ಚನಾಗೆ ತಿಳಿದು ಆಕೆ ಪ್ರತಿಭಟಿಸಿದಾಗ ಕುತ್ತಿಗೆ ಕಡಿದಾದರೂ ಸರಿ ಖತನಾ ಮಾಡಿಸುತ್ತೇನೆ ಎಂದು ಹೆದರಿಸಿದ್ದಾನೇ ಎಂದು ತಿಳಿಸಿದ್ದಾಳೆ. ತನ್ನ ಜೀವಕ್ಕೆ ಅಪಾಯ ಮನಗಂಡ ಅರ್ಚನಾ ಅಲ್ಲಿಂದ ತನ್ನ ಮಗುವಿಗೆ ಗಂಡನ ಮನೆಯಲ್ಲಿಯೇ ಬಿಟ್ಟು ಒಬ್ಬಳೆ ತವರೂರಾದ ಗೋವಿಂದ ತಾಂಡಾಕ್ಕೆ ಎರಡು ದಿನಗಳ ಹಿಂದೆ ಬಂದು ತನಗೆ ಆದ ನೋವನ್ನು ತಾಂಡಾದವರಿಗೆ ತಿಳಿಸಿದ್ದಾಳೆ. ಈ ಘಟನೆ ಕುರಿತು 112ಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಕೂಡಲೇ ಚಿಟಗುಪ್ಪ ಪೊಲೀಸ್ ಠಾಣೆಯ ಬಸಲಿಂಗಪ್ಪ ಗೋಧಿಹಾಳ ಹಾಗೂ ಪೊಲೀಸ್ ಸಿಬ್ಬಂದಿಯವರು ತಾಂಡಕ್ಕೆ ಬಂದು ಘಟನೆ ಕುರಿತು ಮಾಹಿತಿ ಪಡೆದು, ಹೆಚ್ಚಿನ ಮಾಹಿತಿಗಾಗಿ ಚಿಟಗುಪ್ಪ ಪೊಲೀಸ್ ಠಾಣೆಯಲ್ಲಿ ಎರೆಡು ಕುಟುಂಬಸ್ಥರೊಂದಿಗೆ ವಿಚಾರಣೆ ನಡೆ–ಯುತ್ತಿದೆ. ಶನಿವಾರ ಮಧ್ಯರಾತ್ರಿ ವರೆಗೂ ಈ ಘಟನೆ ಕುರಿತು ಪ್ರಕರಣ ದಾಖಲಾಗಿಲ್ಲ.

# ಚನ್ನಬಸವೇಶ್ವರ ಗುರುಕುಲದಲ್ಲಿ ಅಮ್ಮಂದಿರ ದಿನದ ಅಪರೂಪದ ದೃಶ್ಯ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಪುಳಿಹೋಗರೆ, ಚಿತ್ರಾನ್ನ, ಕೇಸರಿ ಬಾತ್, ಉಪ್ಪಿಟ್ಟು ಹೀಗೆ ಬಗೆಬಗೆಯ ಭೋಜನದೊಂದಿಗೆ ನೂರಾರು ತಾಯಂದಿರು ಮಕ್ಕಳಿಗೆ ಕೈತುತ್ತು ತಿನ್ನಿಸಿ ವಿನೂತನವಾಗಿ ತಾಯಿಂದರ ದಿನ ಆಚರಿಸಿಕೊಂಡರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ



**ಬಾಲ್ಯದಲ್ಲಿ ತಾಯಿ ನೀಡುವ ಕೈತುತ್ತು ಕೇವಲ ಆಹಾರವಲ್ಲ. ಅದರಲ್ಲಿ ಪ್ರೀತಿ, ವಾತ್ಸಲ್ಯ ಹಾಗೂ ಅಂತಃಕರಣ, ಆನಂದ, ಸದ್ಭಾವನೆ ಇರುತ್ತದೆ. ಆದರೆ ಇಂದಿನ ಎಐ ಯುಗದಲ್ಲಿ ಅದೆಲ್ಲವೂ ಮರೆಯಾಗುತ್ತಿದೆ ಎನ್ನುವ ಆತಂಕ ಕಾಡುತ್ತಿದೆ. ಅದರ ನಡುವೆಯು ತಾಯಿಂದರ ದಿನ ಗುರುಕುಲದಲ್ಲಿ ನೂರಾರು ತಾಯಿಂದರು ತಮ್ಮ ಮಕ್ಕಳಿಗೆ ಕೈತುತ್ತು ತಿನ್ನಿಸಿ ಪ್ರೀತಿ, ವಾತ್ಸಲ್ಯ ಮೆರೆದಿರುವುದು ಹೆಮ್ಮೆ ತರಿಸಿದೆ. ಇಂದಿನ ದಿನಮಾನಗಳಲ್ಲಿ ತಾಯಿಂದರು ತಮ್ಮ ಮಕ್ಕಳಿಗೆ ಉತ್ತಮ ಪೌಷ್ಟಿಕ ಆಹಾರ ಉಣಬಡಿಸಿ ಸಮಾಜಕ್ಕೆ ಆರೋಗ್ಯವಂತ ಮಕ್ಕಳನ್ನು ನೀಡಬೇಕು.**

**–ಗುರುಬಸವ ಪಟ್ಟದ್ದೇವರು ಪೀಠಾಧಿಪತಿಗಳು ಹಿರೇಮಠ ಸಂಸ್ಥಾನ ಭಾಲ್ಕಿ**

ಸಮುಚ್ಚಯದಲ್ಲಿ ಭಾನುವಾರ ತಾಯಿಂದರ ದಿನ ಕಾರ್ಯಕ್ರಮದಲ್ಲಿ ಇಂತಹ ವೈಶಿಷ್ಟ್ಯ ಮನೆ ಮಾಡಿತ್ತು. ತಾಯಿಂದರ ದಿನ ನಿಮಿತ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಾಯಿಂದರು ಮಕ್ಕಳೊಂದಿಗೆ ಬೆರತು ಖುಷಿ ಪಟ್ಟರು.

ತಾವೇ ಮನೆಯಿಂದ ತಯಾರಿಸಿದ ಬಗೆಬಗೆಯ ಊಟ, ತಿನಿಸುಗಳನ್ನು ದೊಡ್ಡ ಡಬ್ಬಿಯಲ್ಲಿ ತಂದು ಇಡೀ ಮಕ್ಕಳ ಗುಂಪುಗಳಿಗೆ ನೀಡಿದ ತಾಯಂದಿರು, ತಮ್ಮ ಮಕ್ಕಳೊಂದಿಗೆ ಅವರ ಸ್ನೇಹಿತರಿಗೂ ಊಟ ಬಡಿಸಿದ್ದು, ವಿಶೇಷವಾಗಿತ್ತು.

ಈ ವಿನೂತನ ಕಾರ್ಯಕ್ರಮಕ್ಕೆ ಕದಳಿ ವಸತಿ ನಿಲಯದ ಮೇಲ್ವಿಚಾರಕಿ ಪ್ರೇಮಾ, ವಾರ್ಡನ್ ಸಪ್ನಾ, ಲಕ್ಷ್ಮಿ, ಮಹಾದೇವಿ, ಕಾವ್ಯ, ಮಹಾದೇವಿ, ದೀಕ್ಷಾ, ನಾಗರತ್ನ, ಭಾಗಿರಥಿ, ಲಕ್ಷ್ಮಿಬಾಯಿ, ಅಕ್ಷಯ್ಯಾ, ಸುಜಾತಾ, ಪಿಯುಶಾ, ಅಶ್ವಿನಿ ಸೇರಿದಂತೆ ಮುಂತಾದವರು ಸಾಕ್ಷಿಯಾದರು.

# ಸಮಾಜಮುಖಿ ಸುದ್ದಿಗಳ ಪ್ರಸಾರಕ್ಕೆ ಮಾಧ್ಯಮಗಳು ಒತ್ತು ನೀಡಲಿ

• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಕೇಶವ ಕಾರ್ಯ ಸಂವರ್ಧನ ಸಮಿತಿ ಬೀದರ ವತಿಯಿಂದ ನಗರದಲ್ಲಿ ನಾರದ ಜಯಂತಿ ಕಾರ್ಯಕ್ರಮವನ್ನು ಶನಿವಾರ ಆಯೋಜಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಶ್ವವಾಣಿ ದಿನಪತ್ರಿಕೆಯ ಜಿಲ್ಲಾ ವರದಿಗಾರರಾದ ಶ್ರೀ ಚನ್ನಬಸವ ಮೊಕ್ತೆದಾರ್ ಅವರು ಮಾತನಾಡಿ, "ನಮ್ಮ ಮೇಲಿನ ಅಪಾರ ಗೌರವದಿಂದ ನಮ್ಮ ಹೆಸರಿನಲ್ಲಿ ನಾರದ ಜಯಂತಿ ಆಚರಿಸುತ್ತಿರುವುದು ಅತ್ಯಂತ ಸಂತಸದ ವಿಷಯ" ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ವಕ್ತಾರರಾದ ಶ್ರೀ ಕೃಷ್ಣ ಜೋಶಿ ಅವರು ನಾರದ ಮಹರ್ಷಿಗಳ ವ್ಯಕ್ತಿತ್ವ ಹಾಗೂ ಮಾಧ್ಯಮ ಕ್ಷೇತ್ರದ ಜವಾಬ್ದಾರಿಗಳ ಕುರಿತು ಉಪನ್ಯಾಸ ನೀಡಿದರು. ತ್ರಿಲೋಕ ಸಂಚಾರಿಯಾಗಿದ್ದ ಮಹರ್ಷಿ ನಾರದರು ಲೋಕಕಲ್ಯಾಣಕ್ಕಾಗಿ ಎಲ್ಲೆಡೆ ಸುದ್ದಿಯನ್ನು ತಲುಪಿಸುವ ಕಾರ್ಯ ನಿರ್ವಹಿಸಿದ್ದರು ಎಂದು ಹೇಳಿದರು. ಸಾಮಾನ್ಯವಾಗಿ ನಾರದರನ್ನು "ಕಲಹಪ್ರಿಯ"



ಎಂದು ಅರ್ಥೈಸಿಕೊಳ್ಳಲಾಗುತ್ತದಾದರೂ, ಅವರು ಧರ್ಮ ಸಂಸ್ಥಾಪನೆಗಾಗಿ ಸತ್ಯಸುದ್ದಿಗಳನ್ನು ಹರಡುವ ಕಾರ್ಯ ಮಾಡುತ್ತಿದ್ದರು ಎಂದು ತಿಳಿಸಿದರು.

18 ಪುರಾಣಗಳಲ್ಲಿ ಒಂದಾದ ನಾರದಪುರಾಣದಲ್ಲಿ ಮಾಧ್ಯಮಗಳ ಜವಾಬ್ದಾರಿಗಳ ಕುರಿತು ಮಹತ್ವದ ವಿಚಾರಗಳು ಉಲ್ಲೇಖಗೊಂಡಿವೆ. ನಾರದರು ನೀಡಿದ 84 ಭಕ್ತಿ ಸೂತ್ರಗಳಲ್ಲಿ ಸಮಾಜಕ್ಕೆ ಯಾವ ರೀತಿಯ ಸಂದೇಶಗಳನ್ನು ತಲುಪಿಸಬೇಕು ಎಂಬುದರ ಬಗ್ಗೆಯೂ ಸ್ಪಷ್ಟ ಮಾರ್ಗದರ್ಶನವಿದೆ ಎಂದು ವಿವರಿಸಿದರು.

1826ರಲ್ಲಿ ಆರಂಭವಾದ ಭಾರತದ ಮೊದಲ ಪತ್ರಿಕೆ "ಉದ್ಧಂತ ಮಾರ್ತಂಡ" ಪತ್ರಿಕೆಯ ಸಂಪಾದಕೀಯದಲ್ಲಿಯೂ ನಾರದ ಮಹರ್ಷಿಗಳ ಉಲ್ಲೇಖವಿದ್ದು, ಮೇ 30ರಂದು ನಾರದ ಜಯಂತಿಯ ದಿನವೇ ಆ ಪತ್ರಿಕೆ ಆರಂಭಗೊಂಡಿತ್ತು ಎಂದು ಹೇಳಿದರು.

ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರಿಗೆ ಎಲ್ಲಾ ಕ್ಷೇತ್ರಗಳ ಮಾಹಿತಿಗಳು ಲಭ್ಯವಾಗುತ್ತವೆ. ಆದ್ದರಿಂದ ಪ್ರಕೃತಿಗೆ ಪೂರಕವಾಗಿರುವ ಹಾಗೂ ಸಮಾಜದ ಸ್ವಾಸ್ಥ್ಯ ಕಾಪಾಡುವ ಸುದ್ದಿಗಳನ್ನು ಪ್ರಸಾರ ಮಾಡುವುದು ಇಂದಿನ ಮಾಧ್ಯಮಗಳ ಜವಾಬ್ದಾರಿಯಾಗಿದೆ. ಸಮಾಜದಲ್ಲಿ ಕಲಹ ಹುಟ್ಟಿಸುವ ಸುದ್ದಿಗಳ ಬದಲು ಜನರನ್ನು ಒಗ್ಗೂಡಿಸುವ ಮತ್ತು ಸಮಾಜಮುಖಿ ಚಿಂತನೆ ಬೆಳೆಸುವ ಸುದ್ದಿಗಳಿಗೆ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ನಾಗೇಶ್ ಚಿನ್ನಾರೆಡ್ಡಿ ವಹಿಸಿದ್ದರು. ವಿಭಾಗ ಸಂಘ ಚಾಲಕರಾದ ಶ್ರೀ ಹನುಮಂತರಾವ್ ಪಾಟೀಲ್, ವಿಭಾಗ ಪ್ರಚಾರಕರಾದ ಶ್ರೀ ವಿಜಯ್ ಮಹಾಂತೇಶ್ ಸೇರಿದಂತೆ ನಗರದ ಹಲವು ಗಣ್ಯರು ಉಪಸ್ಥಿತರಿದ್ದರು.

ಶಿವಕಾಂತ್ ಪಾಟೀಲ್ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಸತೀಶ್ ಪಾಂಚಾಳ ಸ್ವಾಗತಿಸಿ ಪರಿಚಯಿಸಿದರು. ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎನ್. ಕೃಷ್ಣಾರೆಡ್ಡಿ ವಂದಿಸಿದರು.

# ಶಿಸ್ತುಬದ್ಧ ಪೂರ್ವಸಿದ್ಧತೆ ಯಶಸ್ಸಿನ ಗುಟ್ಟು



• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಶಿಸ್ತುಬದ್ಧ ಪೂರ್ವಸಿದ್ಧತೆ ಇದ್ದರೆ ಮಾತ್ರ ಯಶಸ್ಸು ಕೈಗೂಡುತ್ತದೆ. ಹೀಗಾಗಿ, ಪೂರ್ವಸಿದ್ಧತೆಯೇ ಯಶಸ್ಸಿನ ಗುಟ್ಟು ಎಂಬುದನ್ನು ವಿದ್ಯಾರ್ಥಿಗಳು ಮನದಟ್ಟು ಮಾಡಿಕೊಳ್ಳಬೇಕು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಸಚಿನ್ ಪೋತನಕರ್ ಕಿವಿಮಾತು ಹೇಳಿದರು.

ಇಲ್ಲಿನ ಜೇವರ್ಗಿ ಕಾಲೊನಿಯ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದಿಂದ ಬಿ.ಎ. ಅಂತಿಮ ವರ್ಷದ ಅರ್ಥಶಾಸ್ತ್ರ ವಿದ್ಯಾರ್ಥಿನಿಯರಿಗಾಗಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ವಿದ್ಯಾರ್ಹತೆ ಮಾತ್ರ ನಮಗೆ ಯಶಸ್ಸು ತಂದುಕೊಡುತ್ತದೆ ಎನ್ನುವಂತಿಲ್ಲ. ವಿದ್ಯಾರ್ಹತೆಯ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಶಿಸ್ತುಬದ್ಧವಾದ ಅಧ್ಯಯನ ಕೈಗೊಳ್ಳುವುದರಿಂದ ಉತ್ತಮ ಹುದ್ದೆಗಳನ್ನು ಪಡೆಯಲು ಸಾಧ್ಯವಿದೆ ಎಂದರು. ಕಲ್ಯಾಣ ಕರ್ನಾಟಕ ಭಾಗಕ್ಕೆ ಸಂವಿಧಾನದ 371 (ಜೆ) ಅನುಚ್ಛೇದ ದೊರಕಿರುವುದರಿಂದ ಈ ಭಾಗದ ಮೆರಿಟ್ ವಿದ್ಯಾರ್ಥಿಗಳಿಗೆ ಉದ್ಯೋಗ ಖಾತ್ರಿ ಬಹುತೇಕ ದೊರಕಿದಂತಾಗಿದೆ. ಏನಿದ್ದರೂ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಪ್ರದರ್ಶನ ನೀಡಲು ಶಿಸ್ತುಬದ್ಧ ಅಧ್ಯಯನದ ಜೊತೆಗೆ ಅಧ್ಯಯನದಲ್ಲಿ ನಿರಂತರತೆ ಕಾಯ್ದುಕೊಳ್ಳಬೇಕೆಂದು ಅವರು ಸಲಹೆ ನೀಡಿದರು.

ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಜ್ಯೋತಿ ಕೆ.ಎಸ್. ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮೋರಗೆ ಪ್ರಕಾಶ ಅಧ್ಯಕ್ಷತೆ ವಹಿಸಿದ್ದರು.

ಅರ್ಥಶಾಸ್ತ್ರ ವಿಭಾಗದ ಡಾ.ವಿಜಯಕುಮಾರ ಹೆಬ್ಬಾಳ್ಕರ್, ಡಾ.ಸುನಂದಾ, ಡಾ.ಮಲ್ಲಪ್ಪ ದಂಡಗುಂಡ, ಡಾ.ರಾಜಕುಮಾರ ಕಟ್ಟಿಮನಿ, ಡಾ.ರಾಜಕುಮಾರ ಕುರಣೆ, ಡಾ.ಶೋಭಾ ರಾಠೋಡ ಹಾಗೂ ಬಿ.ಎ. ಅಂತಿಮ ವರ್ಷದ ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿನಿಯರಾದ ಸುಪ್ರಿಯಾ ಸ್ವಾಗತಿಸಿದರೆ, ಶ್ರೀದೇವಿ ನಿರೂಪಿಸಿದರು. ಅಕ್ಷತಾ ವಂದಿಸಿದರು.

# ತಾಲೂಕು ದಂಡಾಧಿಕಾರಿಗಳ ಕಚೇರಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಮೇ.10: ತಾಲೂಕಿನ ತಾಲೂಕು ದಂಡಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಿದ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ ಮಾಡಿದರು ಹೇಮರೆಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ತಾಲೂಕು ದಂಡಾಧಿಕಾರಿಗಳು ಪುಷ್ಪಾರ್ಚನೆ ಮಾಡಿದರು. ನಂತರ ತಾಲೂಕು ದಂಡಾಧಿಕಾರಿಗಳ ಮಾತನಾಡಿ ಹೇಮರೆಡ್ಡಿ ಮಲ್ಲಮ್ಮ 14 ನೇ ಶತಮಾನದಲ್ಲಿ ಮಹಿಳಾ ಸಂತರಾಗಿದ್ದರು. ಕರ್ನಾಟಕ ಸರ್ಕಾರವು ಪ್ರತಿ ವರ್ಷ ಮೇ 10 ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಆಚರಿಸುತ್ತದೆ. ಮಾಹಿತಿ ತಿಳಿಸಿದರು

ಈ ಸಂದರ್ಭದಲ್ಲಿ ಕಂಪ್ಲಿ ತಾಲೂಕಿನಲ್ಲಿ ಹೇಮರೆಡ್ಡಿ ಮಲ್ಲಮ್ಮ ಸಮಾಜದ ಹಿರಿಯ ಮುಖಂಡರು ಯುವಕರು ಹಾಗೂ ತಾಲೂಕು ಆಡಳಿತ ಸಿಬ್ಬಂದಿಗಳು ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಹದಗೆಟ್ಟ ರಸ್ತೆ ದುರಸ್ತಿಗೆ ಸಾರ್ವಜನಿಕರ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

ಮೇ.10: ಮಾರುತಿ ಕ್ಯಾಂಪ್ ನಿಂದ ತುಸು ದೂರದಲ್ಲಿ ಇರುವ ಏಳುಬೆಂಚೆ ಗ್ರಾಮಕ್ಕೆ ತೆರಳುವ ಮಾರ್ಗದ ಎರಡು ಕೀಲೋ ಮೀಟರ್ ರಸ್ತೆ ತೆಗ್ಗು ದಿನ್ನೆಗಳಿಂದ ಕಲ್ಲುಗಳು ತೆಲಿದ್ದು ಸಂಪೂರ್ಣ ಹಾಳಾಗಿ ವಾಹನಗಳ ಸಂಚಾರಕ್ಕೆ ಹರಸಾಹಸ ಪಡುವಂತಾಗಿದೆ ಎನ್ನುವುದು ವಾಹನ ಸವಾರರ ಮಾತಾಗಿದೆ. ಕಲ್ಲು ಬಿಂಚೆಗಳು ತೇಲಿ ಹದ್ವಾನವಾದ ರಸ್ತೆ, ಆಯತಪ್ಪಿದರೆ ಅಪಾಯ... ಪ್ರತಿನಿತ್ಯ ಸಾಕಷ್ಟು ವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತಿದ್ದು ರಸ್ತೆಯ ಅವ್ಯವಸ್ಥೆಯಿಂದಾಗಿ ಸಕಾಲಕ್ಕೆ ಪ್ರಯಾಣಿಕರು, ವಿದ್ಯಾರ್ಥಿಗಳು, ಸಾರ್ವಜನಿಕರು . ಪ್ರತಿನಿತ್ಯ ಈ ರಸ್ತೆಯಲ್ಲಿ ವಾಹನ ನಡೆಸುವ ಚಾಲಕರು ಹಿಡಿ ಶಾಪ ಹಾಕುತ್ತಾರೆ. ಇನ್ನು ಮಳೆಗಾಲದಲ್ಲಿ ರಸ್ತೆ ಎಲ್ಲಾ ಕೆಸರು ಗದ್ದೆಯಂತಾಗಿ ಪಾದಚಾರಿಗಳು ಸಂಚರಿಸಲು ತುಂಬಾ ಕಷ್ಟ ಪಡಬೇಕಾಗುತ್ತದೆ. ಏಳುಬೆಂಚೆ ಗ್ರಾಮದಿಂದ ಸಿದ್ದಮ್ಮನಹಳ್ಳಿ ಗೆ ಒಟ್ಟು ಐದು ಕೀಲೋ ಮೀಟರ್ ರಸ್ತೆ ಇದ್ದು ಈಗಾಗಲೇ ಮೂರು ಕೀಲೋ ಮೀಟರ್ ಡಾಂಬರು ರಸ್ತೆ ಹಾಕಲಾಗಿದೆ ಇನ್ನುಳಿದ ಎರಡು ಕೀಲೋ ಮೀಟರ್ ರಸ್ತೆ ದುರಸ್ತಿ ಮಾಡದಿರುವ ಬಗ್ಗೆ ಸಾರ್ವಜನಿಕರು ಇಲಾಖೆ ಆಧಿಕಾರಿಗಳ ಮೇಲೆ ತೀವ್ರ ಆಕ್ರೋಶ ವ್ಯಕ್ತಪಡಿಸುತ್ತದ್ದಾರೆ. ಕೂಡಲೇ ಈ ರಸ್ತೆ ದುರಸ್ತಿ ಕೆಲಸ ಪ್ರಾರಂಭಿಸಿ ಸಾರ್ವಜನಿಕರಿಗೆ ಆನುಕೂಲ ಮಾಡಿಕೊಡುವಂತೆ ಸಾರ್ವಜನಿಕರು ಹಾಗೂ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿ ಆಚರಣೆ: ಶರಣ ಸಂಸ್ಕೃತಿಯ ತತ್ವಗಳು ಇಂದಿನ ಸಮಾಜಕ್ಕೆ ಅತ್ಯಂತ ಅವಶ್ಯಕ



• **ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ**

ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮನವರು ಅಪ್ಪಟ ಶಿವಭಕ್ತೆಯಾಗಿ, ತಾಳ್ಮೆ, ಸದ್ಗುಣ ಹಾಗೂ ಧರ್ಮನಿಷ್ಠೆಯ ಪ್ರತೀಕವಾಗಿದ್ದರು ಎಂದು ರಾಷ್ಟ್ರೀಯ ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಅಭಿಪ್ರಾಯಪಟ್ಟರು.

ಪಟ್ಟಣದ ವೀರರಾಣಿ ಕಿತ್ತೂರು ಚನ್ನಮ್ಮ ವೃತ್ತದಲ್ಲಿ ರಾಷ್ಟ್ರೀಯ ಬಸವಸೈನ್ಯ ಸಂಘಟನೆಯ ವತಿಯಿಂದ ಆಯೋಜಿಸಿದ್ದ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿ ಮಾತನಾಡಿದ ಅವರು,

ಸಂಸಾರದಲ್ಲೇ ಇದ್ದುಕೊಂಡು ಪರಮಾತ್ಮನನ್ನು ಕಾಣಬಹುದು ಎಂಬುದನ್ನು ಹೇಮರಡ್ಡಿ ಮಲ್ಲಮ್ಮನವರು ತಮ್ಮ ಜೀವನದ ಮೂಲಕ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಅವರ ಜೀವನಾದರ್ಶಗಳು ಮತ್ತು ಶರಣ ಸಂಸ್ಕೃತಿಯ ತತ್ವಗಳು ಇಂದಿನ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ. ಇಂದಿನ ಯುವಪೀಳಿಗೆ, ವಿಶೇಷವಾಗಿ ಯುವತಿಯರು, ಅವರ ಸದ್ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

> **ಸಂಸಾರದಲ್ಲೇ ಇದ್ದುಕೊಂಡು ಪರಮಾತ್ಮನನ್ನು ಕಾಣಬಹುದು ಎಂಬುದನ್ನು ಹೇಮರಡ್ಡಿ ಮಲ್ಲಮ್ಮನವರು ತಮ್ಮ ಜೀವನದ ಮೂಲಕ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ.**

ಈ ಸಂದರ್ಭದಲ್ಲಿ ಶ್ರೀಕಾಂತ ಕೊಟ್ರಶೆಟ್ಟಿ, ಮನ್ನಾನ ಶಾಬಾದಿ, ಜಟ್ಟಿಂಗರಾಯ ಮಾಲಗಾರ, ಮಣಿಕಂಠ ಕಲ್ಲೂರ, ಸಂಗಣ್ಣ ಹುಜರತಿ, ಸಂಗಮೇಶ ಮೈಲೇಶ್ವರ, ವಿಜಯರೆಡ್ಡಿ ಬಿಂಜಲಬಾವಿ, ಶಂಕರ ರಜಪೂತ, ಸಂತೋಷ ಕುಳಗೇರಿ, ವಿಠ್ಠಲ ಲಮಾಣಿ, ರಮೇಶ ಪೆಂಟದ, ಸಂಗಮೇಶ ಜಾಲಗೇರಿ, ಅಶೋಕ ಹುಂಡೇಕಾರ, ಸಂತೋಷ ಲಮಾಣಿ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಮೊದಲ ಪ್ರೀತಿ ಬದುಕಿನಲ್ಲಿ ಕಚಗುಳಿ

ಪ್ರತಿಯೊಬ್ಬರ ಜೀವನದಲ್ಲೂ ಕಚಗುಳಿ ಇಟ್ಟಂಥ ಮನಸ್ಸಿನಲ್ಲಿ ಏನೋ ಒಂಥರಾ ಅನುಭವ ನೀಡುವ ಆಕರ್ಷಣೆ ಎಂದೂ ಮರೆಯಲಾಗದು

ಮೊದಲ ಪ್ರೀತಿ ಈ ಪದ ಕೇಳುವಾಗಲೇ ಒಂದು ರೀತಿಯ ಕಚಗುಳಿ ಇಟ್ಟಂತೆ ಅನುಭವ

ಪ್ರತಿಯೊಬ್ಬರ ಜೀವನದಲ್ಲಿ ಪ್ರೀತಿ ಹುಟ್ಟಿರುತ್ತದೆ ಹಾಗೆ ಪ್ರೀತಿಗೆ ವಯಸ್ಸು ಇಲ್ಲ ಕೆಲವೊಬ್ಬರ ಜೀವನದಲ್ಲಿ ಶಾಲಾ ದಿನಗಳಲ್ಲಿ ಪ್ರೀತಿ ಹುಟ್ಟಿರುತ್ತದೆ ಇನ್ನು ಕೆಲವರ ಜೀವನದಲ್ಲಿ ಕಾಲೇಜು ಮೂರು ದಿನಗಳಲ್ಲಿ ಮೊದಲ ಪ್ರೀತಿ ಹುಡುಗ ಹುಡುಗಿಯರ ಅದೇ ಅರಿಯದ ವಯಸ್ಸಿನಲ್ಲಿ ಆಗುವ ಈ ಮೊದಲ ಪ್ರೀತಿ ಮರುಭೂಮಿಯಲ್ಲಿ ಮಳೆ ಬಂದಂತೆ ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳು ಕೈಗೆ ಸಿಗುವಂತೆ ಮತ್ತು ಅಮಾಸೆ ಕತ್ತಲಂತಾದ ಮನಸ್ಸಿಗೆ ಬೆಳದಿಂಗಳನ್ನು ನೀಡುವ ಚಂದಿರನಂತೆ ಈ ಮೊದಲ ಪ್ರೀತಿ ಅನುಭವ ನೀಡುತ್ತದೆ.



ನನಗೆ ಪ್ರೀತಿ ಎಂದರೆ ಏನ್ನು ತಿಳಿದೇ ಇರಲಿಲ್ಲ

ಪ್ರೀತಿ ಯಾವ ರೀತಿ ಆಗುತ್ತದೆ ಎಂದು ತಿಳಿದೇ ಇರಲಿಲ್ಲ ತಿಳಿಯದ ವಯಸ್ಸಿನಲ್ಲಿ ಬಂದು ಹೋದ ಗೆಳತಿ !

ಈ ಗೆಳತಿ ಬಗ್ಗೆ ತಿಳಿಯಲು ನಿಮ್ಮ ಕುತೂಹಲ ಇದೇ ? ಶಾಲೆಗೆ ಹೋಗುವ ಸಮಯಕ್ಕೆ ಆಗೋ ಪ್ರೀತಿ ಇದು ಮನಸ್ಸು ಚಂಚಲ ಆಗುತ್ತಿರುತ್ತದೆ

ಶಾಲೆ ಹೋಗುವ ವಯಸ್ಸಿನಲ್ಲಿ ಜಗತ್ತು ರಂಗುರಂಗಾಗಿ ಕಾಣುತ್ತದೆ ಆ ಸಮಯದಲ್ಲಿ ಮನಸ್ಸಿನಲ್ಲಿ ಹೊಸದೇನೂ ಆಕರ್ಷಣೆ ಆಗುತ್ತದೆ .ತರಗತಿಯಲ್ಲಿ ಆ ಬ್ರಿಲಿಯಂಟ್ ಹುಡುಗನೋ ಅಥವಾ ಸೈಲೆಂಟ್ ಹುಡುಗಿಯನೋ ಮನಸಿನಲ್ಲಿ ತುಂಬಾ ಹತ್ತಿರವಾಗಿ ಬಿಡುತ್ತಾರೆ

ಹಾಗಂತ ಇದು ಪ್ರೀತಿನಾ ?ನೋ ವೇ ಚಾನ್ಸೇ ಇಲ್ಲ ಇದು ಆಕರ್ಷಣೆಯಷ್ಟೇಈ ಮೊದಲ ಪ್ರೀತಿ ಹೇಗಾಗುತ್ತದೆ ಎನ್ನುವುದು ಗೊತ್ತಾಗೋಲ್ಲ, ನೋಡ ನೋಡುತ್ತಾ ಲೇ ಆ ವ್ಯಕ್ತಿ ಇಷ್ಟವಾಗಿಬಿಡುತ್ತಾರೆ ಅವರ ಒಂದು ಸಾಲಿಗೆ ಕಣ್ಣೋಟಕ್ಕೆ ಮನಸ್ಸು ಹಾತೊರೆಯುತ್ತದೆ , ಆದರೆ ಅವರ ಜೊತೆ ಮಾತನಾಡಬೇಕು ಜೊತೆಯಾಗಿರಬೇಕು ಅನಿಸುತ್ತದೆ .ನನಗೆ ಶಾಲೆ ದಿನಗಳ ನನ್ನ ಮೊದಲ ಪ್ರೀತಿ ಆಗಿತ್ತು .ನಾನು ಮೊದ ಮೊದಲು ಹುಡುಗಿಯರನ್ನು ಮಾತನಾಡಿಸಲು ಹೆದರುತ್ತಿದ್ದೆ ಆದರೆ ನಮ್ಮ ಕ್ಲಾಸ್ ನ ಒಂದು ಹುಡುಗಿ ನನ್ನ ಹತ್ತಿರ ಪುಸ್ತಕವನ್ನು ಕೇಳುವ ವಿಚಾರದಲ್ಲಿ ನನ್ನನ್ನು ಮಾತನಾಡಿಸಿದಳು .ಅವಳ ಆ ಮಾತುಗಳು ರಾತ

ಸಿಡಿ ಚನ್ನಕೇಶವ 15ನೇ ವಾರ್ಡ್ ರಾಮಲಿಂಗಮ್ಮ ಗುಡಿ ಹತ್ತಿರ ಕಂಪ್ಲಿ ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆ

ಪ್ರತಿಯೊಬ್ಬರ ಜೀವನದಲ್ಲೂ ಕಚಗುಳಿ ಇಟ್ಟಂಥ ಮನಸ್ಸಿನಲ್ಲಿ ಏನೋ ಒಂಥರಾ ಅನುಭವ ನೀಡುವ ಆಕರ್ಷಣೆ ಎಂದೂ ಮರೆಯಲಾಗದು

ಮೊದಲ ಪ್ರೀತಿ ಈ ಪದ ಕೇಳುವಾಗಲೇ ಒಂದು ರೀತಿಯ ಕಚಗುಳಿ ಇಟ್ಟಂತೆ ಅನುಭವ

ಪ್ರತಿಯೊಬ್ಬರ ಜೀವನದಲ್ಲಿ ಪ್ರೀತಿ ಹುಟ್ಟಿರುತ್ತದೆ ಹಾಗೆ ಪ್ರೀತಿಗೆ ವಯಸ್ಸು ಇಲ್ಲ ಕೆಲವೊಬ್ಬರ ಜೀವನದಲ್ಲಿ ಶಾಲಾ ದಿನಗಳಲ್ಲಿ ಪ್ರೀತಿ ಹುಟ್ಟಿರುತ್ತದೆ ಇನ್ನು ಕೆಲವರ ಜೀವನದಲ್ಲಿ ಕಾಲೇಜು ಮೂರು ದಿನಗಳಲ್ಲಿ ಮೊದಲ ಪ್ರೀತಿಹುಡುಗ ಹುಡುಗಿಯರ ಅದೇ ಅರಿಯದ ವಯಸ್ಸಿನಲ್ಲಿ ಆಗುವ ಈ ಮೊದಲ ಪ್ರೀತಿ ಮರುಭೂಮಿಯಲ್ಲಿ ಮಳೆ ಬಂದಂತೆಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳು ಕೈಗೆ ಸಿಗುವಂತೆ ಮತ್ತು ಅಮಾಸೆ ಕತ್ತಲಂತಾದ ಮನಸ್ಸಿಗೆ ಬೆಳದಿಂಗಳನ್ನು ನೀಡುವ ಚಂದಿರನಂತೆ ಈ ಮೊದಲ ಪ್ರೀತಿ ಅನುಭವ ನೀಡುತ್ತದೆ .ನನಗೆ ಪ್ರೀತಿ ಎಂದರೆ ಏನ್ನು ತಿಳಿದೇ ಇರಲಿಲ್ಲ

ಪ್ರೀತಿ ಯಾವ ರೀತಿ ಆಗುತ್ತದೆ ಎಂದು ತಿಳಿದೇ ಇರಲಿಲ್ಲ ತಿಳಿಯದ ವಯಸ್ಸಿನಲ್ಲಿ ಬಂದು ಹೋದ ಗೆಳತಿ !ಈ ಗೆಳತಿ ಬಗ್ಗೆ ತಿಳಿಯಲು ನಿಮ್ಮ ಕುತೂಹಲ



ಇದೇ ? ಶಾಲೆಗೆ ಹೋಗುವ ಸಮಯಕ್ಕೆ ಆಗೋ ಪ್ರೀತಿ ಇದು ಮನಸ್ಸು ಚಂಚಲ ಆಗುತ್ತಿರುತ್ತದೆಶಾಲೆ ಹೋಗುವ ವಯಸ್ಸಿನಲ್ಲಿ ಜಗತ್ತು ರಂಗುರಂಗಾಗಿ ಕಾಣುತ್ತದೆ ಆ ಸಮಯದಲ್ಲಿ ಮನಸ್ಸಿನಲ್ಲಿ ಹೊಸದೇನೂ ಆಕರ್ಷಣೆ ಆಗುತ್ತದೆ .ತರಗತಿಯಲ್ಲಿ ಆ ಬ್ರಿಲಿಯಂಟ್ ಹುಡುಗನೋ ಅಥವಾ ಸೈಲೆಂಟ್ ಹುಡುಗಿಯನೋ ಮನಸಿನಲ್ಲಿ ತುಂಬಾ ಹತ್ತಿರವಾಗಿ ಬಿಡುತ್ತಾರೆ ಹಾಗಂತ ಇದು ಪ್ರೀತಿನಾ ?ನೋ ವೇ ಚಾನ್ಸೇ ಇಲ್ಲ ಇದು ಆಕರ್ಷಣೆಯಷ್ಟೇಈ ಮೊದಲ ಪ್ರೀತಿ ಹೇಗಾಗುತ್ತದೆ ಎನ್ನುವುದು ಗೊತ್ತಾಗೋಲ್ಲ, ನೋಡ ನೋಡುತ್ತಾ ಲೇ ಆ ವ್ಯಕ್ತಿ ಇಷ್ಟವಾಗಿಬಿಡುತ್ತಾರೆ ಅವರ ಒಂದು ಸಾಲಿಗೆ ಕಣ್ಣೋಟಕ್ಕೆ ಮನಸ್ಸು ಹಾತೊರೆಯುತ್ತದೆ , ಆದರೆ ಅವರ ಜೊತೆ ಮಾತನಾಡಬೇಕು ಜೊತೆಯಾಗಿರಬೇಕು ಅನಿಸುತ್ತದೆ .ನನಗೆ ಶಾಲೆ ದಿನಗಳ ನನ್ನ ಮೊದಲ ಪ್ರೀತಿ ಆಗಿತ್ತು .ನಾನು ಮೊದ ಮೊದಲು ಹುಡುಗಿಯರನ್ನು ಮಾತನಾಡಿಸಲು ಹೆದರುತ್ತಿದ್ದೆ ಆದರೆ ನಮ್ಮ ಕ್ಲಾಸ್ ನ ಒಂದು ಹುಡುಗಿ ನನ್ನ ಹತ್ತಿರ ಪುಸ್ತಕವನ್ನು ಕೇಳುವ ವಿಚಾರದಲ್ಲಿ ನನ್ನನ್ನು ಮಾತನಾಡಿಸಿದಳು

**–ಸಿ.ಡಿ ಚನ್ನಕೇಶವ**
**15ನೇ ವಾರ್ಡ್ ರಾಮಲಿಂಗಮ್ಮ ಗುಡಿ ಹತ್ತಿರ ಕಂಪ್ಲಿ ಹೊಸಪೇಟೆ**

# ಹೇಮರೆಡ್ಡಿ ಮಲ್ಲಮ್ಮ ಮಹಿಳಾ ಶಕ್ತಿಯ ಪ್ರತಿರೂಪ: ಪ್ರಭು ಚವ್ಹಾಣ

• **ಮಲ್ಲಮ್ಮ ನುಡಿ ವಾರ್ತೆ ಔರಾದ**



ಮೇ.10:ಮಹಾಸಾಧ್ವಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯ ಅಂಗವಾಗಿ ಔರಾದ(ಬಿ) ಪಟ್ಟಣದ ಶಾಸಕರ ಕಚೇರಿಯಲ್ಲಿ ಶಾಸಕ ಪ್ರಭು ಬಿ. ಚವ್ಹಾಣ ಅವರು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಹೇಮರೆಡ್ಡಿ ಮಲ್ಲಮ್ಮ ಅವರು ಭಕ್ತಿ, ತ್ಯಾಗ, ಸತ್ಯನಿಷ್ಠೆ ಹಾಗೂ ಸಮಾಜ ಸೇವೆಯ ಪ್ರತೀಕವಾಗಿದ್ದರು. ಸಮಾಜಕ್ಕೆ ಸನ್ಮಾರ್ಗದ ಸಂದೇಶ ಸಾರಿದ ಅವರು ಮಹಿಳಾ ಶಕ್ತಿಯ ಆದರ್ಶ ಪ್ರತಿರೂಪರಾಗಿದ್ದಾರೆ ಎಂದು ಹೇಳಿದರು.

ಹೇಮರೆಡ್ಡಿ ಮಲ್ಲಮ್ಮ ಅವರು ತಮ್ಮ ಜೀವನದ ಮೂಲಕ ಸಮಾನತೆ, ಮಾನವೀಯತೆ ಹಾಗೂ ಕಾಯಕದ ಮಹತ್ವವನ್ನು ಸಾರಿದ್ದು, ಧರ್ಮ ಮತ್ತು ಸಂಸ್ಕೃತಿಯ ಉಳಿವಿಗಾಗಿ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಆದರ್ಶಗಳು ಇಂದಿನ ಯುವಜನತೆಗೆ ಪ್ರೇರಣೆಯಾಗಿದ್ದು, ಸಮಾಜದಲ್ಲಿ ನೈತಿ–ಕ ಮೌಲ್ಯಗಳನ್ನು ಬೆಳೆಸುವಲ್ಲಿ ಅವರ ಸಂದೇಶಗಳು ಮಾರ್ಗದರ್ಶಕವಾಗಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಶಿವರಾಜ ಅಲ್ಮಾಜೆ, ಪ್ರದೀಪ ಪವಾರ, ಪ್ರಕಾಶ ಭಂಗಾರೆ, ಮಂಜು ಸ್ವಾಮಿ, ಬಾಲಾಜಿ ವಾಗ್ಮಾರೆ, ಲಕ್ಷ್ಮಣ ಜಾಧವ, ಸಂದೀಪ ಟಿಳೇಕರ್, ಕೇರಬಾ ಪವಾರ, ಸಂತೋಷ ಪೋಕಲವಾರ ಸೇರಿದಂತೆ ಹಲವರು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಮನ ಸಲ್ಲಿಸಿದರು.

# ಶಾಂತಿ ನೆಮ್ಮದಿಯ ಬದುಕಿಗೆ ಧರ್ಮವೇ ಮೂಲ : ರಂಭಾಪುರಿ ಶ್ರೀ



ಗಜೇಂದ್ರಗಡ/ರೋಣ–ಮೇ–10.

ಅರಿವುಳ್ಳ ಮಾನವ ಜನ್ಮದಲ್ಲಿ ಅರಿತು ಬಾಳಿದರೆ ಬದುಕು ಬಂಗಾರ. ಮರೆತು ಮಲಗಿದರೆ ಬದುಕು ಬಂಧನಕಾರಿ. ಮಹಾತ್ಮರ ಸಂದೇಶಗಳು ಎಲ್ಲರಿಗೂ ದಾರಿದೀಪ. ಶಾಂತಿ ನೆಮ್ಮದಿಯ ಬದುಕಿಗೆ ಧರ್ಮವೇ ಮೂಲವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಭಾನುವಾರ ಸೂಡಿ ಜುಕ್ತಿ ಹಿರೇಮಠದ ನೂತನ ರಥದ ಲೋಕಾರ್ಪಣೆ ಮತ್ತು ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮ್ಮೇಳನದ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಭೌತಿಕ ಬದುಕಿಗೆ ಸಂಪತ್ತು ಅಷ್ಟೇ ಮುಖ್ಯವಲ್ಲ. ಅದರೊಂದಿಗೆ ಧರ್ಮಪ್ರಜ್ಞೆ ಮತ್ತು ರಾಷ್ಟ್ರಪ್ರಜ್ಞೆ ಅಗತ್ಯ. ಮಾನವನಿಗೆ ಯೋಗ್ಯ ಸಂಸ್ಕಾರ ದೊರೆತರೆ ಬೆಲೆಯುಳ್ಳ ಬದುಕು ಸಾರ್ಥಕಗೊಳ್ಳುತ್ತದೆ. ಜ್ಞಾನ ಕ್ರಿಯಾತ್ಮಕವಾದ ಶಿವಾದ್ವೈತ ಸಿದ್ಧಾಂತವನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿ ಸಕಲರನ್ನು ಉದ್ಧರಿಸಿದ್ದಾರೆ. ಅವರು ಸಾಮಾಜಿಕ ಸಂವೇದನಾಶೀಲ ಮೌಲ್ಯಗಳನ್ನು ಬೆಳೆಸಿದ್ದನ್ನು ಮರೆಯಲಾಗದು. ಇತಿಹಾಸ ನಿನ್ನೆ ಸುಖ ಇತ್ತೆಂದು ಹೇಳುತ್ತದೆ. ವಿಜ್ಞಾನ ನಾಳೆ ಸುಖ ಇದೆಯೆಂದು ಹೇಳುತ್ತದೆ. ಆದರೆ ಧರ್ಮ ಸತ್ಯ ಮತ್ತು ಪ್ರಾಮಾಣಿಕವಾಗಿ ಬದುಕಿದರೆ ಇದೇ ಜನ್ಮದಲ್ಲಿ ಸುಖ ಇದೆಯೆಂದು ಹೇಳುತ್ತದೆ. ಸೂಡಿ ಜುಕ್ತಿ ಹಿರೇಮಠದ ಡಾ॥ ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು ನಿರಂತರ ಶ್ರಮ ಸಾಧನೆಯಿಂದ ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆ. ನೂತನ ರಥ ನಿರ್ಮಾಣ ಮಾಡುವ ಸಂದರ್ಭದಲ್ಲಿ ಬಹಳ ಶ್ರಮಪಟ್ಟಿದ್ದನ್ನು ಕಾಣುತ್ತೇವೆ. ಶ್ರೀಗಳವರ ನಿರಂತರ ಧರ್ಮ ಕಾರ್ಯ ಕಂಡು ಅತ್ಯಂತ ಸಂತೋಷವಾಗಿದೆ ಎಂದು ಹರುಷ ವ್ಯಕ್ತಪಡಿಸಿ ಶ್ರೀ ಪೀಠದಿಂದ ರೇಶ್ಮೆ ಮಡಿ ಸ್ಮರಣಿಕೆ ಫಲ ಪುಷ್ಪವಿತ್ತು ಶುಭ ಹಾರೈಸಿದರು.

ಸಾನ್ನಿಧ್ಯ ವಹಿಸಿದ ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮಠ ಮಂದಿರಗಳು ನಮ್ಮ ಸಂಸ್ಕೃತಿಯ ಸಂರಕ್ಷಣೆಯ ಕೇಂದ್ರಗಳಾಗಿವೆ. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ನಿಯಮಗಳು ಯಾವಾಗಲೂ ಶಾಶ್ವತವಾಗಿರುತ್ತವೆ. ಅಧರ್ಮದ ಕವಚ ಹೊತ್ತ ಮನುಷ್ಯನ ವಿಚಾರಗಳು ಬಹಳ ಕಾಲ ಬಾಳಲಾರವು. ಸೂಡಿ ಶ್ರೀಗಳ ಶ್ರಮ ಭಕ್ತರ ಸಹಕಾರ ಇಂದಿನ ಎಲ್ಲ ಸಂಭ್ರಮಕ್ಕೆ ಕಾರಣವಾಗಿದೆ ಎಂದರು. ಸಾನ್ನಿಧ್ಯ ವಹಿಸಿದ ಶ್ರೀ ಶ್ರೀಶೈಲ ಡಾ॥ಚನ್ನಸಿದ್ಧರಾಮ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಅತಿ ಶತ್ರುಗಳನ್ನು ನಿಯಂತ್ರಿಸಬಹುದು. ಆದರೆ ಮತಿ ಶತ್ರುಗಳನ್ನು ನಿಯಂತ್ರಿಸುವುದು ಕಷ್ಟ. ನದಿಯ ನೀರು ಎಷ್ಟು ತುಂಬಿದರೂ ಅದು ಹೇಗೆ ಖಾಲಿಯಾಗುವುದಿಲ್ಲವೋ ಹಾಗೆಯೇ ಧರ್ಮದ ಅರಿವನ್ನು ಎಷ್ಟು ಅರಿತರೂ ಅದು ಖಾಲಿಯಾಗುವುದಿಲ್ಲ. ವೀರಶೈವ ಧರ್ಮ ವಿಶ್ವ ಬಂಧುತ್ವದ ಮೂಲಕ ಸಮಾಜದಲ್ಲಿ ಸಾಮರಸ್ಯ ಸೌಹಾರ್ದತೆ ಬೆಳೆಸುತ್ತ ಬಂದಿದೆ. ಸೂಡಿಯಲ್ಲಿ ಜರುಗಿದ ಈ ಸಮಾರಂಭ ತಮಗೆ ಅತ್ಯಂತ ಸಂತೋಷ ತಂದಿದೆ ಎಂದರು. ಸಾನ್ನಿಧ್ಯ ವಹಿಸಿದ ಶ್ರೀ ಕಾಶೀ ಡಾ॥ ಚಂದ್ರಶೇಖರ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಉನ್ನತ ಗುರಿ ಮತ್ತು ಧ್ಯೇಯ ವ್ಯಕ್ತಿತ್ವ ವಿಕಾಸಕ್ಕೆ ದಾರಿದೀಪ. ಧರ್ಮದ ದಾರಿ ಮೋಕ್ಷಕ್ಕೆ ಹೆದ್ದಾರಿ. ಮೋಹದ ದಾರಿ ತೊರೆದರೆ ಮೋಕ್ಷದ ದಾರಿ ದೊರಕುತ್ತದೆ. ಸಂಪತ್ತು ಬೆಳೆದಂತೆಲ್ಲಾ ಮಾನವೀಯ ಸಂಬಂಧಗಳು ಸಡಿಲಗೊಳ್ಳಬಾರದು. ಶ್ರೀ ಜಗದ್ಗುರು ರೇಣುಕಾಚಾರ್ಯರಿಂದ ಬೋಧಿಸಲ್ಪಟ್ಟ ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದಲ್ಲಿ ಭವಿ ಭಕ್ತನಾಗುವ, ಅಂಗ ಲಿಂಗವಾಗುವ, ದೇಹ ದೇವಾಲಯವಾಗುವ ವಿಶಿಷ್ಟ ಸಂಸ್ಕೃತಿ ಹೊಂದಿದೆ. ಸೂಡಿ ಶ್ರೀಗಳವರ ರಚನಾತ್ಮಕ ಮತ್ತು ಗುಣಾತ್ಮಕ ಕಾರ್ಯಗಳು ಭಕ್ತ ಸಂಕುಲಕ್ಕೆ ಹರುಷ ಉಂಟು ಮಾಡಿವೆ ಎಂದರು. ಸಾನ್ನಿಧ್ಯ ವಹಿಸಿದ ಶ್ರೀ ಕಾಶೀ ನೂತನ ಜಗದ್ಗುರು ಡಾ.ವಿಶ್ವಾರಾಧ್ಯ ಮಲ್ಲಿಕಾರ್ಜುನ ಭಗವತ್ಪಾದರು ತಮ್ಮ ಆಶೀರ್ವಚನದಲ್ಲಿ ಧರ್ಮ ಮತ್ತು ಧರ್ಮಾಚರಣೆ ಮರೆತರೆ ಅಪಾಯ ತಪ್ಪಿದ್ದಲ್ಲ. ನಾಗರೀಕತೆ ಹೆಸರಿನಲ್ಲಿ ಭಾರತೀಯ ಸಂಸ್ಕೃತಿ ನಾಶಗೊಳ್ಳಬಾರದು. ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಮಹತ್ವದ್ದು. ಸೂಡಿಯ ಡಾ.ಕೊಟ್ಟೂರ ಬಸವೇಶ್ವರ ಶಿವಾಚಾರ್ಯರು ವಿದ್ಯಾ ವಿನಯ ಸಂಪನ್ನರಾಗಿ ವೀರಶೈವ ಧರ್ಮ ಸಂಸ್ಕೃತಿ ಸಂವರ್ಧಿಸುವ ಕಾರ್ಯದ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದರು.

ಸಮಾರಂಭವನ್ನು ಉದ್ಘಾಟಿಸಿದ ನಿವೃತ್ತ ಪೋಲೀಸ ಮಹಾ ನಿರ್ದೇಶಕ ಶಂಕರ ಬಿದರಿ ಅವರು ಮಾತನಾಡಿ ಭೌತಿಕ ಜೀವನ ಸಮೃದ್ಧಗೊಂಡಂತೆ ಆಂತರಿಕ ಬದುಕು ಪರಿಶುದ್ಧಗೊಳ್ಳಬೇಕಾಗಿದೆ. ಸಂಸ್ಕಾರದಿಂದ ಬದುಕು ಉಜ್ವಲಗೊಳ್ಳುತ್ತದೆ. ಗುರಿಯಿಲ್ಲದ ಗುರಿ ಸಾಧಿಸದ ಜೀವನ ನಿರರ್ಥಕವಾಗುತ್ತದೆ. ಮನುಷ್ಯನ ದೈಹಿಕ ವಿಕಾಸಕ್ಕೆ ನೀರು ಅನ್ನ ಮುಖ್ಯವಾಗಿರುವಂತೆ ಬದುಕನ್ನು ವಿಕಾಸಗೊಳಿಸುವ ಶಕ್ತಿ ಧರ್ಮಕ್ಕಿದೆ. ಸೂಡಿಯಲ್ಲಿ ಹಮ್ಮಿಕೊಂಡ ಎಲ್ಲಾ ಕಾರ್ಯಗಳು ಅತ್ಯಂತ ವೈಭವದಿಂದ ಜರುಗುತ್ತಿವೆ. ಇದಕ್ಕೆಲ್ಲ ಸೂಡಿ ಕೊಟ್ಟೂರು ಬಸವೇಶ್ವರರ ಶ್ರಮ ಮತ್ತು ಭಕ್ತರ ಸಹಕಾರ ದೊಡ್ಡದೆಂದು ಹರುಷ ವ್ಯಕ್ತಪಡಿಸಿದರು. ಅವರು ನೂತನ ರಥಕ್ಕೆ ಪೂಜೆ ಸಲ್ಲಿಸಿ ಶುಭ ಕೋರಿದರು. ದಾನಿಗಳ ನಾಮಫಲಕ ಅನಾವರಣಗೊಳಿಸಿದ ಅ.ಭಾ.ವೀರಶೈವ ಶಿವಾಚಾರ್ಯ ಸಂಸ್ಥೆ ಅಧ್ಯಕ್ಷರಾದ ಸಿಂದಗಿ ಸಾರಂಗಮಠದ ಡಾ. ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮಿಗಳು ಭಾರತೀಯ ಉತ್ಕೃಷ್ಟ ಸಾಹಿತ್ಯ ಸಂಪತ್ತನ್ನು ಮರೆಯಲಾಗದು. ಆಚಾರ್ಯರ ಮತ್ತು ಋಷಿ ಮುನಿಗಳ ಆಧ್ಯಾತ್ಮಿಕ ಚಿಂತನಗಳು ಮನುಷ್ಯ ಜೀವನದ ಉಜ್ವಲತೆಗೆ ಕಾರಣವಾಗಿವೆ. ಸೂಡಿ ಪಟ್ಟಾಧ್ಯಕ್ಷರು ಸಾರ್ಥಕ ಸಮಾರಂಭ ಹಮ್ಮಿಕೊಂಡಿರುವುದು ಎಲ್ಲ ಭಕ್ತರೂ ಸಂತಸಗೊಂಡಿದ್ದಾರೆ ಎಂದರು. ಗ್ರಂಥ ಬಿಡುಗಡೆ ಮಾಡಿದ ಅ.ಭಾ.ವೀ.ಶಿ.ಸಂಸ್ಥೆ ಗೌರವಾಧ್ಯಕ್ಷರಾದ ಮುಕ್ತಿಮಂದಿರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯರು ಮಾತನಾಡಿ ಭಾರತೀಯ ಉತ್ಕೃಷ್ಟ ಸಂಸ್ಕೃತಿ ಸಕಲರ ಬಾಳಿನಲ್ಲೂ ಹೊಸ ಶಕ್ತಿ ಮೂಡಿಸಿದೆ. ದಾನಿಗಳ ದಾನ ಸತ್ಪಾತ್ರಕ್ಕೆ ತಲುಪಿರುವುದೆಂಬ ಆತ್ಮಸಂತೃಪ್ತಿ ತಮ್ಮದಾಗಿದೆ ಎಂದರು. ನೇತೃತ್ವ ವಹಿಸಿದ ಸೂಡಿ ಜುಕ್ತಿಹಿರೇಮಠದ ಡಾ॥ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಸೂಡಿ ಗ್ರಾಮದಲ್ಲಿ ಪ್ರಪ್ರಥಮವಾಗಿ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿದ್ದು ಎಲ್ಲ ಭಕ್ತ ಮಂಡಳಿಗೆ ಹರುಷವಾಗಿದೆ. 50 ವರುಷಗಳಿಂದ ನಡೆದುಕೊಂಡು ಬರುತ್ತಿರುವ ಜಾತ್ರೆಯಲ್ಲಿ ಈ ವರುಷ ಭವ್ಯ ಸುಂದರ ರಥ ನಿರ್ಮಾಣಗೊಂಡು ಲೋಕಾರ್ಪಣೆಗೊಳ್ಳುತ್ತಿರುವುದು ಎಲ್ಲಿಲ್ಲದ ಹರುಷ ತಂದಿದೆ. ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಆಶೀರ್ವಾದ ಅನವರತ ಕಾಲ ಇರಲೆಂದು ಬಯಸಿದರು. ಬನ್ನಿಕೊಪ್ಪದ ಡಾ॥ ಸುಜ್ಞಾನದೇವ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು.

ಡಾ॥ ಸಂಗಮೇಶ ಸವದತ್ತಿಮಠ ಇವರಿಗೆ "ಭಾಷಾ ಭಾಸ್ಕರ" ಪ್ರಶಸ್ತಿಯಿತ್ತು ಜಗದ್ಗುರುಗಳು ಶುಭ ಹಾರೈಸಿದರು. ನೂತನ ರಥ ನಿರ್ಮಾಣಕ್ಕೆ ಸಹಕರಿಸಿದ ಎಲ್ಲಾ ದಾನಿಗಳಿಗೆ ಮತ್ತು ಗಣ್ಯರಿಗೆ ಜಗದ್ಗುರುಗಳೈವರು ಗುರುರಕ್ಷೆಯಿತ್ತು ಶುಭ ಹಾರೈಸಿದರು. ಎಸಳೂರು ಚನ್ನಸಿದ್ಧೇಶ್ವರ ಶಿವಾಚಾರ್ಯರು ಸೇರಿದಂತೆ ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು. ಬದಾಮಿ ಶಾಸಕ ಬಿ.ಬಿ. ಚಿಮ್ಮನಕಟ್ಟಿ, ರೋಣದ ಮಿಥುನ್ ಪಾಟೀಲ ಮುಖ್ಯ ಅತಿಥಿಗಳಾಗಿದ್ದರು.

ಗದುಗಿನ ಚಂದ್ರಾಬಾಳಿಹಳ್ಳಿಮಠ ಪ್ರಾಸ್ತಾವಿಕ ನುಡಿ ಸಲ್ಲಿಸಿದರು. ಪ್ರಕಾಶ ಬೆಂಡಿಗೇರಿ ಸ್ವಾಗತಿಸಿದರು. ಎಂ.ಸಂಗಮೇಶ ಉತ್ತಂಗಿ ಇವರಿಂದ ಭಕ್ತಿಗೀತೆ ಜರುಗಿತು. ಲಲಿತಾ ವಿಜಯಕುಮಾರ ಬಾಳಿಹಳ್ಳಿಮಠ ಮತ್ತು ಶಾರದಾ ಶಿವಾನಂದಯ್ಯ ನಿರೂಪಿಸಿದರು. ಸೂಡಿ ಶಿವಬಸವ ಬೆಲ್ಲದ ವಂದನಾರ್ಪಣೆ ಸಲ್ಲಿಸಿದರು.

ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ, ಶ್ರೀ ಉಜ್ಜಯಿನಿ, ಶ್ರೀ ಶ್ರೀಶೈಲ, ಶ್ರೀ ಕಾಶೀ ಉಭಯ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿ–ತು. ಸಹಸ್ರಾರು ಭಕ್ತರು ಜಗದ್ಗುರುಗಳ ಆಶೀರ್ವಾದ ಪಡೆದರು. ಸಮಾರಂಭದ ನಂತರ ಬಂದ ಎಲ್ಲ ಭಕ್ತರಿಗೆ ಅನ್ನ ದಾಸೋಹ ಜರುಗಿತು.

# ಕುಡಿಯುವ ನೀರಿನ ಸಂಪರ್ಕವಿಲ್ಲದೇ ನೀರಿಗಾಗಿ ಜನರ ಪರದಾಟ

• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ಮೇ.10: ಪೈಪ್ ಸಂಪರ್ಕ ನೀಡದೆ ಕೆರೆಕಟ್ಟೆಗಳು ಒಣಗಿ ಅಂತರ್ಜಲ ಬೊತ್ತಿ ಹೋಗಿರುವುದರಿಂದ ತೋಡಿಕೊಂಡಿರುವ ನೆಲಬಾವಿಯಲ್ಲಿ ಹುಳುಗುಳು ವೃದ್ಧಿಯಾಗಿರುವ ನೀರನ್ನು ಕುಡಿದು ಜೀವನ ನಡೆಸುತ್ತಿರುವ ಆದಿವಾಸಿಗಳ ಕಣ್ಣೀರ ಕಥೆ ಕೇಳುವವರಿಲ್ಲವಾಗಿದೆ.

ತಾಲೂಕಿನ ಗಡಿ ಭಾಗದಲ್ಲಿರುವ ಮುತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಮರಳುಕಟ್ಟೆ ಹಾಡಿ ಬಿ ಕಾಲೋನಿಯಲ್ಲಿನ ಆದಿವಾಸಿಗಳು ಮರದ ಎಲೆಗಳಿಂದ ಉದುರಿ ಕೊಳೆತ ನೀರಿನಿಂದಲೇ ತಮ್ಮ ಭವಣೆ ತೀರಿಸಿಕೊಳ್ಳುತ್ತಿರುವ ಪರಿಸ್ಥಿತಿ ಎದುರಾಗಿರುವುದನ್ನು ಕಾಣಬಹುದಾಗಿದೆ.



ಮರಳು ಕಟ್ಟೆ ಬಿ ಕಾಲೋನಿಯಲ್ಲಿ ಜೇನು ಕುರುಬ ಜನಾಂಗಕ್ಕೆ ಸೇರಿದ 110 ಕುಟುಂಬ ಹಾಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ಮರಳು ಕಟ್ಟೆ ಹಾಡಿಗೆ ಕಿರು ನೀರಾವರಿ ಯೋಜನೆ ಅಡಿಯಲ್ಲಿ ನಲ್ಲಿಗಳನ್ನು ಒದಗಿಸಿದ್ದು ಪಕ್ಕದಲ್ಲಿರುವ ಬಿ. ಕಾಲೋನಿಗೆ ಯಾವುದೇ ರೀತಿಯಲ್ಲಿ ಕುಡಿಯುವ ನೀರಿನ ಸಂಪರ್ಕ ನೀಡದೆ ಇರುವುದರಿಂದ ತೇ-ೂಡಿಕೊಂಡು ತೆರೆದ ಬಾವಿಯಾದ ಕಾರಣ ಅರಣ್ಯದಿಂದ ಬಂದ ಮರದ ಎಲೆ ಮತ್ತು ಇನ್ನಿತರ ತ್ಯಾಜ್ಯ ವಸ್ತುಗಳು ಗಾಳಿಯಲ್ಲಿ ಹಾರಿ ಬಂದು ಸೇರುತ್ತಿರುವುದರಿಂದ ಒಳಗೆ ನೀರಿನಲ್ಲಿ ಕೊಳೆತು ನೀರಿನ ಬಣ್ಣವನ್ನು ಬದಲಾಗಿ ಹುಳುಗಳು ವೃದ್ಧಿಯಾಗುತ್ತಿವೆ.

ಇಲ್ಲಿನ ಜನರು ಈ ನೀರನ್ನು ಅವಲಂಬಿಸಿಕೊಂಡಿದ್ದರು ಸಹ ಒಂದೆ-ರಡು ದಿನಗಳಲ್ಲಿ ಅಕ್ಕ-ಪಕ್ಕದ ಕೆರೆಕಟ್ಟೆಗಳು ಒಣಗಿ ಬೊತ್ತಿ ಹೋಗಿರುವುದರಿಂದ ಈ ತೋಡಿದ ತೆರದ ಬಾವಿಯಲ್ಲೂ ನೀರು ಹಿಂಗಿ ಹೋಗುತ್ತಿರುವುದು ಹೆಚ್ಚಾಗಿದೆ.

ಇದರಿಂದ ಹಲವಾರು ರೀತಿಯ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಿದ್ದು ಗುಂಡಿ ಯಿಂದ ಬಿಂದಿಗೆಯನ್ನು ಮೇಲೆತ್ತಿ ನೀರು ತುಂಬಿ ತರುವ ಸಮಯದಲ್ಲಿ ಒಳಗೆ ಜಾರಿ ಬಿದ್ದು ಅನೇಕ ಮಹಿಳೆಯರು ಮತ್ತು ಮಕ್ಕಳು ಒಂದಲ್ಲ ಒಂದು ರೀತಿ ಹಾನಿಗೊಳಗಾಗಿ ತೊಂದರೆ ಅನುಭವಿಸುತ್ತಿದ್ದೇವೆ ಎಂದು ಇಲ್ಲಿನ ಮಹಿಳೆಯರಾದ ಶ್ರುತಿ ಮತ್ತು ಜಯಮ್ಮ. ಜಾನಕಿ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಕಳೆದ 2024ನೇ ಸಾಲಿನಲ್ಲಿ ಸುಮಾರು 60 ಲಕ್ಷ ರೂ ವೆಚ್ಚದಲ್ಲಿ ಗ್ರಾಮೀಣ ಕುಡಿಯುವ ನೀರು ನೈರ್ಮಲ್ಲಿ ಇಲಾಖೆ ವತಿಯಿಂದ ಸುಮಾರು 25 ಸಾವಿರ ಲೀಟರ್ ಸಾಮರ್ಥ್ಯದ ನೀರು ಸರಬರಾಜು ಟ್ಯಾಂಕನ್ನು ನಿರ್ಮಾಣ ಮಾಡಲಾಗಿದೆ ಎಂದು ಇಲ್ಲಿನ ಆದಿವಾಸಿಗಳ ಮುಖಂಡ ಅನಿಲ್ ಕುಮಾರ್ ತಿಳಿಸಿದ್ದಾರೆ.

ಆದರೆ ಟ್ಯಾಂಕ್ ಪಕ್ಕದಲ್ಲಿ ಕೊಳವೆ ಬಾವಿಯನ್ನು ತೊಡಲಾಗಿದ್ದು ಹಾಡಿಯ ಅಂತ್ಯ ಭಾಗದಲ್ಲಿರುವ ಅಣ್ಣಯ್ಯ ಎಂಬುವರ ಮನೆಯ ವರೆಗೆ ಪೈಪ್ ಲೈನ್ ಅನ್ನು ಪಿಎಂ ಜನಮನ್ ಯೋಜನೆ ಅಡಿಯಲ್ಲಿ ಕಾಮಗಾರಿ ಮುಕ್ತಾಯಗೊಂಡಿದೆ.

ಆದರೆ ಈ ಕಾಮಗಾರಿಯ ಕುತ್ತಿಗೆದಾರನಾದ ತಮ್ಮಯ್ಯ ನಾಯಕ ಎಂಬುವರು ನಿರ್ವಹಿಸಿದ್ದು ಇಂಜಿನಿಯರ್ ವಿಭಾಗದಲ್ಲಿನ ತಾಂತ್ರಿಕ ತೊಂದರೆಯಿಂದಾಗಿ ಹಣ ಪಾವತಿ ಆಗದ ಪರಿಣಾಮ ಕೊಳವೆ ಬಾವಿಯಿಂದ ಟ್ಯಾಂಕ್







ಗೆ ನೀರಿನ ಸಂಪರ್ಕ ನೀಡದೆ ಇರುವುದರಿಂದ ಇಲ್ಲಿನ ಆದಿವಾಸಿಗಳಾದ ನಾವು ನಮ್ಮದಲ್ಲದ ತಪ್ಪಿಗೆ ತೊಂದರೆ ಅನುಭವಿಸುತ್ತಿದ್ದೇವೆ ಎಂದು ಅನಿಲ್ ಕುಮಾರ್ ದೂರಿದ್ದಾರೆ.

ಈ ಬಗ್ಗೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳ ಗಮನಕ್ಕೆ ಅನೇಕ ಬಾರಿ ತರಲಾಗಿದ್ದರು ಸಹ ಇಲ್ಲ ಸಲ್ಲದ ಕಾರಣಗಳನ್ನು ಹೇಳುತ್ತಾ ಯಾವುದೇ ಕ್ರಮ ಕೈಗೊಳ್ಳದೆ ಇರುವುದರಿಂದ ನಾವು ನೀರಿಲ್ಲದೆ ನರಕಾಯತನೇ ಅನುಭವಿಸುತ್ತಿದ್ದೇವೆ .

ಕೂಡಲೇ ಸಚಿವರಾದ ಕೆ ವೆಂಕಟೇಶ್ ಅವರು ಮಧ್ಯಪ್ರವೇಶಿಸಿ ಕುಡಿಯುವ ನೀರಿನ ಸೌಲಭ್ಯ ದೊರಕಿಸಿ ನಮಗಾಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಅನಿಲ್ ಕುಮಾರ್ ಮತ್ತು



ಶ್ರುತಿ ಮನವಿ ಮಾಡಿಕೊಂಡಿದ್ದಾರೆ.

ಸ್ಪಷ್ಟನೆ : ಗುತ್ತಿಗೆದಾರನಾದ ತಮ್ಮಯ್ಯ ನಾಯಕರವರಿಗೆ ಇಂಜಿನಿಯರ್ ವಿಭಾಗದಿಂದ ಆಗಿರುವ ತಾಂತ್ರಿಕ ತೊಂದರೆಯಿಂದ ನೀರಿನ ಸಂಪರ್ಕ ನೀಡಲು ವಿಳಂಬವಾಗುತ್ತಿರುವುದು ಒಂದೆಡೆಯಾದರೆ ಇನ್ನೊಂದೆಡೆ ವಿದ್ಯುತ್ ಸಾಮರ್ಥ್ಯದ ಸಂಪರ್ಕ ಆಗದೇ ಇರುವುದರಿಂದ ಈ ರೀತಿಯ ಪರಿಸ್ಥಿತಿ ಎದುರಾಗಿದೆ ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಿ ನೀರಿನ ಸೌಲಭ್ಯ ದೊರಕಿಸುವುದಾಗಿ ಮುತ್ತೂರು ಗ್ರಾ ಪಂ ಅಭಿವೃದ್ಧಿ ಅಧಿಕಾರಿ ಸುರೇಶ್ ಸ್ಪಷ್ಟಪಡಿಸಿದ್ದಾರೆ.

## ಹೇಮರೆಡ್ಡಿ ಮಲ್ಲಮ್ಮನವರ 604ನೇ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಪಟ್ಟಣದ ಫಾತಿಮಾಪುರನಲ್ಲಿರುವ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿ ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮನವರ 604ನೇ ಜಯಂತೋತ್ಸವದ ಪ್ರಯುಕ್ತ ರೆಡ್ಡಿ ಸಮುದಾಯದವರು ಮಲ್ಲಮ್ಮ ತಾಯಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡುವುದರ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ರಾಜರೆಡ್ಡಿ ಮುಡಬಿ,ಸಂಜೀವರೆಡ್ಡಿ ಮುಡಬಿ,ಮಲ್ಲಪ್ಪ ರಾಂಪುರ,ಹಣಮಂತ ರಾಂಪುರ, ಸಂಗ್ರಾಮರೆಡ್ಡಿ ರಾಂಪುರ,ಶಿವರೆಡ್ಡಿ ಉಸ್ತೆಲಿ,ಅನೀಲ ರಾಂಪುರ, ಹಣಮಂತ ಅನೀಲ ರೆಡ್ಡಿ ಮುಡಬಿ, ನವನಾತ ರೆಡ್ಡಿ,ಶಿವಪುತ್ರ ರಾಂಪುರ, ನಿಖಿಲ್, ಸುನೀಲ, ಸಂದೀಪ್, ಹಣಮಂತ ಸೇರಿದಂತೆ ರೆಡ್ಡಿ ಸಮಾಜದವರು ಉಪಸ್ಥಿತರಿದ್ದರು.

## ಮೇ 12ರಂದು ರಾಂಪುರನಲ್ಲಿ ಬಸವೇಶ್ವರ ಮೂರ್ತಿ ಅನಾವರಣ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ತಾಲೂಕಿನ ರಾಂಪುರ್ ಗ್ರಾಮದ ಸಾಂಸ್ಕೃತಿಕ ನಾಯಕ ವಿಶ್ವಗುರು ಮಹಾ ಮಾನವತಾವಾದಿ ಜಗಜ್ಯೋತಿ ಬಸವೇಶ್ವರರ ಭವ್ಯವಾದ ಅಶ್ವರೂಢ ಮೂರ್ತಿ ಅನಾವರಣ ಕಾರ್ಯಕ್ರಮ ಮೇ 8ರಿಂದ 11ರ ವರೆಗೆ ಪ್ರವಚನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಮೇ 12ರಂದು ಗ್ರಾಮದ ಮುಖ್ಯ ಬೀದಿಯ ಮುಖಾಂತರ ಭವ್ಯವಾದ ಮೆರವಣಿಗೆ ತದ ನಂತರ ಸಾಯಂಕಾಲ 6:30 ಗಂಟೆಗೆ ಮೂರ್ತಿ ಅನಾವರಣ ಪೂಜ್ಯ ಶ್ರೀ ನಾಡೋಜ ಬಸವಲಿಂಗ ಪಟ್ಟದೇವರು ಅಧ್ಯಕ್ಷರು ಅನುಭವ ಮಂಟಪ ಬಸವಕಲ್ಯಾಣ ಇವರಿಂದ ನೆರವೇರಿಸಲಾಗುವುದು ಹಾಗೂ ಪಾವನ ಸಾನಿಧ್ಯವನ್ನು ಅಕ್ಕ ಡಾ. ಗಂಗಾಂಬಿಕೆ ಪಾಟೀಲ್ ಬಸವ ಸೇವಾ ಪ್ರತಿಷ್ಠಾನ ಅಧ್ಯಕ್ಷರು ಬೀದರ್ ಹಾಗೂ ಶ್ರೀ ಮ. ನಿ .ಪ್ರ. ಶಿವಲಿಂಗೇಶ್ವರ ಮಹಾಸ್ವಾಮಿಗಳು ಶ್ರೀ ಶಿವಲಿಂಗೇಶ್ವರ ವಿರಕ್ತ ಮಠ ಮೇಳಗಿ ಹಾಗೂ ಚಿಟಗುಪ್ಪ ತಾಲೂಕಿನ ಬಸವ ತತ್ವ ಪ್ರಚಾರಕರಾದ ಅಕ್ಕ ಇಂದುಮತಿ ಗಾರಂಪಳ್ಳಿ ಇವರ ಎಲ್ಲರ ಸಮ್ಮುಖದಲ್ಲಿ ಕಾರ್ಯಕ್ರಮ



ಜರುಗಲಿವೆ ಎಂದು ತಿಳಿಸಿದ್ದಾರೆ.

## ದುರ್ಗಾ ಯಜ್ಞ ವಿಶೇಷ ಪೂಜಾ ಕಾರ್ಯ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತಾಲ್ಲೂಕಿನ ಗಾವಡಗೆರೆಯ ಶ್ರೀ ಗುರುಲಿಂಗಜಂಗವ ುದೇವರಮಠದಲ್ಲಿ ಇಂದು ಶ್ರೀ ಮಠದ ಶ್ರೀ ನಟರಾಜ ಸ್ವಾಮೀಜಿಯವರ ನೇತೃತ್ವದಲ್ಲಿ ಆಯೋಜಿಸಿದ್ದ ಲೋಕ ಕಲ್ಯಾಣಾರ್ಥ ಶ್ರೀ ದುರ್ಗಾ ಯಜ್ಞವಿಶೇಷ ಪೂಜಾ ಕಾರ್ಯದಲ್ಲಿ ಮಾಜಿ ಶಾಸಕ ಸ್ನೇಹಜೀವಿ ಎಚ್ ಪಿ ಮಂಜುನಾಥ್‌ರವರು ತಮ್ಮ ತಂದೆ ಎಚ್ ಎನ್ ಪ್ರೇಮ್ ಕುಮಾರ್, ಮಾತೃಶ್ರೀ ರತ್ನ ಪ್ರೇಮ್ ಕುಮಾರ್ ರವರೊಂದಿಗೆ ಭಾಗವಹಿಸಿ ರಾಜ್ಯದಲ್ಲಿ ಉತ್ತಮ ಮಳೆ ಬೆಳೆಯಾಗಿ ಜನತೆ ಸುಖ ಸಂಪತ್ತಿನಿಂದ ಕೂಡಿರಲಿ ಎಂದು ವಿಶೇಷ ಪ್ರಾರ್ಥನೆ ಸಲ್ಲಿಸಿದರು.ಲೋಕ ಕಲ್ಯಾಣಾರ್ಥ ಶ್ರೀ ದುರ್ಗಾ ಯಜ್ಞ ವಿಶೇಷಪೂಜಾ ಕಾರ್ಯಕ್ಕೆ ಮಾಜಿ ಶಾಸಕ ಸ್ನೇಹಜೀವಿ ಎಚ್‌ಪಿ. ಮಂಜುನಾಥ್ ರವರ ವೈಯಕ್ತಿಕವಾಗಿ ದೇಣಿಗೆ ನೀಡಿದರು. ಈ ವೇಳೆ ಸ್ವಾಮೀಜಿಯವರು ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರನ್ನು ಸನ್ಮಾನಿಸಿ ಆರ್ಶಿವಾದಿಸಿದರು.

## ಕನ್ನಡ ಕೇವಲ ಭಾಷೆಯಲ್ಲ ಅದು ನಮ್ಮ ಸಂಸ್ಕೃತಿ ಮತ್ತು ಪರಂಪರೆ: ಮರುಳರಾಧ್ಯ ಶಿವಾಚಾರ್ಯರು

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಕನ್ನಡ ಕೇವಲ ಭಾಷೆಯಲ್ಲ, ಅದು ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಆತ್ಮಗೌರವದ ಪ್ರತೀಕವಾಗಿದೆ ಎಂದು ಹಿರೇಮಠದ ಪೀಠಾಧಿಪತಿ ಮರುಳರಾಧ್ಯ ಶಿವಾಚಾರ್ಯರು ನುಡಿದರು. ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಸಾಹಿತ್ಯ ಪರಂಪರೆಯ ಮಹತ್ವವನ್ನು ಸಾರುವ ವೇದಿಕೆಯಾಗಿದೆ. ಕನ್ನಡ ಕೇವಲ ಭಾಷೆಯಲ್ಲ, ಅದು ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಆತ್ಮಗೌರವದ ಪ್ರತೀಕವಾಗಿದೆ ಎಂದರು. ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ



ಡಾ. ಜಯಕುಮಾರ ಸಿಂಧೆ ಮಾತನಾಡಿ, ಕನ್ನಡ ನಾಡಿನ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಪ್ರತಿಯೊಬ್ಬರೂ ಕೈಜೋಡಿಸಬೇಕು. ಕನ್ನಡ ಸಂಸ್ಕೃತಿ, ಆಚಾರ-ವಿಚಾರ,

ಪರಂಪರೆ ಹಾಗೂ ಸಾಹಿತ್ಯದ ಶ್ರೀಮಂತಿಕೆಯನ್ನು ಉಳಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರ ಮಹತ್ವದಗಿದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷ ಅನೀಲಕುಮಾರ್ ಸಿಂಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯ ಉಳಿವಿಗಾಗಿ ಶತಮಾನಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸುತ್ತ ಬರುತ್ತಿದೆ, ಗ್ರಾಮೀಣ ಮಟ್ಟದಿಂದ ಸಾಹಿತ್ಯ ಚಟುವಟಿಕೆಗಳನ್ನು ಉತ್ತೇಜಿಸುವಲ್ಲಿ ಪರಿಷತ್ತಿನ ಕಾರ್ಯ ಶ್ಲಾಘನೀಯವಾಗಿದೆ. ಕನ್ನಡ ಶಾಲೆಗಳ ಉಳಿವಿಗಾಗಿ ರಾಜ್ಯಾದ್ಯಂತ ನಡೆಯುತ್ತಿರುವ ಹೋರಾಟದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಸಕ್ರಿಯವಾಗಿ ಭಾಗವಹಿಸುತ್ತಿದ್ದು, ವಿವಿಧ ಸಾಹಿತ್ಯ, ಸಾಂಸ್ಕೃತಿಕ ಹಾಗೂ ಕನ್ನಡಪರ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕನ್ನಡಾಭಿಮಾನವನ್ನು ಬೆಳೆಸುತ್ತಿದೆ ಎಂದು ನುಡಿದರು.

ಈ ಸಂದರ್ಭದಲ್ಲಿ ವೆಂಕಟಪ್ಪ, ಡಾ. ಚಿತ್ರಶೇಖರ್ ಚಿರಳ್ಳಿ,ಡಾ. ಶಾಂತಕುಮಾರ್, ಡಾ. ಶಿವಕುಮಾರ,ಡಾ. ಮೀನಾಕ್ಷಿ ಪಾಟೀಲ್, ಶಾಂತಕುಮಾರ್ ಪಾಟೀಲ್,ರಮೇಶ್ ಬಿರಾದರ್ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು, ವಿವಿಧ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು.

## ಹೇಮರಡ್ಡಿ ಮಲ್ಲಮ್ಮರ ಭಕ್ತಿಯ ಸಂದೇಶ ಇಂದಿಗೂ ಪ್ರೇರಣೆ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಪಟ್ಟಣದ ತಾಲೂಕು ಆಡಳಿತ ಕಚೇರಿ ಆವರಣದಲ್ಲಿ ರವಿವಾರ ತಾಲೂಕು ಆಡಳಿತದ ವತಿಯಿಂದ 604ನೇ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಭಕ್ತಿಭಾವದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ದಂಡಾಧಿಕಾರಿ ಮಲ್ಲಯ್ಯ ದಂಡೂರ ವಹಿಸಿ ಮಾತನಾಡಿ, ಹೇಮರಡ್ಡಿ ಮಲ್ಲಮ್ಮ ಅವರು ಭಕ್ತಿ, ತ್ಯಾಗ ಮತ್ತು ಸಮಾಜ ಸೇವೆಯ ಮೂಲಕ ಜನಮಾನಸದಲ್ಲಿ ಅಚ್ಚಳಿಯದ ಸ್ಥಾನ ಪಡೆದಿದ್ದಾರೆ ಎಂದು ಹೇಳಿದರು. ಅವರ ಆದರ್ಶಗಳು ಇಂದಿನ ಯುವಪೀಳಿಗೆಗೆ ಮಾರ್ಗದರ್ಶನವಾಗಬೇಕು ಎಂದು ತಿಳಿಸಿದರು.ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ರಾಜಶೇಖರಗೌಡ ಪಾಟೀಲ್ ಮಾತನಾಡಿ, ಸಮಾಜದ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಮಹನೀಯರ ಜಯಂತಿಗಳು ಪ್ರಮುಖ



ಪಾತ್ರ ವಹಿಸುತ್ತವೆ ಎಂದರು. ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಎಚ್.ಸಿ. ಪಾಟೀಲ್ ಮಾತನಾಡಿ, ಹೇಮರಡ್ಡಿ ಮಲ್ಲಮ್ಮ ಅವರ ಜೀವನ ಚರಿತ್ರೆ ಸಮಾಜಕ್ಕೆ ಸ್ಫೂರ್ತಿದಾಯಕವಾಗಿದ್ದು, ಅವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಶಿಕ್ಷಕಿ ಅಕ್ಕಮಹಾದೇವಿ ದೇಸಮುಖ ಅವರು, ಹೇಮರಡ್ಡಿ ಮಲ್ಲಮ್ಮ ಅವರು ಭಗವಂತನಲ್ಲಿ ಸಮಾಜದ ಒಳಿತಿಗಾಗಿ ಎರಡು ಮಹತ್ವದ ವರಗಳನ್ನು ಕೇಳಿಕೊಂಡಿದ್ದರು ಎಂದು ಹೇಳಿದರು. "ರೆಡ್ಡಿ ಕುಲಕ್ಕೆ ಯಾವತ್ತೂ ಬಡತನ ಬಾರದಿರಲಿ" ಹಾಗೂ "ಲಿಂಗಪೂಜೆ ಮತ್ತು ಶ್ರೀ ಮಲ್ಲಿಕಾರ್ಜುನ ಜಾತ್ರೆ ಉತ್ಸವ ನಿತ್ಯ ನಿರಂತರವಾಗಿ ನಡಯಲಿ" ಎಂಬ ಆಶಯಗಳು ಅವರ ಭಕ್ತಿ ಮತ್ತು ಸಮಾಜಪರ ಕಾಳಜಿಯನ್ನು ಪ್ರತಿಬಿಂಬಿಸುತ್ತವೆ ಎಂದು ವಿವರಿಸಿದರು. ಇದೆ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ವಿದ್ಯಾರ್ಥಿಗಳ ಸಾಧನೆಯನ್ನು ಗಣ್ಯರು ಶ್ಲಾಘಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಮಟ್ಟದ ಸಾಧನೆ ಮಾಡುವಂತೆ ಶುಭ ಹಾರೈಸಿದರು.ಸಮಾಜದ ತಾಲೂಕು ಅಧ್ಯಕ್ಷ ಬಾಬುಗೌಡ ಪಾಟೀಲ್ ಹಾಗೂ ಮಲ್ಲಗೌಡ ಪಾಟೀಲ್ ಗುರುನಾಥ ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಗನಗೌಡ ದನರಡ್ಡಿ ಸ್ವಾಗತಿಸಿದರು ಶಿಕ್ಷಕ ಯಂಕಗೌಡ ಅರಕೇರಿ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಾಯ ಗುರುಣ್ಣ ರಾರಡ್ಡಿ ವಂದಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು, ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಬಡ ವಿದ್ಯಾರ್ಥಿಯ ಎರಡು ವರ್ಷದ ಉನ್ನತ ಶಿಕ್ಷಣಕ್ಕೆ ಸಹಾಯಹಸ್ತ ಚಾಚಿದ ಶಾಸಕ ಜೆ ಎನ್ ಗಣೇಶ

• ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ತಾಲೂಕಿನ ಮುಷ್ಠಗಟ್ಟೆ ಗ್ರಾಮದ ಯುವಕ ಎಚ್ ವೀರಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 604 ಅಂಕ ಶೇ 96.64 ಫಲಿತಾಂಶ ಪಡೆದ ಶಾಲೆಯ ಕೃಷಿ ಕುಟುಂಬದ ಬಡ ವಿದ್ಯಾರ್ಥಿ ಚಂದ್ರಶೇಖರ ಪಿಯುಸಿ ವಿಜ್ಞಾನ ವಿಭಾಗದ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ಮುಂದಿನ ಎರಡು ವರ್ಷಗಳ ಕಾಲ ನೀವು ಒಂದು ರೂಪಾಯಿ ವೆಚ್ಚ ಮಾಡಬೇಡಿ ವಿದ್ಯಾಭ್ಯಾಸಕ್ಕೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಡುತೇನೆ ದೈರ್ಯವಾಗಿ ಇರಿ ಎಂದು ಪೋಷಕರಿಗೆ ಭರವಸೆ ನೀಡುವ ಮೂಲಕ ಶಾಸಕ ಜೆ ಎನ್ ಗಣೇಶ ಅವರು ಬಡ ಪ್ರತಿಭಾವಂತ ವಿದ್ಯಾರ್ಥಿಯ ಉನ್ನತ ಶಿಕ್ಷಣಕ್ಕೆ ನೆರವಿನ



ಸಹಾಯ ಹಸ್ತ ಚಾಚಿದ್ದಾರೆ.

ತಾಲೂಕಿಗೆ 3ನೇ ಸ್ಥಾನ ಪಡೆದು ಶಾಲೆ ಹಾಗೂ ಪೋಷಕರಿಗೆ ಹೆಸರು ತಂದು ಮುಂದಿನ ವಿದ್ಯಾಭ್ಯಾಸದ ದೊಡ್ಡ ಕನಸು ಕಂಡಿದ್ದ ಚಂದ್ರು ಕುಟುಂಬ ಆರ್ಥಿಕ ಪರಿಸ್ಥಿತಿ ಅಷ್ಟಕಷ್ಟೆ, ಅಲ್ಲದೆ ಮುಂದಿನ ವಿದ್ಯಾಭ್ಯಾಸ ತೂಗುಯ್ಯಾಲೆಯಲ್ಲಿ ಇತ್ತು. ಆದರೆ ವಿದ್ಯಾರ್ಥಿಯ ಪ್ರತಿಭೆ ಶ್ರಮದ ನೆರವಿಗೆ ಶಾಲೆಯ ಶಿಕ್ಷಕರು ಹಾಗೂ ಗ್ರಾಮಸ್ಥರು ನಿಂತು ವಿದ್ಯಾರ್ಥಿ ತಂದೆಯೊಂದಿಗೆ ಶಾಸಕ ಜೆ ಎನ್ ಗಣೇಶ ಅವರ ಮನೆಗೆ ತೆರಳಿ ವಿಷಯ ಪ್ರಸ್ತಾಪಿಸಿದ್ದಾರೆ, ಕೂಡಲೇ ಶಾಸಕರು ವಿದ್ಯಾರ್ಥಿ ಇಚ್ಛೆಯಂತೆ ಗಂಗಾವತಿ ಪಟ್ಟಣದ ಪ್ರತಿಷ್ಠಿತ ಶ್ರೀ ವಿದ್ಯಾನಿಕೇತನ ಪಿಯು ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಎರಡು ವರ್ಷಗಳ ಶಿಕ್ಷಣ ಮುಂದುವರಿಸಲು ಪೂರ್ಣ ಸಹಕಾರ ನೀಡುವ ಜೊತೆಗೆ ವಿದ್ಯಾಭ್ಯಾಸಕ್ಕೆ ಹಣದ ಸಹಾಯ ಮಾಡುವ ಭರವಸೆ ನೀಡಿದರು. ಇದರೊಂದಿಗೆ ಶಿಕ್ಷಣ ಮುಂದುವರಿಸಲು ಆರ್ಥಿಕವಾಗಿ ಚಿಂತೆಗಿಡಗಿದ್ದ ತಂದೆ ತಾಯಿಗೆ ಶಾಸಕರ ಭರವಸೆ ಮಗನ ಭವಿಷ್ಯಕ್ಕೆ ಆಶಾಕಿರಣ ಮೂಡಿಸಿದೆ.

ಅಲ್ಲದೆ ಶಾಸಕರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಯಾವುದೇ ವಿದ್ಯಾರ್ಥಿಗಳು ಆರ್ಥಿಕವಾಗಿ ಓದಲು ಕಷ್ಟ ಆಗುತ್ತಿದೆ ಎಂದು ಬಂದವರಿಗೆ ದೈರ್ಯ ತುಂಬಿ ಅವರಿಗೆ ನೆರವು ನೀಡುವ ಮೂಲಕ ಯಾವುದೇ ಪ್ರಚಾರವಿಲ್ಲದೆ ಸಹಾಯ ಮಾಡುವ ಸರಳತೆಯ ಸಾಕಾರ ವ್ಯಕ್ತಿತ್ವವುಳ್ಳ ಅಪರೂಪದ ಶಾಸಕರು ಎನ್ನುವುದು ಸಹಾಯ ಪಡೆದವದರ ಅನಿಸಿಕೆಯಾಗಿದೆ.

# ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ




• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರದ ಡಾ. ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಭಾನುವಾರ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಯಿತು.

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ. ಸುಧಾಕರ ಅವರ ಅಕಾಲಿಕ ನಿಧನದ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೂ ಮುನ್ನ ಶೋಕಾಚರಣೆ ನಡೆಸಲಾಯಿತು.

ದುಃಖದ ಈ ಸಂದರ್ಭದಲ್ಲಿ ಪೂರ್ವನಿಗದಿಯಾಗಿದ್ದ ಜಯಂತಿ ಕಾರ್ಯಕ್ರಮವನ್ನು ಅತ್ಯಂತ ಸರಳ ರೀತಿಯಲ್ಲಿ ಆಚರಿಸಿ, ಗಣ್ಯರು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿಗೆ ಇಲಾಖೆ ಉಪನಿರ್ದೇಶಕ್ಕೆ ಜಗದೀಶ್ವರಿ.ಎ. ನಾಸಿ ,ರೆಡ್ಡಿ ಸಮಾಜದ ಅಧ್ಯಕ್ಷರಾದ ಡಾ. ಎಸ್.ಬಿ. ಕಾಮರೆಡ್ಡಿ,ಹೊಸಪೇಟೆ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರುಗಳಾದ ಶೇಖರ ಗಿರಡ್ಡಿ ಇಳಕಲ್ ಸೇರಿದಂತೆ ಸಮಾಜದ ಮುಖಂಡರಾದ ಡಾ. ವಿಶ್ವನಾಥ್ ರೆಡ್ಡಿ, ಚನ್ನಾರೆಡ್ಡಿ ಪಾಟೀಲ್, ಡಾ. ವೀರಭದ್ರಪ್ಪ ರೆಡ್ಡಿ, ಸಿದ್ದರಾಮರೆಡ್ಡಿ ಬಲ್ಕಲ್, ಬಸು ಸೂಗೂರ, ಮಹೇಶ್ ರೆಡ್ಡಿ, ಅನೂಪ ರೆಡ್ಡಿ, ವೈಭವ ರೆಡ್ಡಿ, ವೆಂಕಟ್ ರೆಡ್ಡಿ, ಮಹೇಶ ಹೊಸೂರಕರ್, ಜಿ.ಜಿ. ವಣಿಕ್ಯಾಳ, ಶೇಖರ ರೆಡ್ಡಿ, ಉಪಸ್ಥಿತರಿದ್ದರು.



ಕಲಬುರಗಿ: ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಅವರ ನಿಧನಕ್ಕೆ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಕ್ಷದ ಜಿಲ್ಲಾ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ, ಮುಖಂಡರಾದ ಸುಭಾಷ ರಾಠೋಡ್, ಭೀಮರಾವ ಟಿ.ಟಿ., ರೇಣುಕಾ ಸಿಂಗೆ, ಶಿವಾನಂದ ಕೊರವಿ, ಧರ್ಮರಾಜ ಹೇರೂರ ಸೇರಿದಂತೆ ಮತ್ತಿತರರು ಇದ್ದರು.

# ಚಿತ್ರದುರ್ಗದಲ್ಲಿ ಬಿಎಸ್ ವೈ ಅಭಿಮಾನೋತ್ಸವ ಯಡಿಯೂರಪ್ಪರಿಗೆ ಗೌರವ, ಅಭಿನಂದನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಚಿತ್ರದುರ್ಗದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಐವತ್ತು ವರ್ಷದ ಸಾರ್ವಜನಿಕ ಜೀವನವನ್ನು ಸ್ಮರಿಸುವ ಬಿಎಸ್ ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯ ಅಭಿಮಾನಿಗಳು ಹಾಗೂ ಮುಖಂಡರು ಭಾಗವಹಿಸಿ ಅವರನ್ನು ಅಭಿನಂದಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸುನೀಲ್ ವಲ್ಯಾಪುರೆ, ಮಂಡಲ ಅಧ್ಯಕ್ಷ ವಿಜಯಕುಮಾರ್, ಜಿಲ್ಲಾ ರೈತ ಮೋರ್ಚಾ ಖಜಾಂಚಿ ಮಲ್ಲಿನಾಥ್ ಪಾಟೀಲ್ ಕಾಳಗಿ, ಮಲ್ಲಿನಾಥ್ ಕೋಲಕುಂದಿ, ಶಿವರಾಜ್ ಪಾಟೀಲ್, ಮಲ್ಲಿಕಾರ್ಜುನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು, ಯಡಿಯೂರಪ್ಪ ಅವರ ರಾಜಕೀಯ ಸೇವೆ, ರೈತಪರ ಕಾಳಜಿ ಹಾಗೂ ರಾಜ್ಯದ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಸ್ಮರಿಸಿ ಶುಭಾಶಯ ಕೋರಿದರು.ಈ ಅಭಿಮಾನೋತ್ಸವ ಕಾರ್ಯಕ್ರಮವು



ಸಂಭ್ರಮ, ಗೌರವ ಹಾಗೂ ಅಭಿಮಾನಿಗಳ ಉತ್ಸಾಹದಿಂದ ಕೂಡಿದ ವಿಶೇಷ ಕ್ಷಣಗಳಿಗೆ ಸಾಕ್ಷಿಯಾಯಿತು.

# ಶಹನಾಜ ಬೇಗಂ ಎಸ್‌ಕೆಯುಪಿಎಸ್ ಚಿಂಚೋಳಿ ತಾಲೂಕು ಅಧ್ಯಕ್ಷರಾಗಿ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಚಿಂಚೋಳಿ ತಾಲೂಕಿನ ಸುಲೇಪೇಟೆಯ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿರುವ ಶ್ರೀಮತಿ ಶಹನಾಜ ಬೇಗಂ ಅವರನ್ನು ಎಸ್‌ಕೆಯುಪಿಎಸ್ (ಖಏಗಕಖ) ಸಂಘಟನೆಯ ಚಿಂಚೋಳಿ ತಾಲೂಕು ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.



ಈ ಕುರಿತು ಎಸ್‌ಕೆಯುಪಿಎಸ್ ಸಂಸ್ಥಾಪಕ ರಾಜ್ಯಾಧ್ಯಕ್ಷ ಗುರುಪಾದ ಕೋಗನೂರ ಹಾಗೂ ರಾಜ್ಯ ಕೋಶಾಧ್ಯಕ್ಷ ಝುಕೀರ್ ಹುಸೇನಿ ಕೂಪನೂರ್ ಜಂಟಿಯಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಹನಾಜಬೇಗಂ ಅವರ ನೇಮಕಾತಿಯಿಂದ ಸಂಘಟನೆಯ ಚಟುವಟಿಕೆಗಳು ತಾಲೂಕಿನಲ್ಲಿ ಮತ್ತಷ್ಟು ಬಲಗೊಳ್ಳಲಿದ್ದು,

ಶಿಕ್ಷಣ ಕ್ಷೇತ್ರದಲ್ಲಿ ಅವರ ಅನುಭವ ಸಂಘಟನೆಗೆ ಉಪಯುಕ್ತವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಡಾ. ರವೀಂದ್ರ ಬಳಿಗಾರ ಅವರ ವರ್ಲ್ಡ್ ಲೈಫ್ ಆರ್ಟ್ ಗ್ಯಾಲರಿ ಉದ್ಘಾಟನೆ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರದ ಗಂಜ ಕಾಲೋನಿಯಲ್ಲಿ ಜೀವಶಾಸ್ತ್ರ ಉಪನ್ಯಾಸಕರಾದ ಡಾ. ರವೀಂದ್ರ ಬಳಿಗಾರ ಅವರ ಸ್ವಗೃಹದಲ್ಲಿ ನಿರ್ಮಿಸಿರುವ ಕನಸಿನ ವರ್ಲ್ಡ್ ಲೈಫ್ ಆರ್ಟ್ ಗ್ಯಾಲರಿಯನ್ನು ದಿಶಾ ಪದವಿ ಪೂರ್ವ ಕಾಲೇಜಿನ ಅಧ್ಯಕ್ಷ ಶಿವಾನಂದ ಖಜೂರಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಿವಾನಂದ ಖಜೂರಿ, "ಡಾ. ರವೀಂದ್ರ ಬಳಿಗಾರ ಅವರು ವೃತ್ತಿಯಲ್ಲಿ ಜೀವಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಾ, ತಮ್ಮೊಳಗಿನ ಬಹುಮುಖ ಪ್ರತಿಭೆಯನ್ನು ಅನಾವರಣಗೊಳಿಸಿ ಜೀವಶಾಸ್ತ್ರಕ್ಕೆ ಸಂಬಂಧಿಸಿದ ವಿಶಿಷ್ಟ ಹಾಗೂ ಅದ್ಭುತ ಕಲಾಕೃತಿಗಳನ್ನು ರಚಿಸಿರುವುದು ಶ್ಲಾಘನೀಯ. ಅವರ ಕಲಾಸಕ್ತಿ ಮತ್ತು ಕೈಚಳಕ ಇಂದಿನ ಯುವಪೀಳಿಗೆಗೆ ಪ್ರೇರಣೆ–ಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಮೂಲ್ಯ ಕಲಾಕೃತಿಗಳು ಹೊರಬರಲಿ" ಎಂದು ಶುಭ ಹಾರೈಸಿದರು.

ಜೀವಶಾಸ್ತ್ರದ ಅಂಶಗಳನ್ನು

ಕಲಾತ್ಮಕವಾಗಿ ಮೂಡಿಸಿರುವ ಈ ಗ್ಯಾಲರಿ ನೋಡುಗರ ಗಮನ ಸೆಳೆಯುವಂತಿದ್ದು, ಡಾ. ರವೀಂದ್ರ ಬಳಿಗಾರ ಅವರ ಸೃಜನಶೀಲತೆಗೆ ಸಾಕ್ಷಿಯಾಗಿದೆ.

ಕಾರ್ಯಕ್ರಮದಲ್ಲಿ ವೀರೇಂದ್ರ ಬಳಿಗಾರ, ಗೌರಿಶಂಕರ್, ಡಾ. ಸಂಜಯ್ ಸಿಂಹಾಸನೆ, ಆನಂದ ಬಡಶೇಷಿ, ಸಂತೋಷ್ ಜಕಾಪುರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸೌಹಾರ್ದತೆಯ ಶಹಾಪುರದಲ್ಲಿ ವಿಷ ಬೀಜ ಬಿತ್ತಬೇಡಿ: ಹೊನ್ಕಲ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಬಸವಾದಿ ಶರಣರು ಯಾರ ಸ್ವತ್ತಲ್ಲ. ಸರ್ಕಾರ ಬಸವಣ್ಣನನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಅಂತ ಘೋಷಣೆ ಮಾಡಿದೆ. ಬಸವಾದಿ ಶರಣ–ರು ಸಮಾನತೆ, ಸೌಹಾರ್ದತೆ, ಸಕಲ ಜೀವಾತ್ಮರಲಿ ಲೇಸ ಬಯಸುವ ಆಶಯ ಹೊಂದಿದ್ದವರು. ಅಂತಹ ಆಶಯಗಳನ್ನು ಎತ್ತಿ ಹಿಡಿಯುವ ಯಾರೇ ಆದರೂ ಅವರ ಕಾರ್ಯಕ್ರಮಗಳು ನೂರಾರು ಮಾಡಲಿ. ಸಂವಿಧಾನ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ಅದು ಅವರ ಹಕ್ಕು ಇರಬಹುದು. ಮುಖ್ಯವಾಗಿ ನಮ್ಮ ಶಹಾಪುರ ಮೊದಲಿನಿಂದಲೂ ಶಾಂತಿ ಸೌಹಾರ್ದತೆಯ ನೆಲ. ಇಲ್ಲಿಯ ಶಾಂತಿ ಕದಡಿ ಸಂಘರ್ಷದ ವಾತಾವರಣ ಉಂಟಾಗುವ, ಮತೀಯ ಮನೋಭಾವ ಬೆಳೆಸುವ, ಮೇಲು ಕೀಳು ಬಿತ್ತುವ, ಮನಸ್ಸುಗಳನ್ನು ಒಡೆಯುವ ಕಾರ್ಯಕ್ರಮ ಯಾರೇ ಮಾಡಿದರು ಅದು ಸರಿಯಲ್ಲ. ಹೊರಗಿನಿಂದ ಬಂದವರು ಒಂದು ದಿನ ಏನೇ ಪ್ರಚೋದನಕಾರಿ ಭಾಷಣ ಮಾಡಿ ಚಪ್ಪಾಳೆ ಗಿಟ್ಟಿಸಿಕೊಂಡು ಹೋಗುತ್ತಾರೆ. ಇಲ್ಲಿ ಸಹಬಾಳ್ವೆ ಮಾಡುವ ಜನರ ನೆಮ್ಮದಿ ಕೆಡಿಸುವ ಕೆಲಸ ಯಾರೇ ಮಾಡಿದರೂ ಅದು ಖಂಡಿತ ತಪ್ಪು. ಹಾಗಾಗದಿರಲಿ. ಬಂದವರೆಲ್ಲ ಬಸವಾದಿ ಶರಣರ ಆಶಯ ಬಿತ್ತುವ ಕೆಲಸ ಮಾಡಲಿ ಎಂದು ಸೌಹಾರ್ದತೆಯ ನೆಲೆಯ ಒಬ್ಬ ಲೇಖಕನಾಗಿ ನನ್ನ ವೈಯಕ್ತಿಕ ವಿನಂತಿ ಎಂದು ಲೇಖಕ ಸಿದ್ಧರಾಮ ಹೊನ್ಕಲ್ ಪತ್ರಿಕಾ ಪ್ರಕಟಣೆ ಮೂಲಕ ಶಹಾಪುರದಲ್ಲಿ ಸಮಾವೇಶ ನಡೆಸಲು ಮುಂದಾದ ವರದಲ್ಲಿ ಕೋರಿದ್ದಾರೆ.

# ಐ ಆಮ್ ಎ ಲೀಡರ್ ಪುಸ್ತಕ ಲೋಕಾರ್ಪಣೆ: ಯುವಕರಿಗೆ ಮಾರ್ಗದರ್ಶಿ ಎಂದ ಶಾಸಕ ಶರಣಗೌಡ ಕಂದಕೂರ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಮೇ.10:ಚಾಣಕ್ಯರನೀತಿಗಳನ್ನು ಅಳವಡಿಸಿಕೊಂಡು ಇಂದಿನ ಆಧುನಿಕ ರಾಜಕಾರಣದಲ್ಲಿ ಗ್ರಾಮ ಮಟ್ಟದ ಯುವಕರು ಹೇಗೆ ಉತ್ತಮ ನಾಯಕರಾಗಿ ಹೊರಹೊಮ್ಮಬೇಕು ಎಂಬ ಸದುದ್ದೇಶದಿಂದ ಪತ್ರಕರ್ತ **ಹಣಮಂತ್ ದೇಶಮುಖ್ ಅವರು ಬರೆದ ಐ ಆಮ್ ಎ ಲೀಡರ್' ಪುಸ್ತಕವನ್ನು ಗುರುಮಿಟ್ಕಲ್ ಮತಕ್ಷೇತ್ರದ ಶಾಸಕ ಶರಣಗೌಡ ಕಂದಕೂರ್ ಅವರು ಸಾಂಕೇತಿಕವಾಗಿ ಬಿಡುಗಡೆಗೊಳಿಸಿದರು. ಪುಸ್ತಕವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಶಾಸಕ ಶರಣಗೌಡ ಕಂದಕೂರ್ ಅವರು,"ಈ ಪುಸ್ತಕವು ಇಂದಿನ ಯುವಕರಿಗೆ ಅತ್ಯುತ್ತಮ ಮಾರ್ಗದರ್ಶಿಯಾಗಿದೆ. ಯುವ ರಾಜಕಾರಣಿಯಾಗಿ ಬೆಳೆಯಲು ಬಯಸುವವರಿಗೆ ಇದೊಂದು ಕೈಪಿಡಿಯಂತೆ ಕೆಲಸ ಮಾಡಲಿದೆ.ಚಾಣಕ್ಯರ ನೀತಿಗಳನ್ನು ಒಳಗೊಂಡ ಈ ಕೃತಿ ತುಂಬಾ ಅದ್ಭುತವಾಗಿ ಮೂಡಿಬಂದಿದೆ. ಹನಮಂತ್ ಅವರು ಕೇವಲ ಸುದ್ದಿಗಾರರಾಗಿರದೆ, ಬರವಣಿಗೆಯ ಮೂಲಕ ಸಮಾಜಕ್ಕೆ ಇಂತಹ ಉತ್ತಮ ಸಾಹಿತ್ಯ ನೀಡುತ್ತಿರುವುದು ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಲೇಖಕ ಹಾಗೂ ಪತ್ರಕರ್ತ ಹನಮಂತ್ ದೇಶಮುಖ್ ಮಾತನಾಡಿ, "ಶರಣಗೌಡ ಕಂದಕೂರ್ ಅವರು ಕಲ್ಯಾಣ ಕರ್ನಾಟಕ ಭಾಗದ ಅತ್ಯುತ್ತಮ ಉದಯೋನ್ಮುರಾಜಕಾರಣಿಯಾಗಿದ್ದು, ಯುವಕರಿಗೆ ಮಾದರಿಯಾಗಿದ್ದಾರೆ. ಅವರ ಜನಪರ ಕಾಳಜಿ ಮತ್ತು ಕಾರ್ಯವೈಖರಿಯನ್ನು ಹತ್ತಿರದಿಂದ ಕಂಡ ನಾನು,ಈ ಪುಸ್ತಕಕ್ಕೆ ಅವರೇ ಮುನ್ನುಡಿ ಬರೆಯಬೇಕೆಂದು ಬಯಸಿದ್ದೆ.ಅದಕ್ಕೆ ಸ್ಪಂದಿಸಿ ಮುನ್ನುಡಿ ಬರೆದುಕೊಟ್ಟ ಅವರಿಗೆ ಧನ್ಯವಾದಗಳು.ಅವರ ಕೈಯಿಂದಲೇ ಪುಸ್ತಕ ಬಿಡುಗಡೆಯಾಗುತ್ತಿರುವುದು ನನಗೆ ಹೆಮ್ಮೆಯ ವಿಷಯ ಎಂದರು.ಈ ಪುಸ್ತಕವು ರಾಜಕೀಯಆಸಕ್ತಿ ಹೊಂದಿರುವ ಗ್ರಾಮೀಣ ಭಾಗದ ಯುವ ಸಮೂಹಕ್ಕೆ ನಾಯಕತ್ವದಗುಣಗಳನ್ನು ಬೆಳೆಸಿಕೊಳ್ಳಲು ಪೂರಕವಾಗಲಿದೆ ಎಂದು ಲೇಖಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಹೆಣ್ಣು ಮಕ್ಕಳಿಗೆ ಆದರ್ಶಗಳನ್ನು ತೋರಿಸಿಕೊಟ್ಟ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ.10:ಕಷ್ಟ ಕಾರ್ಪಣ್ಯಗಳ ಸಾಗರ ಬೆನ್ನು ಹತ್ತಿದರೂ ಅಲ್ಪವೂ ಧೃತಿಗೆಡದೇ ಆದರ್ಶದ ಬದುಕು ನಡೆಸುವ ಮೂಲಕ ಹೆಣ್ಣುಕುಲಕ್ಕೇ ಮಾದರಿಯಾಗಿರುವ ಮಹಾಸಾಧ್ವಿ

ಹೇಮರೆಡ್ಡಿ ಮಲ್ಲಮ್ಮ ಅವರ ಜೀವನಾರ್ದಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕೆಂದು ಸರ್ಕಾರಿ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಸುಭಾಷಚಂದ್ರ ಕೌಲಗಿ ಹೇಳಿದರು.

ಜಿಲ್ಲಾಡಳಿತ, ಜಿಪಂ, ನಗರಸಭೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಸಮಿತಿ ಸಂಯುಕ್ತಾಶ್ರಯದಲ್ಲಿ ಭಾನುವಾರ ಇಲ್ಲಿನ ಸರ್ಕಾರಿ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಿದ್ದ ಮಹಾಸಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.





ಹೇಮರಡ್ಡಿ ಮಲ್ಲಮ್ಮ ಜಾತಿಗಳನ್ನು ಮೀರಿದ ಸಾಧ್ವಿ. ಹೆಣ್ಣುಕುಲದ ದೈವೀಶಕ್ತಿ. ಆದರ್ಶ ಸೊಸೆ, ಆದರ್ಶ ಮಡದಿ ಹೇಗಿರಬೇಕು ಎಂಬುದನ್ನು ಶತ,ಶತಮಾನಗಳ ಹಿಂದೆಯೇ ನಿರೂಪಿದ ಮಾದರಿ ಮಹಿಳೆ ಎಂದರು.

ಜೀವನದ ಮೇಲಿನ ಅವಳ ಶ್ರದ್ಧೆ, ಸಾಮಾಜಿಕ ಕಳಕಳಿ, ಭಕ್ತಿಯನ್ನು ಕಂಡು ಸಾಕ್ಷಾತ್ ಶ್ರೀಶೈಲ ಮಲ್ಲಿಕಾರ್ಜುನನೇ ಒಲಿದಿದ್ದರು.

ಒಬ್ಬ ಮಹಿಳೆಗೆ ಕಷ್ಟಗಳು ಎಷ್ಟು ಬರಬೇಕೋ ಅಷ್ಟರ ಮಟ್ಟಿಗೆ ಅವುಗಳನ್ನು ಎದುರಿಸಿದ ಮಲ್ಲಮ್ಮ ಎಂದಿಗೂ ಎದೆಗುಂದದೇ ಎಲ್ಲವನ್ನು ನುಂಗಿ, ಧೃತಿಗೆಡದೇ ಗಂಡನ ಮನೆಯನ್ನು ಉದ್ಧಾರ ಮಾಡಿದ ಮಹಾಸಾಧ್ವಿ ಎಂದು ಕೌಲಗಿ ಬಣ್ಣಿಸಿದರು.

ಹೇಮರೆಡ್ಡಿ ಮಲ್ಲಮ್ಮ ಮಹಿಳೆಯರ ಕುಲ ತಿಲಕವಾಗಿದ್ದಾರೆ. ಅವರ ತತ್ವಾದರ್ಶಗಳು ಸರ್ವಕಾಲಿಕ ಶ್ರೇಷ್ಠ. ಸಹನೆಯಲ್ಲಿ ಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಹೆಸರುವಾಸಿಯಾಗಿದ್ದರೆಂದರು

ಹೇಮರೆಡ್ಡಿ ಮಲ್ಲಮ್ಮಬೆಂಕಿಯಲ್ಲಿ ಅರಳಿದ ಬಂಗಾರ

ಸುಮಾರು ಆರುನೂರು ವರ್ಷಗಳ ಹಿಂದೆ ಆಂದ್ರದ ಶ್ರೀಶೈಲ ಸಮೀಪದ ಗ್ರಾಮವೊಂದರಲ್ಲಿ ಸಾಮಾನ್ಯ ಕುಟುಂಬದಲ್ಲಿ ಜನಸಿದ ಮಲ್ಲಮ್ಮಳ ಸರ್ವಾಂಗೀಣ ಏಳಿಗೆಗೆ ಅಡಿಪಾಯ ಹಾಕಿದವರು ಆಕೆ–ಯ ತಂದೆ ನಾಗರೆಡ್ಡಿ ಎಂಬುವುದು ಯಾರು ಮರೆಯುವಂತಿಲ್ಲ. ಹುಚ್ಚನಂತಹ ಗಂಡನನ್ನು ಕಟ್ಟಿಕೊಂಡು, ಮನೆಯಲ್ಲಿ ಅಡಿ,ಅಡಿಗೂ ಕಷ್ಟ ಕೊಡುವವರ ನಡುವೆ ಕುಲಮೆಯಲ್ಲಿ ಬೆಂದ ಬಂಗಾರದಂತೆ–ಯೇ ಬೆಳಗಿದ ಹೇಮರೆಡ್ಡಿ ಮಲ್ಲಮ್ಮ ಸಂಸಾರದಲ್ಲಿ ಇದ್ದುಕೊಂಡೆ ಧರ್ಮದ ಜಗತ್ತು ಗೆದ್ದ ಆದರ್ಶ ಮಹಿಳೆಯಾಗಿದ್ದಳು ಎಂದು

ಡಾ.ಸುಭಾಷಚಂದ್ರ ಕೌಲಗಿ ಅವರು ಹೇಳಿದರು.

ಸಚಿವ ಸುಧಾಕರ ನಿಧನದ ಹಿನ್ನಲೆಯಲ್ಲಿ ಸರಳ ಸಮಾರಂಭ

ಸಚಿವ ಸುಧಾಕರ ಅವರ ನಿಧನದ ಹಿನ್ನಲೆಯಲ್ಲಿ ಸರ್ಕಾರ ಆದೇಶದಂತೆಯೇ ಕಾರ್ಯಕ್ರಮ ಅತ್ಯಂತ ಸರಳವಾಗಿ ಆಚರಿಸಲಾಯಿತು. ಆರಂಭದಲ್ಲಿ ಅವರ ಆತ್ಮಕ್ಕೆ ಶಾಂತಿಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ನಂತರ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಎಡಿಸಿ ರಮೇಶ ಕೋಲಾರ, ಯುಡಾ ಅಧ್ಯಕ್ಷ ಬಾಬುರಾವ ಕಾಡ್ಲೂರ, ವೀರಶೈವ ರೆಡ್ಡಿ ಸಮಾಜದ ಜಿಲ್ಲಾಧ್ಯಕ್ಷ ರಾಮರೆಡ್ಡಿ ಗೌಡ ತಂಗಡಗಿ, ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ, ಪಿಎಸ್ ಐ ಮಂಜನಗೌಡ ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ಉತ್ತರಾದೇವಿ ಮಠಪತಿ ವೇದಿಕೆಯಲ್ಲಿ ಇದ್ದರು.

ಭವ್ಯ ಮೆರವಣಿಗೆ ಕಾರ್ಯಕ್ರಮದ ಆರಂಭಕ್ಕೂ ಮುನ್ನ ನಗರದ ಪ್ರಮುಖ ರಸ್ತೆಗಳಲ್ಲಿ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರದ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು.ವೀರಶೈವ ರೆಡ್ಡಿ ಸಮಾಜದ ಪದಾಧಿಕಾರಿಗಳು, ಯುವಕರು ಸಮಾಜದ ಪ್ರಮುಖರಾದ ಮಲ್ಲಣ್ಣಗೌಡ ಕೌಳೂರು, ಡಾ.ಸಿದ್ದರಾಜರೆಡ್ಡಿ, ಬಸವಂತರೆಡ್ಡಿ ಸೇರಿದಂತೆ ಅನೇಕರು ಇದ್ದರು.

# ಹೇಮರೆಡ್ಡಿ ಮಲ್ಲಮ್ಮನವರ ಕೊಡುಗೆ ಅನನ್ಯ




• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

14ನೇ ಶತಮಾನದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ದೈವಭಕ್ತಿ, ಕಾಯಕ ನಿಷ್ಠೆ, ದಾನ ಧರ್ಮದಿಂದ, ಆದರ್ಶ ಗೃಹಿಣಿಯಾಗುವ ಮೂಲಕ ಲೋಕ ಪ್ರಸಿದ್ಧಿ ಪಡೆದಿದ್ದಾರೆ. ಅವರು ನೀಡಿರುವ ತತ್ವ ಅನುಕರಣೀಯವಾಗಿದೆ. ಅವರು ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಹೇಳಿದರು.

ನಗರದ ಆಳಂದ ರಸ್ತೆಯ ಸಂತೋಷ ಕಾಲನಿ ಕ್ರಾಸ್ ಸಮೀಪದ 'ರಿಪಬ್ಲಿಕ್ ಸ್ಪೋಕನ್ ಇಂಗ್ಲೀಷ್ ಅಕಾಡೆಮಿ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಭಾನುವಾರ ಜರುಗಿದ "ಶರಣೆ ಹೇಮರೆಡ್ಡಿ ಮಲ್ಲಮ್ಮನವರ 604ನೇ ಜಯಂತಿ'ಯ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಶರಣ ಚಿಂತಕ ಡಾ.ರಾಜಶೇಖರ ಪಾಟೀಲ ಮಾತನಾಡಿ,

ಸುಖ–ದುಃಖ, ಸ್ತುತಿ–ನಿಂದನೆ ಎಲ್ಲವನ್ನು ಸಮಚಿತ್ತದಿಂದ ಸ್ವೀಕರಿಸಿ, ಶ್ರೀಶೈಲ ಮಲ್ಲಿಕಾರ್ಜುನನ್ನು

ಸಾಕ್ಷಾತ್ಕರಿಸಿಕೊಂಡ ಹೇಮರೆಡ್ಡಿ ಮಲ್ಲಮ್ಮನವರ ಬದುಕು ಆದರ್ಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ದತ್ತು ಹಡಪದ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ, ದಿನೇಶ್ ಮಿಶ್ರಾ ಹಾಗೂ ವಿದ್ಯಾರ್ಥಿಗಳು ಇದ್ದರು.

## ಭೋವಿ ಸಂಘ ರಚಿಸಲು ನಿರ್ಧಾರ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ತಾಲ್ಲೂಕಿನಲ್ಲಿ ಹಲವಾರು ವರ್ಷ ಗಳಿಂದ ಭೋವಿ ಜನಾಂಗದ ಸರಿಯಾದ ಸಂಘಟನೆ ಇಲ್ಲದಿರುವುದರಿಂದ ಜನಾಂಗದ ಸಾಮಾಜಿಕ ,ಶೈಕ್ಷಣಿಕ ಹಾಗು ಆರ್ಥಿಕ ಪ್ರಗತಿಗಾಗಿ ಸಂಘಟನೆ ಮಾಡುವ ಉದ್ದೇಶದಿಂದ ಹೊಸದಾಗಿ ಸಂಘವನ್ನು ಪ್ರಾರಂಭಿಸಲು ತಾಲ್ಲೂಕಿನ ಜನಾಂಗದ ಹಿರಿಯರಾದ ಶ್ರೀ .ತಿಮ್ಮರಸಭೋವಿ ರವರ ಅದ್ಯಕ್ಷತೆಯಲ್ಲಿ ನಗರದ ನಕ್ಷತ್ರ ಹೋಟೆಲ್ ಸಭಾಂಗಣ ದಲ್ಲಿ ನಡೆದ ಸಭೆಯಲ್ಲಿ ತಾಲ್ಲೂಕಿನ ಎಲ್ಲಾ ಭಾಗಗಳಿಂದ ಬಂದ ಜನಾಂಗ ದವರೊಡನೆ ಚರ್ಚಿಸಿ ಸಂಘ ರಚಿಸಲು ನಿರ್ದೇಶಕರನ್ನು ಸರ್ವಾನುಮತದಿಂದ ಆಯ್ಕೆಮಾಡಲಾಯಿತು .ಸಭೆಯಲ್ಲಿ ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿ .ವೈ ಭೋಜರಾಜ ,ಕಾಟರಾಜು ,ತಿಮ್ಮರಾಜು ,ಸ್ವಾಮಿಭೋವಿ ,ಪಿ .ಈರಯ್ಯ ,ಆರ್.ರಾಮಯ್ಯ ,ಕೆ .ಗಣೇಶ್ ,ಟಿ .ನಾಗರಾಜು ಮುಂತಾದವರುಭಾಗವಹಿಸಿದ್ದರು

## 192ನೇ ದಿನದ ಬಲ್ಡೋಟ ಕಾರ್ಖಾನೆ ತೊಲಗಿಸಿ ಕೊಪ್ಪಳ ಉಳಿಸಿ ಧರಣಿ ಪೂರ್ಣ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಮೇ.10: ನಗರಸಭೆ ಆವರಣದಲ್ಲಿ 192 ದಿನಗಳಿಂದ ನಡೆಯುತ್ತಿರುವ ಧರಣಿ ಹೋರಾಟಕ್ಕೆ 371(ಜೆ) ಹೋರಾಟ ವೇದಿಕೆ ಮುಖಂಡರಾದ ರಾಘವೇಂದ್ರ ಕುಷ್ಟಗಿ ಅವರು ಬೆಂಬಲಿಸಿ ಮಾತನಾಡಿ, ನ್ಯಾ. ಮಾರ್ಕಾಂಡೇಯ ಕಟ್ಜೂ ಅವರ ಕೆರೆ, ಸರೋವರ ರಕ್ಷಿಸುವ ಕೊಟ್ಟ ತೀರ್ಪನ್ನು ಉಲ್ಲೇಖಿಸಿ ಈ ತೀರ್ಪಿನಲ್ಲಿ ಯಾವುದೇ ಕಾರಣಕ್ಕೂ ಕೆರೆ ಕಟ್ಟೆ, ಸರೋವರ, ಗೋಮಾಳ ಸರ್ಕಾರ ಪರಭಾರೆ ಮಾಡುವಂತಿಲ್ಲ. ಇವುಗಳು ಪರಂಪರಾಗತವಾಗಿ ಸಮುದಾಯಗಳು ಸೃಷ್ಟಿಸಿಕೊಂಡ ಸಾಮೂಹಿಕ ಜನರು ಬಳಸುವ ಆಸ್ತಿಗಳಾಗಿವೆ. ಇದರ ಮೇಲೆ ಸರ್ಕಾರದ ಒಡೆತನದ ಹಕ್ಕಿಲ್ಲ. ಈ ಸ್ವತ್ತುಗಳ ಮೇಲೆ ಯಾವತ್ತೂ ಸಮುದಾಯದ ಪರಮಾಧಿಕಾರವಿದೆ. ಒಂದು ವೇಳೆ ಯಾವುದೇ ಕಾರಣದಿಂದ ಪರಭಾರೆ ಮಾಡಿದ್ದಲ್ಲಿ ವಾಪಸ್ ಪಡೆಯಬೇಕು ಎಂದಿರುವದನ್ನು ಆದೇಶ ಪ್ರತಿ ಹಿಡಿದು ತೋರಿಸಿದರು. ಸಿದ್ದರಾಮಯ್ಯ ಸರ್ಕಾರ ಇದರ ಅನುಸಾರ ಬಸಾಪುರ ಕೆರೆಯನ್ನು ವಾಪಸ್ ಪಡೆದರೆ ಜನರಿಗೆ ಉಪಕಾರ ಮಾಡಿದಂತೆ ಆಗುತ್ತದೆ. ಇಲ್ಲಿ ಪರಂಪರಾಗತ ನಾಟಿ ಹಸುಗಳು ಸಾವಿರಾರು ಸಂಖ್ಯೆಯಲ್ಲಿ ಸಾಕಾಣಿಕೆ ಮಾಡುತ್ತಿರುವುದು ಸರ್ಕಾರ ಗಮನಿಸಬೇಕು. ಅತಿಕ್ರಮಿಸಿದ ಬಲ್ಡೋಟ ಕಂಪನಿಯಿಂದ ಕೆರೆಯನ್ನು ಮುಕ್ತಗೊಳಿಸಬೇಕು ಎಂದರು.

ಬಲ್ಡೋಟ ಕಾರ್ಖಾನೆ ತೊಲಗಿಸಿ ಕೊಪ್ಪಳ ಭಾಗ್ಯನಗರದ ಜನರ ಜೀವ, ಆರೋಗ್ಯ ಉಳಿಸಬೇಕು. ಗವಿಶ್ರೀಗಳ ಮಾತಿನಂತೆ ಬಲ್ಡೋಟ ವಿಸ್ತರಣೆಯ ಒಡಂಬಡಿಕೆ ವಾಪಸ್ ಪಡೆದ ಪತ್ರವನ್ನು ಜನಪ್ರತಿನಿಧಿಗಳು ತರಬೇಕು. ಜಿಲ್ಲಾ ಕೇಂದ್ರಕ್ಕೆ ಹೊಂದಿಕೊಂಡು 2011ರಿಂದ ಎಂಎಸ್‌ಪಿಎಲ್ ಪೆಲ್ಲೆಟ್ ಘಟಕದ ಮಾಲಿನ್ಯ ನಗರದ ಅರ್ಧ ವಾರ್ಡಗಳಿಗೆ ಆಗುತ್ತಿದೆ. ಇಲ್ಲಿರುವ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುತ್ತಿದ್ದು, ಈ ಪೆಲ್ಲೆಟ್ ಘಟಕ ಬಂದ್ ಮಾಡಿ ನಗರದ ಜನರ ಆರೋಗ್ಯ, ಜೀವ ಉಳಿಸಬೇಕು. ಬಲ್ಡೋಟ ಕಂಪನಿ ಬಸಾಪುರ ಕೆರೆಯನ್ನು ಅನಧಿಕೃತವಾಗಿ ಮಂಜೂರಿ ಪಡೆದಿದ್ದು ಸುತ್ತಲಿನ ಸಾವಿರಾರು ಜಾನುವಾರು ನೀರು ಕುಡಿಯಲು ಕಾಂಪೌಂಡ್ ತೆರವು ಮಾಡಬೇಕು. ತುಂಗಭದ್ರಾ ನೀರು ವಿಷಗೊಳಿಸುವ ಮಾಲಿನ್ಯಕಾರಿ ಕಾರ್ಖಾನೆಗಳನ್ನು ಮುಚ್ಚಬೇಕು. ಹಿರೇಬಗನಾಳ, ಅಲ್ಲಾನಗರ ಹತ್ತಿರದ ಸ್ಪಾಂಜ್ ಐರನ್ ಘಟಕಗಳನ್ನು ಕೇಂದ್ರ ಪರಿಸರ ಇಲಾಖೆ ವರದಿಯ ಶಿಫಾರಸಿನಂತೆ ನಿರ್ಜನ ಪ್ರದೇಶಕ್ಕೆ ಸ್ಥಳಾಂತರಿಸಬೇಕು. ಸರ್ಕಾರ ಕಾರ್ಖಾನೆ ಧೂಳು ಬಾಧಿತ 22 ಹಳ್ಳಿಗಳ ಪುನರುಜ್ಜೀವನಮಾಡಲು ವಿಶೇಷ ಪ್ಯಾಕೇಜ್ ಘೋಷಿಸಬೇಕು. ಎ.ಐ.ಐ.ಎಂಎಸ್ ಸಂಸ್ಥೆ ಮತ್ತು ಐ.ಐ.ಎಸ್.ಸಿ ಸಂಸ್ಥೆಯಿಂದ ಜನರ ಆರೋಗ್ಯ ಮತ್ತು ಪರಿಸರ ಹಾನಿಯ ಸಮೀಕ್ಷೆ ನಡೆಸಬೇಕು ಎಂದು ಜಿಲ್ಲಾ ಬಚಾವೋ ಆಂದೋಲನ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನೇತೃತ್ವದಲ್ಲಿ ಧರಣಿ ಹೋರಾಟ ಮುಂದುವರಿಯುತ್ತಿದೆ. ಧರಣಿಯಲ್ಲಿ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು, ಸಿಪಿಐ ಮುಖಂಡ ಡಾ.ಕೆ.ಎಸ್ ಜನಾರ್ಧನ್, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಸರೋಜಾ ಬಾಕಳೆ, ಶಿವಕುಮಾರ ಕುಕನೂರು, ಶರಣು ಡೊಳ್ಳಿನ, ಭಂಡಾರಿ ವೀರಣ್ಣಶೆಟ್ಟಿ ರಾಯಚೂರು, ಶಂಭುಲಿಂಗಪ್ಪ ಹರಗೇರಿ, ವಿನೋದ ಡೊಳ್ಳಿನ, ರಾಜಶೇಖರ ಕೊಡ್ಲಿ, ಭಾಖರ್ ಹುಸೇನ್, ಗಾಳೆಪ್ಪ ಕಡೇಮನಿ, ರಾಜಶೇಖರ ಏಳುಬಾವಿ, ಮಹಾದೇವಪ್ಪ ಮಾವಿನಮಡು, ನಾಗರಾಜ ಕುಷ್ಟಗಿ ಲಾಚನಕೇರಿ, ಪಂಪಣ್ಣ ಚಿಂತಪಲ್ಲಿ, ವಿಜಯಮಹಾಂತೇಶ ಹಟ್ಟಿ, ಶಿವಪ್ಪ ಜಲ್ಲಿ, ಪರಶುರಾಮ ಮೇಘರಾಜ, ಗಾಳೆಪ್ಪ ಪೂಜಾರ ಮುದ್ದಾಬಳ್ಳಿ ಇದ್ದರು.

## ಮೇ 15ರಿಂದ ಉಚಿತ ಕರಾಟೆ ತರಬೇತಿ ಶಿಬಿರ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಇಂದಿನ ಆಧುನಿಕ ಸಮಾಜದಲ್ಲಿ ವಿದ್ಯಾರ್ಥಿಗಳ ಶಿಕ್ಷಣದ ಜೊತೆಗೆ ಆತ್ಮರಕ್ಷಣೆ, ದೈಹಿಕ ಸಾಮರ್ಥ್ಯ ಹಾಗೂ ಮಾನಸಿಕ ದೃಢತೆಯೂ ಅತ್ಯಂತ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಡಿಡಿಯು ಶಿಕ್ಷಣ ಸಂಸ್ಥೆ ವತಿಯಿಂದ ವಿದ್ಯಾರ್ಥಿಗಳಿಗಾಗಿ ಉಚಿತ ಕರಾಟೆ ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಆಡಳಿತಾಧಿಕಾರಿ ಮಲ್ಲಿಕಾರ್ಜುನ್ ಮೇಟಿ ಹೇಳಿದರು. ರವಿವಾರ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ದೈಹಿಕ ಚಟುವಟಿಕೆಗಳ ಕೊರತೆ, ಆತ್ಮವಿಶ್ವಾಸದ ಅಭಾವ ಮತ್ತು ಮಹಿಳೆಯರ ಮೇಲಿನ ಕಿರುಕುಳದಂತಹ ಘಟನೆಗಳು ಹೆಚ್ಚುತ್ತಿರುವುದು ಸಮಾಜದ ಆತಂಕಕ್ಕೆ ಕಾರಣವಾಗಿದೆ. ಈ ಹಿನ್ನೆಲೆ ವಿದ್ಯಾರ್ಥಿಗಳಲ್ಲಿ ಆತ್ಮರಕ್ಷಣೆಯ ಕೌಶಲ್ಯ ಬೆಳೆಸುವ ಉದ್ದೇಶದಿಂದ ಈ ವಿಶೇಷ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಮೇ 15ರಿಂದ ಮೇ 25ರವರೆಗೆ ನಡೆಯಲಿರುವ ಈ ಶಿಬಿರದಲ್ಲಿ 6ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಬಹುದಾಗಿದೆ ಎಂದರು. ಯಾದಗಿರಿ ನಗರದ ಮಿನಿ ವಿಧಾನಸಭೆ ಸಮೀಪದ ಚಿತ್ರಾಪುರ ರಸ್ತೆಯಲ್ಲಿರುವ ಡಿಡಿಯ ಸಿಬಿಎಸ್‌ಸಿ ಶಾಲೆಯಲ್ಲಿ ತರಬೇತಿ ನಡೆಯಲಿದೆ ಎಂದು ಹೇಳಿದರು. ಮಹಿಳೆಯರು ಹಾಗೂ ವಿದ್ಯಾರ್ಥಿನಿಯರ ಸುರಕ್ಷತೆ ಇಂದಿನ ದಿನಗಳಲ್ಲಿ ಅತ್ಯಂತ ಮಹತ್ವದ ವಿಷಯವಾಗಿದ್ದು, ಕರಾಟೆ ತರಬೇತಿ ಅವರಲ್ಲಿ ಧೈರ್ಯ, ಆತ್ಮಸ್ಥೈರ್ಯ ಹಾಗೂ ಆತ್ಮರಕ್ಷಣೆಯ ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಣದ ಜೊತೆಗೆ ಆತ್ಮರಕ್ಷಣೆಯ ಜ್ಞಾನ ಅಗತ್ಯವಾಗಿದೆ ಎಂದರು. ರಾಷ್ಟ್ರೀಯ ಕರಾಟೆ ಚಾಂಪಿಯನ್ ಮನೋಹರ್ ಅವರು ತರಬೇತಿ ನೀಡಲಿದ್ದು, ವಿದ್ಯಾರ್ಥಿಗಳಿಗೆ ಕರಾಟೆಯ ವಿವಿಧ ತಂತ್ರಗಳು, ಶಿಸ್ತು, ದೈಹಿಕ ಫಿಟ್ನೆಸ್ ಹಾಗೂ ಆತ್ಮರಕ್ಷಣೆಯ ಕುರಿತು ಸಮಗ್ರ ಮಾರ್ಗದರ್ಶನ ನೀಡಲಾಗುತ್ತದೆ ಎಂದು ತಿಳಿಸಿದರು. ಯುವಕರು ಹಾಗೂ ಯುವತಿಯರಿಗಾಗಿ ಪ್ರತ್ಯೇಕ ತರಗತಿಗಳನ್ನು ನಡೆಸಲಾಗುತ್ತಿದ್ದು, ಸಂಪೂರ್ಣ ಉಚಿತವಾಗಿ ತರಬೇತಿ ನೀಡಲಾಗುತ್ತಿದೆ. ಕೇವಲ 500 ವಿದ್ಯಾರ್ಥಿಗಳು ಹಾಗೂ 500 ವಿದ್ಯಾರ್ಥಿನಿಯರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು. ಮೊದಲಿಗೆ ನೋಂದಣಿ ಮಾಡಿಸಿಕೊಳ್ಳುವವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ ಎಂದು ಹೇಳಿದರು. ಹೆಚ್ಚಿನ ಮಾಹಿತಿಗಾಗಿ ಯಾದಗಿರಿಯಲ್ಲಿ ತರಬೇತಿಗೆ ಸಂಪರ್ಕಿಸಲು ಮೊ. 9686367698, ಮೊ.7760419705, ಮೊ. 9019852479, ಮೊ. 9148308124 ಸಂಪರ್ಕಿಸಬಹುದು ಎಂದರು. ಶಹಾಪುರದಲ್ಲಿ ತರಬೇತಿಗೆ ಮೊ. 9591410437 ಮತ್ತುಕಲಬುರಗಿಯಲ್ಲಿ ತರಬೇತಿಗೆ ಮೊ. 9945060569 ಸಂಪರ್ಕ ಮಾಡಬಹುದು ಎಂದರು. ತರಬೇತಿ ಬೆಳಿಗ್ಗೆ 6ರಿಂದ ರಿಂದ 8.30 ರ ವರೆಗೆ ಮತ್ತು ಸಂಜೆ 4ರಿಂದ ರಿಂದ 6.30 ರವರೆಗೆ ನೀಡಲಾಗುತ್ತದೆ ಎಂದರು. ಪೋಷಕರು ತಮ್ಮ ಮಕ್ಕಳ ಭವಿಷ್ಯ, ಆರೋಗ್ಯ ಹಾಗೂ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಈ ಅಪರೂಪದ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಪ್ರಾಚಾರ್ಯ ಬಬಿನ್ ರಾಜ್, ಗೋಪಾಲಕೃಷ್ಣ, ರವಿ ಚೌಹಾನ್ ಇದ್ದರು.

## ತಾಲೂಕಿನಲ್ಲಡೆ ಸಂಭ್ರಮದಿಂದ ಹೇಮರೆಡ್ಡಿ ಮಲ್ಲಮ್ಮನ ಜಯಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಕುಕನೂರು**

ಮೇ.10: ಮಹಾನ್ ಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ ಜಯಂತಿಯನ್ನು ಭಾನುವಾರ ತಾಲೂಕಿನ ಮಂಡಲಗೇರಿ ಶಿರೂರು ತಳಕಲ್ ಬನ್ನಿಕೊಪ್ಪ ವಿವಿಧಡೆಗಳಲ್ಲಿ ಸಂಭ್ರಮ ಸಡಗರದಿಂದ ಸರ್ವಧರ್ಮಿಯರು ಸೇರಿಕೊಂಡು ಸೌಹಾರ್ದತೆಯಿಂದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಜಯಂತಿ ಯನ್ನು ಆಚರಣೆ ಮಾಡಲಾಯಿತು.

ತಾಲೂಕಿನ ವಿವಿಧಡೆ ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ಮಹಾನ್ ಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಆಯೋಜಿಸಲಾಗಿದ್ದು. ಗ್ರಾಮದಲ್ಲಿ ಬೆಳಿಗ್ಗೆ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ ಜಯಂತಿಯ ಪ್ರಯುಕ್ತ ವಿಶೇಷ ಪೂಜಾ, ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಿ ನಂತರ ಅವರ ಬೃಹತ್ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು ನಂತರ ಅನ್ನಸಂತರ್ಪಣೆ ಆಯೋಜಿಸಲಾಯಿತು.

ವೇಳೆ ಗ್ರಾಮದ ಪ್ರಮುಖರು ಮಾತನಾಡುತ್ತಾ ಮಲ್ಲಮ್ಮ 14 ನೇ ಶತಮಾನದಲ್ಲಿ ಉತ್ತರ ಕರ್ನಾಟಕ ಪ್ರದೇಶದಲ್ಲಿ ಜನಿಸಿದರು . ಅವರು ಶ್ರೀಶೈಲ ಮಲ್ಲಿಕಾರ್ಜುನ ರೂಪದಲ್ಲಿ ಶಿವನ ಪರಮ ಭಕ್ತೆಯಾಗಿದ್ದರು . ಅವರು ವೀರಶೈವ ಲಿಂಗಾಯತ ಭಕ್ತರ ಕುಟುಂಬದಲ್ಲಿ ಬೆಳೆದರು ಮತ್ತು ಬಸವಣ್ಣನ ಮಾರ್ಗವನ್ನು ಅನುಸರಿಸಿದರು . ಅವರು ತಮ್ಮ ಸೊಸೆಯಂದಿರಿಂದ ಸಾಕಷ್ಟು ಹಿಂಸೆಯನ್ನು ಅನುಭವಿಸಿದರು ಮತ್ತು ಅವರು ಅವರನ್ನು ಮನೆಯಿಂದ ಹೊರಗೆ ಹಾಕುವ ಮೊದಲು ಅವರಿಂದ ಕೊಲೆ ಪ್ರಯತ್ನಗಳನ್ನು ಸಹ ಅನುಭವಿಸಿದರು. ಅವರು ಕಾಡಿನಲ್ಲಿ ವಾಸಿಸಲು ಪ್ರಾರಂಭಿಸಿದರು ಮತ್ತು ತನ್ನ ಭಕ್ತಿಪಂಥಗಳನ್ನು ಮುಂದುವರೆಸಿದರು. ಶ್ರೀಶೈಲ ಮಲ್ಲಿಕಾರ್ಜುನ ಅವರ ಭಕ್ತಿಯಿಂದ ಸಂತೋಷಪಟ್ಟರು, ಅವರ ಮುಂದೆ ಕಾಣಿಸಿಕೊಂಡರು ಮತ್ತು ವರವನ್ನು ನೀಡಿದರು. ಅವರು ಚಿತ್ರಹಿಂಸೆ ನೀಡುತ್ತಿದ್ದರೂ ಸಹ ಅವರು ತಮ್ಮ ಕುಟುಂಬಕ್ಕೆ ಸಂಪತ್ತನ್ನು ನೀಡಬೇಕೆಂದು ಅವರು ಕೇಳಿಕೊಂಡರು. ಅವರು ತಮ್ಮ ಕುಟುಂಬಕ್ಕೆ ಸಂಪತ್ತು ಹೊಂದಲು, ದಾನ ಮಾಡಲು ಮತ್ತು ಅಹಂಕಾರವನ್ನು ಹೊಂದಿರಬಾರದು ಎಂದು ಹೇಳಿಕೊಟ್ಟ ಮಹಾನ್ ಸಾಧ್ವಿಯಾಗಿದ್ದಾರೆ ಎಂದು ತಿಳಿಸಿದರು.

ಕುಕನೂರ ತಾಲೂಕಿನ ವಿವಿಧ ಗ್ರಾಮಗಳ ಪ್ರಮುಖರು, ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

## ನಮ್ಮ ನದಿ - ನಮ್ಮ ಹೊಣೆ ಅಭಿಯಾನಕ್ಕೆ ಚಾಲನೆ




• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ತಾಲೂಕಿನ ಐತಿಹಾಸಿಕ ಹುಲಿಗಿ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ "ನಮ್ಮ ನದಿ – ನಮ್ಮ ಹೊಣೆ" ಎಂಬ ಘೋಷಣೆಯಡಿ ತುಂಗಭದ್ರಾ ನದಿ ತಟದಲ್ಲಿ ಸ್ವಚ್ಛತಾ ಹಾಗೂ ಜಾಗೃತಿ ಅಭಿಯಾನವನ್ನು ಆರಂಭಿಸಲಾಯಿತು.

ಈ ಅಭಿಯಾನದಲ್ಲಿ ಅಂಗಳ ಟ್ರಸ್ಟ್‌ನ ಹಾಗೂ ವಿಸ್ತಾರ ಸಂಸ್ಥೆಯವರು ಸೇರಿ ನದಿಯನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡರು. ಈ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಜ್ಯೋತಿ ಎಂ. ಗೊಂಡಬಾಳ ರವರು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಕಾರ್ಯ ಒಂದು ದಿನದ ಅಭಿಯಾನವಾಗಿ ಉಳಿಯಬಾರದು. ಜನರು ಸ್ವಾಭಾವಿಕವಾಗಿ ಸೇರಿ–ಕೊಂಡು ನಿರಂತರವಾಗಿ ಪರಿಸರ ಸಂರಕ್ಷಣೆಯ ಕೆಲಸದಲ್ಲಿ ಭಾಗವಹಿಸಬೇಕು ಎಂಬ ಆಶಯ ತಮ್ಮದು,ಪರಿಸರ ಉಳಿಸುವ ಮನೋಭಾವದಿಂದ ಎಲ್ಲರೂ ಕೈಜೋಡಿಸಿ

ನದಿ, ಪರಿಸರ ಮತ್ತು ಸಮಾಜವನ್ನು ಉಳಿಸುವ ಕೆಲಸ ಆಗಬೇಕು.

ಇದು ಇಲಾಖೆಗಳು, ಪ್ರಾಧಿಕಾರ, ಸಂಘಟನೆಗಳು ಹಾಗೂ ಸಾರ್ವಜನಿಕರು ಒಟ್ಟಾಗಿ ಕೈಜೋಡಿಸಿದಾಗ ಮಾತ್ರ ನದಿಯನ್ನು ಉಳಿಸಲು ಸಾಧ್ಯ

"ಹುಲಿಗಿ ಜಾತ್ರಾ ಮಹೋತ್ಸವದಲ್ಲಿ ಆರಂಭವಾದ ಈ ಹೆಜ್ಜೆ ಮುಂದೆಯೂ ನಿರಂತರವಾಗಿ ನಡೆಯಲಿದೆ, ಜಾತ್ರೆ ನಂತರ ಬೃಹತ್ ಸ್ವಚ್ಚತಾ ಕಾರ್ಯ ಮಾಡಬೇಕಿದೆ ಎಂದರು.

ಇಲ್ಲಿ ಸರಿಯಾದ ಮಾಹಿತಿ ಫಲಕ ಹಾಕಬೇಕಿದೆ, ಅದರಲ್ಲಿ ಜನರು ಅಲ್ಲಿ ತೆಗೆದ ಬಟ್ಟೆಗಳನ್ನು ಹಾಕಲು ಪ್ರತ್ಯೇಕವಾಗಿ ದೊಡ್ಡ ದೋಣಿ ಆಕಾರದಲ್ಲಿ ಸ್ಥಳ ಮಾಡಬೇಕು, ಎಲ್ಲಾ ಕಸ ಹಾಕಲು ಡಬ್ಬಿಗಳಲ್ಲಿ ಹಾಕುವ ಹಾಗೆ ಮಾಡಬೇಕು, ಈ ನಿಟ್ಟಿನಲ್ಲಿ ಪ್ರಾಧಿಕಾರ ಮೊದಲ ಆದ್ಯತೆಯ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಅಲ್ಲದೆ ಸ್ಥಳೀಯ ಪೌರಕಾರ್ಮಿಕರು ಸಹ ಕೈಜೋಡಿಸಿ ಸಹಕರಿಸಿದರು.

ಕಾರ್ಯಕ್ರಮದ ವೇಳೆ "ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ – ಬಟ್ಟೆ ಚೀಲ ಬಳಸಿ", "ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ", "ನದಿಗೂ ಜೀವಿಸುವ ಹಕ್ಕಿದೆ" ಎಂಬ ಘೋಷಣೆಗಳ ಮೂಲಕ ಜನರಲ್ಲಿ ಪರಿಸರ ಜಾಗೃತಿ ಮೂಡಿಸಲಾಯಿತು. ಅಲ್ಲಿನ ಜನರೊಂದಿಗೆ ಸಂವಾದ ನಡೆಸಿ, ನದಿಯನ್ನು ಕೇವಲ ನೀರಿನ ಮೂಲವಾಗಿ ಅಲ್ಲದೆ ದೇವಿಯಷ್ಟೇ ಪೂಜ್ಯವಾಗಿ ಕಾಣಬೇಕು ಎಂಬ ಸಂದೇಶ ನೀಡಲಾಯಿತು.

ಅಂಗಳ ಸಂಸ್ಥೆಯ ಜ್ಯೋತಿ ಹಿಟ್ನಾಳ ಮಾತನಾಡಿ, ತುಂಗಭದ್ರಾ ನದಿ ಇಂದು ಹೆಚ್ಚುತ್ತಿರುವ ಪ್ಲಾಸ್ಟಿಕ್ ಹಾಗೂ ಕಸದ ಸಮಸ್ಯೆಯಿಂದ ತನ್ನ ಸ್ವಚ್ಛತೆಯನ್ನು ಕಳೆದುಕೊಳ್ಳುತ್ತಿರುವುದು ಬೇಸರದ ಸಂಗತಿ. ನದಿ ತೀರದಲ್ಲಿ ಶೌಚಾಲಯ ವ್ಯವಸ್ಥೆಯ ಕೊರತೆ, ಕಸ ವಿಲೇವಾರಿ ವ್ಯವಸ್ಥೆಯ ಅಭಾವ ಹಾಗೂ ಸ್ವಚ್ಛತಾ ಸೌಲಭ್ಯಗಳ ಕೊರತೆ ಪರಿಸರಕ್ಕೆ ಹಾನಿಯಾಗುತ್ತಿರುವುದು ಅಭಿಯಾನದ ವೇಳೆ ಗಮನಿಸಲಾಯಿತು.

ಈ ಹಿನ್ನಲೆಯಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಮನವಿ ಸಲ್ಲಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದರು. ತಂಡದಲ್ಲಿ ಇದ್ದ ಎಲ್ಲರೂ ಸಂಸದ ಕೆ. ರಾಜಶೇಖರ ಹಿಟ್ನಾಳ ಮತ್ತು ಪ್ರಾಧಿಕಾರ ಸದಸ್ಯರನ್ನು ಭೇಟಿ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಮಂಜುನಾಥ ಜಿ. ಗೊಂಡಬಾಳ, ನಾಗರತ್ನ, ಕಾವೇರಿ, ಕೆಂಚಪ್ಪ, ಸುಜಾತ, ಜ್ಯೋತಿ, ಶಂಕ್ರವ್ವ, ಕವಿತಾ, ಪಾರ್ವತಿ, ವಿಜಯಲಕ್ಷ್ಮಿ, ಅಲಸಾಬ್, ರವಿ ಅನೇಕರಿದ್ದರು.

## ಉರಿ ಬಿಸಿಲಿನಲ್ಲಿ ಕುಡಿಯುವ ನೀರಿಗಾಗಿ ಕುರಿಹಾಳ ಗ್ರಾಮಸ್ಥರ ನಿತ್ಯ ಪರದಾಟ




• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಮೇ.10:ವಡಗೇರಾ ತಾಲ್ಲೂಕಿನ ಕೊಂಕಲ್ ಗ್ರಾಮ ಪಂಚಾಯತಿ ವ್ಯಾಪ್ತಿಯ ಕುರಿಹಾಳ ಗ್ರಾಮದಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಹನಿ ನೀರಿಗೂ ಪರದಾಟ ನಡೆಸುವ ಪರಿಸ್ಥಿತಿ ಎದುರಾಗಿದೆ. ಗ್ರಾಮಸ್ಥರು ಸ್ಥಳೀಯ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದು, ಸಮಸ್ಯೆ ಬಗೆಹರಿಸದೇ ಹೋದಲ್ಲಿ ಹೋರಾಟದ ಎಚ್ಚರಿಕೆ ನೀಡಿದ್ದಾರೆ. ಕುಡಿಯುವ ನೀರಿಗಾಗಿ ಗ್ರಾಮಸ್ಥರು ನಿತ್ಯ ಪರದಾಡುತ್ತಿದ್ದು, 2 ಕಿ.ಮೀ. ದೂರ ನಡೆದುಕೊಂಡು ಹೋಗಿ ನೀರನ್ನು ತರುತ್ತಿರುವುದು ಆಡಳಿತ ಕಾರ್ಯವೈಖ್ಯರಿಯ ದುಃಸ್ಥಿತಿಯನ್ನು ಬಿಂಬಿಸುತ್ತಿದೆ.

ಕುಡಿಯುವ ನೀರು ಅಷ್ಟೇ ಅಲ್ಲ ದಿನಬಳಕೆ ನೀರಿಗೂ ಸಹ ತೊಂದರೆ ಆಗಿದೆ. ಹಳೆಯ ಬಾವಿಯಲ್ಲಿನ ಅಸ್ವಚ್ಛತೆಯಿಂದ ಕೂಡಿದ ಚರಂಡಿ ನೀರಿನಂತಾದ ನೀರನ್ನು ದಿನಬಳಕೆ ಹಾಗೂ ಜಾನುವಾರುಗಳಿಗೆ ಕುಡಿಯುವ ಬಳಸುತ್ತಿದ್ದಾರೆ. ಇನ್ನು ಕುಡಿಯುವ ನೀರು ತರಲು ಊರ ಬಳಿಯ ಖಾಸಗಿ ವ್ಯಕ್ತಿಗಳ ಬೋರ್ ವೆಲ್ ಗೆ ಹೋಗಿ ಗಂಟೆಗಟ್ಟಲೆ ನಿಂತು ತರುತ್ತಾರೆ. ಹಾಗೂ 2 ಕಿ.ಮೀ ದೂರ ನಡೆದುಕೊಂಡು ಹೋಗಿ, ಬೈಕ್, ಟ್ರ್ಯಾಕ್ಟರ್, ಜೆಸಿಬಿ ತೆಗೆದುಕೊಂಡು ಹೋಗಿ ನೀರು ತರುವಂತಾಗಿದೆ. ಇಡೀ ಊರು ನಳದ ನೀರಿನ ಮೇಲೆ ಅವಲಂಬಿತವಾಗಿದ್ದು, ಬೇರೆ ನೀರಿನ ವ್ಯವಸ್ಥೆ ಇಲ್ಲದಂತಾಗಿದೆ. ಒಂದು ದಿನ ನಳದ ನೀರು ಬರದಿದ್ದರೇ ನೀರಿನ ಹಾಹಾಕಾರ ಎದುರಾಗೀತ್ತದೆ. ಹೀಗಿರುವಾಗ ಪದೇ ಪದೇ ನಳದ ಸಮಸ್ಯೆ ಎದುರಾಗಿ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಊರಲ್ಲಿನ ಬೋರ್ ವೆಲ್ ನೀರು ಕುಡಿಯಲು ಯೋಗ್ಯವಿಲ್ಲ. ಹಾಗೂ ಇದ್ದ ಒಂದೆರಡು ಬೋರ್ ವೆಲ್ ಗಳು ಕೂಡ ಕೆಟ್ಟು ಹೋಗಿವೆ. ಇನ್ನು ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆಗೂ ಮೊದಲೇ ಹಾಳಾಗಿ ಹೋಗಿದೆ. ಇನ್ನು ಜನಜೀವನ ಮಿಷನ್ ಯೋಜನೆಯಂತೂ ಹಳ್ಳ ಹಿಡಿದಿದ್ದು, ಇದರಿಂದ ಊರ ತುಂಬಾ ಗುಂಡಿಗಳು ಬಿದ್ದಿವೆಯೇ ಹೊರತು ಒಂದು ಹನಿ ನೀರು ಕೂಡ ಈ ಯೋಜನೆಯಿಂದ ಬಂದಿಲ್ಲ. ಇನ್ನು ನಳದ ನೀರಿನ ಟ್ಯಾಂಕ್ ಗೆ ಸರಬರಾಜು ಮಾಡುವ ಬೋರ್ ವೆಲ್ ಸಮರ್ಪಕ ನಿರ್ವಹಣೆ ಆಗದೇ ಇರುವುದರಿಂದ ಪದೇ ಪದೇ ನೀರಿನ ಸಮಸ್ಯೆ ಉಲ್ಬಣ ಆಗುತ್ತಲೇ ಇರುತ್ತದೆ. ಇನ್ನು ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿಗಳು ಈ ಬಗ್ಗೆ ತಲೆ ಕೆಡಿಸಿಕೊಳ್ಳದೆ ಊರ ಜನರ ಸಂಪರ್ಕಕ್ಕೆ ಸಿಗದೆ ಇದ್ದಾರೆ. ಫೋನ್ ಮಾಡಿದರೂ ಹಾಗೂ ಪಂಚಾಯತ್ ಬಳಿ ಹೋದರೂ ಸಿಗುತ್ತಿಲ್ಲ. ಇದರಿಂದಾಗಿ ಊರಿನ ಜನರೆಲ್ಲಾ ಇಡೀ ದಿನ ನೀರಿಗಾಗಿ ಪರಿತಪಿಸುವಂತಾಗಿದೆ. ಬಿರು ಬಿಸಿಲಿನ ನಡುವೆ ನೀರಿನ ಸಮಸ್ಯೆ ಎದುರಾಗಿದ್ದು, ಹನಿ ನೀರಿಗೂ ಪರದಾಟ ತಪ್ಪುತ್ತಿಲ್ಲ. ಈ ಸಮಸ್ಯೆ ಕೂಡಲೇ ಸರಿಪಡಿಸದಿದ್ದರೇ ರಸ್ತೆ ಬಂದ್ ಮಾಡಿ ಹೋರಾಟ ಮಾಡಲಾಗುವುದು ಹಾಗೂ ಪಂಚಾಯತ್ ಕಚೇರಿಗೆ ಬೀಗ ಜಡಿಯಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

## ಮುರನಾಳ ಮಳೆರಾಜೇಂದ್ರಸ್ವಾಮಿ ಮಠ ಭಾವ್ಯಕ್ಯತೆ ಸಂಕೇತ : ನಾಗಲಿಂಗಮಹಾಸ್ವಾಮಿಗಳು



• **ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ**

ತ್ರಿವಳಿ ದಾಸೋಹ ಪರಂಪರೆಯ ಮಳೆರಾಜೇಂದ್ರಸ್ವಾಮಿ ಮಠ ಭಾವ್ಯಕತ್ಯೆ ಸಂಕೇತವಾಗಿದೆ ಎಂದು ಚಿಕ್ಕುಂಬಿ ಅಜಾತ ನಾಗಲಿಂಗೇಶ್ವರ ಮಠದ ಅಭಿನವ ನಾಗಲಿಂಗಮಹಾಸ್ವಾಮಿಗಳು ಹೇಳಿದರು

ಅವರು ಮುರನಾಳ ಪುನರ್ವಸತಿ ಕೇಂದ್ರದಲ್ಲಿ ಮಳೆರಾಜೇಂದ್ರಸ್ವಾಮಿ ಮಠ ಆವರಣದಲ್ಲಿ ಭಾನುವಾರ ಜರುಗಿದ ಮಠದ ಪೂಜ್ಯರಾದ ನಿತ್ಯಾನಂದಮಹಾಸ್ವಾಮಗಳು ಮಾತೋಶ್ರೀ ಪ್ರಮಿಳಾ ಅವರ ಸುಪತ್ರಿಯವ ವಿವಾಹ ಹಾಗೂ ಉಚಿತ ಸಾಮೂಹಿಕ ಸರ್ವಧರ್ಮ ವಿವಾಹ ಮತ್ತು ಸರ್ವಧರ್ಮ ಸಭೆಯನ್ನುದ್ದೇಶಿಸಿ ಮಾತನಾಡಿ ಅವರು ನವ ದಂಪತಿಗಳಿಗೆ ವರ್ಣಾಶ್ರಮದ ಬಗ್ಗೆ ತಿಳಿಸುತ್ತಾ, ಮದುವೆ ಸಂಭ್ರಮ ಜೀವನದ್ದೂದ್ದಕ್ಕೂ ಇರಬೇಕು, ಮಳೆರಾಜೇಂದ್ರ ಸ್ವಾಮಿ ಮಠದಲ್ಲಿ ಪ್ರತಿವರ್ಷ ಜಾತ್ರಾ ಸಮಯದಲ್ಲಿ ಮುಂದಿನ ವರ್ಷದ ಮಳೆ ಬೆಳೆ ಸೂಚನೆ ನೀಡಲಾಗುತ್ತಿದೆ, ಮಳೆ ಕಡಿಮೆಯಾದಾಗ ರೈತರು ಮಳೆ ಕೆಳಲು ಶ್ರೀಮಠಕ್ಕೆ ಬರುವ ಪರಂಪರೆ ಇಂದಿಗೂ ಚಾಲ್ತಿಯಲ್ಲಿದೆ, ಜೊತಗೆ ತಿಂಥಣಿ ಮೌನೇಶ್ವರರ ಪರಂಪರೆಗೆ ಸೇರಿದ ಮಠವಾಗಿದ್ದರಿಂದ ಇಲ್ಲಿ ಯಾವುದೆ ಜಾತಿ ಬೇದಗಳಿಗೆ ಅವಕಾಶವಿಲ್ಲ ಇಗಾಗಿ ಇದು ಭಾವ್ಯಕ್ಯತೆಯ ಮಠವಾಗಿದೆ ಎಂದರು.

ಅನಗವಾಡಿ ಪೂರ್ಣಾನಂದ ಆಶ್ರಮದ ಮಾತೋಶ್ರೀ ಅನಸೂಯಾ ತಾಯಿ ಮಾತನಾಡಿ ಶ್ರೀ ಮಠದಲ್ಲಿ ಉಚಿತ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿರುವುದು ಶ್ಲಾಘನೀಯ, ಎಲ್ಲಿ ಶ್ರೀಗಳ ಆಶಿರ್ವಾದ ಸಿಗುತ್ತಿರುವುದು ನವ ಜೋಡಿಗೆ ಇದೊಂದು ಸೌಭಾಗ್ಯ ಇನ್ನಷ್ಟು ಸಾಮೂಹಿಕ ವಿವಾಹಗಳು ಹೆಚ್ಚಾಗಲಿ ಎಂದರು.

ಗುರುನಾಥಮಹಾಸ್ವಾಮಿಗಳು ಮಾತನಾಡಿ ಸಮಾಜದಲ್ಲಿ ಜಾತಿಗಳ ನಡುವಿನ ಸಂಘರ್ಷಗಳು ಮರೆಯಾಗಿ ಎಲ್ಲರು ಒಂದಾಗಿ ಬಾಳಬೇಕಾಗಿದೆ, ಎಲ್ಲರೂ ಒಂದಾದಾಗ ಮಾತ್ರ ಗ್ರಾಮೀಣ ಹಾಗೂ ನಗರ ಅಭಿವೃದ್ಧಿಗಳ ಜೊತೆಗೆ ಜನರ ಏಳಿಗೆಯು ಸಾಧ್ಯ ಎಂದರು.

ಶ್ರೀಮಠದ ಜಗನ್ನಾಥಮಹಾಸ್ವಾಮಿಗಳು ಮಾತನಾಡಿ ನಾಡಿನಲ್ಲಿ ಶ್ರೀಮಂತ ಬಡವ ಎಂಬ ಭಾವ ಅಳಿಯಬೇಕು ಇಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಸಮಪಾಲು ಎಲ್ಲರಿಗೂ ಸಮ ಬಾಳು ಎಂಬ ದ್ಯೆಯದಡಿ ನಾವೆಲ್ಲರು ಜೀವಿಸಬೇಕಾಗಿದೆ, ಇದುವೇ ಶ್ರೀಮಠ ಆಶಯವಾಗಿದೆ ಎಂದರು.

ನಿತ್ಯಾನಂದಸ್ವಾಮಿಗಳು, ಶಿವಾನಂದ್ವಾಮಿಗಳು, ನೀರಂಜನಸ್ವಾಮಿಗಳು, ಜಗನ್ನಾಥಸ್ವಾಮಿಗಳು, ಚೆತನಸ್ವಾಮಿಗಳು, ಮೌನೇಶ್ವರಸ್ವಾಮಿಗಳು, ಮೇಘರಾಜಸ್ವಾಮಿಗಳು, ಚಿದಾನಂದಸ್ವಾಮಿಗಳು, ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ, ಬದಾಮಿ ಶಾಸಕ ಬೀಮಶೇನ ಚಿಮ್ಮನಕಟ್ಟಿ, ಜಿಲ್ಲಾ ಪಂಚಾಯತ ಮಾಜಿ ಅಧ್ಯಕ್ಷ ಹೂವಪ್ಪ ರಾಠೋಡ ವೇದಿಕೆ ಮೇಲೆ ಉಪಸ್ಥಿತಿತರಿದ್ದರು,

ಸಮಾರು 5 ನವ ಜೋಡಿಗಳ ಸಾಮೂಹಿಕ ವಿವಾಹದಲ್ಲಿ ಭಾಗವಹಿಸಿದ್ದರು, ಡಾ.ಸಂತೋಷ ಕಾಳನ್ನವರ ಕಾರ್ಯಕ್ರಮ ನಿರೂಪಿಸಿದರು, ಮುರನಾಳ ಗ್ರಾಮದ ಗುರುಹಿರಿಯರು ಶ್ರೀಮಠದ ಎಲ್ಲ ಹಳ್ಳಿಯ ಸದ್ಭಕ್ತರು ಭಾಗವಹಿಸಿದ್ದರು,



**ಗುರುಮಠಕಲ್ : ಜನತಾದಳ (ಜೆಡಿಎಸ್) ಗುರುಮಠಕಲ್ ಶಾಸಕರಾದ ಶರಣಗೌಡ ಕಂದಕೂರ್ ಅವರ ಜನಸಂಪರ್ಕ ಕಚೇರಿಯಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಗುರುಮಠಕಲ್ ತಾಲ್ಲೂಕಿನ ಮತಕ್ಷೇತ್ರವ್ಯಾಪ್ತಿಯ ಏಳು ಗ್ರಾಮಗಳ ಸಾವಿರಾರು ಕಾರ್ಯಕರ್ತರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು.**

# ಸಚಿವರ ನಿಧನಕ್ಕೆ ಯು.ಟಿ.ಖಾದರ್ ಸಂತಾಪ

**ಬೆಂಗಳೂರು:** ಕರ್ನಾಟಕ ವಿಧಾನಸಭೆಯ ಹಿರಿಯ ಸದಸ್ಯರು ಹಾ–ಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿದ್ದ ಸುಧಾಕರ್ ಡಿ. ಅವರ ನಿಧನದ ಸುದ್ದಿ ತಿಳಿದು ಅಪಾರ ದುಃಖವಾಗಿದೆ. ಸುಧಾಕರ್ ಡಿ. ಅವರು 4 ಬಾರಿ ವಿಧಾನಸಭಾ ಸದಸ್ಯರಾಗಿ, ಸಮಾಜ ಕಲ್ಯಾಣ ಸಚಿವರಾಗಿ ಹಾಗೂ ವಿವಿಧ ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ, ಸರಳ ವ್ಯಕ್ತಿತ್ವ ಮತ್ತು ಜನಪರ ಕಾ–ರ್ಯಗಳಿಂದ ಅವರು ಜನಮನದಲ್ಲಿ ವಿಶೇಷ ಸ್ಥಾನ ಪಡೆದಿದ್ದರು.

ಅವರ ಅಗಲಿಕೆ ರಾಜ್ಯಕ್ಕೆ ಮತ್ತು ಹಿರಿಯೂರು ಕ್ಷೇತ್ರದ ಜನತೆಗೆ ತುಂಬಲಾರದ ನಷ್ಟವಾಗಿದೆ. ಅವರ ಅಗಲಿಕೆಯ ದುಃಖವನ್ನು ಭರಿಸುವ ಸರ್ವ ಶಕ್ತಿಯನ್ನು ಅವರ ಕುಟುಂಬದವರಿಗೆ, ಬಂಧುಗಳಿಗೆ ಮತ್ತು ರಾಜ್ಯದ ಜನತೆಗೆ ನೀಡಲಿ ಹಾಗೂ ಅಗಲಿದ ಆತ್ಮಕ್ಕೆ ಚಿರ ಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆಂದು ವಿಧಾನ ಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾಡಳಿತದಿಂದ ಮಲ್ಲಮ್ಮ ಜಯಂತಿ ಸರಳ ಆಚರಣೆ



**ಬಳ್ಳಾರಿ:** ಜಿಲ್ಲಾಡಳಿತದ ವತಿಯಿಂದ ಆಯೋಜಿಸಲಾಗಿದ್ದ 'ಶ್ರೀ ಹೇಮರೆಡ್ಡಿ ಮಲ್ಲಮ್ಮ ಜಯಂತಿ'ಯನ್ನು ಭಾನುವಾರ ಅತ್ಯಂತ ಸರಳವಾಗಿ ಆಚರಿಸಲಾಯಿತು.

ರಾಜ್ಯದ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಅವರ ನಿಧನದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಸರ್ಕಾರಿ ಶೋಕ ಆಚರಿಸಲಾಗುತ್ತಿದ್ದು, ಸಚಿವರ ನಿಧನಕ್ಕೆ ಗೌರವ ಸೂಚಿಸುವ ಸಲುವಾಗಿ ಕೇವಲ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಾಂಕೇತಿಕವಾಗಿ ಜಯಂತಿಯನ್ನು ಆಚರಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿ ಸಭಾಂಗಣದಲ್ಲಿ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು ಹಾಗೂ ಇದೇ ಸಂದರ್ಭದಲ್ಲಿ ಎರಡು ನಿಮಿಷಗಳ ಕಾಲ ಮೌನ ಆಚರಿಸಿ ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಹಾಗೂ ಇಲಾಖೆಯ ಸಿಬ್ಬಂದಿ ವರ್ಗ ಇದ್ದರು.

# ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ; ಅಪಾರ ಹಾನಿ



**ಚಿಟಗುಪ್ಪ:** ಅಗ್ನಿ ಅವಘಡದಲ್ಲಿ ಮನೆ ಸುಟ್ಟು ಭಸ್ಮವಾಗಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿ ನಷ್ಟವಾಗಿರುವ ಘಟನೆ ತಾಲ್ಲೂಕಿನ ಕೋಡಂಬಲ್ ಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ. ಮಧ್ಯಾಹ್ನ 1:30 ಗಂಟೆ ಸುಮಾರಿಗೆ ಗ್ರಾಮದ ಜಗದೇವಿ ಗಂಡ ಘಾಳೆಪ್ಪ ಎಂಬವರ ಮನೆಯಲ್ಲಿ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿ ತೀವ್ರವಾಗಿ ವ್ಯಾಪಿಸಿ ಮನೆಯಲ್ಲಿದ್ದ 1ಚೀಲ ತೊಗರಿ, 4ಚೀಲ ಜೋಳ, ಬಟ್ಟೆಗಳು, ದಿನಸಿ ಸಾಮಗ್ರಿಗಳು ಸೇರಿದಂತೆ ಸುಮಾರು 3ತೊಲೆ ಬಂಗಾರ, 20ತೊಲೆ ಬೆಳ್ಳಿ ಮತ್ತು 3ಲಕ್ಷ ರೂ. ನಗದು ಸುಟ್ಟು ಕರಕಲಾಗಿದೆ ಎಂದು ಮೂಲಗಳು ತಿಳಿಸಿವೆ. ಅಗ್ನಿಶಾಮಕ ದಳದ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ನಾರಂದ ಸಿಬ್ಬಂದಿಗಳಾದ ವಸಂತಕುಮಾರ್, ಗಜಾನಂದ, ಅರುಣಕುಮಾರ್, ಕರಣಕುಮಾರ ಸ್ಥಳಕ್ಕೆ ಆಗಮಿಸಿ ಬೆಂಕಿಯನ್ನು ನಂದಿಸಿದರು. ಯಾವುದೇ ಅಪಾಯ ಆಗಿಲ್ಲ ಎಂದು ತಿಳಿದು ಬಂದಿದೆ.



**ಇಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರು, ಬೀದರ ಜಿಲ್ಲಾ ಸಹಕಾರ ಯೂನಿಯನ ಅಧ್ಯಕ್ಷರು ಹಾಗೂ ಡಿ.ಸಿ.ಸಿ.ಬ್ಯಾಂಕಿನ ಉಪಾಧ್ಯಕ್ಷರು ಯುವ ನಾಯಕರಾದ ಸನ್ಮಾನ್ಯಶ್ರೀ ಅಭಿಷೇಕ.ಆರ್.ಪಾಟೀಲ್ ರವರು ಹುಮನಾಬಾದ ಪಟ್ಟಣದಲ್ಲಿ ಆಯೋಜಿಸಿದ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ಎನ್.ಬಿ.ರೆಡ್ಡಿ ಗುರೂಜಿ ರವರ ಜೊತೆಗೂಡಿ ಜಯಂತಿ ಆಚರಿಸಿ ದರ್ಶನವನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ಅನೇಕ ಗಣ್ಯರು ಹಾಗೂ ಸಮಾಜದ ಅಧ್ಯಕ್ಷರು ಮತ್ತು ಸದಸ್ಯರು ಉಪಸ್ಥಿತರಿದ್ದರು.**

# ಸಚಿವ ಡಿ.ಸುಧಾಕರ್ ಅವರ ನಿಧನಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್ ತೀವ್ರ ಸಂತಾಪ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ಸಚಿವರಾದ ಡಿ. ಸುಧಾಕರ್ ಅವರ ನಿಧನಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.

"ಪ್ರತಿ ಕ್ಷಣವೂ ಕ್ಷೇತ್ರದ ಅಭಿವೃದ್ಧಿ ಕುರಿತು ಆಲೋಚನೆ, ಜನಸೇವೆ ಸೇರಿದಂತೆ ಅತ್ಯಂತ ಕ್ರಿಯಾಶೀಲ ಸಹೋದ್ಯೋಗಿಯಾಗಿದ್ದ ಸಚಿವ ಡಿ. ಸುಧಾಕರ್ ಅವರ ನಿಧನ ಅತ್ಯಂತ ನೋವಿನ ಸಂಗತಿ. ಅವರು ತಮ್ಮನ್ನು ಭೇಟಿ ಮಾಡಲು ಬಂದಾಗಲೆಲ್ಲ ಕ್ಷೇತ್ರದ ಒಂದಿಲ್ಲೊಂದು ಅಭಿವೃದ್ಧಿ ಕೆಲಸದ ಮನವಿ ಜತೆಗೆ ಬರುತ್ತಿದ್ದರು. ತಮಗೆ ಆಪ್ತರೂ ಆಗಿದ್ದ ಸುಧಾಕರ್ ಅಗಲಿಕೆ ಬಹಳ ನೋವು ತಂದಿದೆ ಎಂದು ಡಿಸಿಎಂ ಅವರು ಹೇಳಿದ್ದಾರೆ.

ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗುವ ಮೂಲಕ ಸಹಕಾರಿ ಸಂಸ್ಥೆಯಿಂದ ರಾಜಕೀಯ ಆರಂಭಿಸಿದ ಸುಧಾಕರ್ ಅವರು ಸರ್ವ ಸಮುದಾಯಗಳೂ ಮೆಚ್ಚುವ ನಾಯಕರಾಗಿದ್ದರು. ಸಮುದಾಯದ ಸಂಖ್ಯಾಬಲ ಇಲ್ಲದಿದ್ದರೂ ನಾಲ್ಕು ಬಾರಿ ಶಾಸಕರಾಗಿದ್ದು ಕ್ಷೇತ್ರದ ಜನ ಇವರ ಮೇಲೆ ಇರಿಸಿದ್ದ ಪ್ರೀತಿ, ವಿಶ್ವಾಸ, ನಂಬಿಕೆಗೆ ಸಾಕ್ಷಿ. ಇದೇ ಸುಧಾಕರ್ ಅವರ ಹೆಗ್ಗಳಿಕೆ ಆಗಿತ್ತು.

ಭದ್ರಾ ಮೇಲ್ದಂಡೆ ಯೋಜನೆ ಸೇರಿದಂತೆ ತಮ್ಮ ಕ್ಷೇತ್ರದ ನೀರಾವರಿ ಯೋಜನೆಗಳ ಕುರಿತು ನನ್ನ ಬಳಿ ಸದಾ ಚರ್ಚೆ ನಡೆಸುತ್ತಿದ್ದರು. ಕೊಡುಗೈ ದಾನಿಯಾಗಿ "ಬಡವರ ಬಂಧು" ಎಂದೇ ಜನರ ನಡುವೆ ಪ್ರಸಿದ್ಧಿ



ಪಡೆದಿದ್ದರು. ಕಾಲನ ಕರೆಗೆ ಓಗೊಟ್ಟು ನಮ್ಮನ್ನು, ಅಪಾರ ಅಭಿಮಾನಿಗಳನ್ನು ಅಗಲಿ ಹೋಗಿರುವ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ. ಅವರ ಕುಟುಂಬವರ್ಗ ಹಾಗೂ ಲಕ್ಷಾಂತರ ಕಾರ್ಯಕರ್ತರಿಗೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಆ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ" ಎಂದು ಶಿವಕುಮಾರ್ ಅವರು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

# ಕುಡಿಯುವ ನೀರು ಸಮಸ್ಯೆ ಪರಿಹಾರಕ್ಕೆ ಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರು**

"ಕರ್ನಾಟಕದಲ್ಲಿ ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ. ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ. ಪ್ರಧಾನಿಯವರ ಕಣ್ಣಿಗೆ ಏನು ಕಾಣುತ್ತಿದೆಯೋ ಗೊತ್ತಿಲ್ಲ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ರಾಯಚೂರಿನ ಲಿಂಗಸಗೂರಿನಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಾಧ್ಯಮಗಳಿಗೆ ಭಾನುವಾರ ಪ್ರತಿಕ್ರಿಯೆ ನೀಡಿದರು. ಕರ್ನಾಟಕದಲ್ಲಿ ಸಿಎಂ ಕುರ್ಚಿ ಅಲುಗಾಡುತ್ತಿದೆ. ಕೇರಳ, ಪಂಜಾಬ್ ನಲ್ಲೂ ಇದೇ ರೀತಿ ಆಗಿದೆ ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆ ಬಗ್ಗೆ ಕೇಳಿದಾಗ ಈ ರೀತಿ ಉತ್ತರಿಸಿದರು. ಭದ್ರಾ ಮೇಲ್ದಂಡೆ ಯೋಜನೆ ಉದ್ಘಾಟನೆಗೆ ಸಚಿವ ಸುಧಾಕರ್ ಅವರು ಇರಬೇಕಿತ್ತು

ಡಿ ಸುಧಾಕರ್ ಅವರ ನಿಧನದ ಬಗ್ಗೆ ಕೇಳಿದಾಗ, "ಭದ್ರಾ ಮೇಲ್ದಂಡೆ ಯೋಜನೆ ಉದ್ಘಾಟನೆಗೆ ಅವರು ನಮ್ಮೊಡನೆ ಇರಬೇಕಿತ್ತು. ಅವರ ಅನಾರೋಗ್ಯದ ಕಾರಣಕ್ಕೆ ಇದು ಸಾಧ್ಯವಾಗಲಿಲ್ಲ. ನನ್ನನ್ನ, ಮುಖ್ಯಮಂತ್ರಿ ಅವರನ್ನ ಭೇಟಿ ಮಾಡಿದಾಗಲೆಲ್ಲ ಸದಾ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಕುರಿತಾಗಿ ಮನವಿ ಮಾಡುತ್ತಲೇ ಇದ್ದರು. ಜೈನ ಸಮುದಾಯಕ್ಕೆ ಸೇರಿದವರು. ಕಡಿಮೆ ಜನಸಂಖ್ಯೆ ಇದ್ದರು ಸಹ ಎಲ್ಲಾ ಸಮುದಾಯದ ಜನರನ್ನ ಪ್ರೀತಿಯಿಂದ ಕಾಣುತ್ತಿದ್ದರು. ಹೃದಯ ಶ್ರೀಮಂತಿಕೆ ಇದ್ದಂತಹ ಮನುಷ್ಯ. ಇವರ ಸಾವಿನಿಂದ ನಮ್ಮ ಸರ್ಕಾರಕ್ಕೆ, ಕ್ಷೇತ್ರಕ್ಕೆ ನಷ್ಟ ಉಂಟಾಗಿದೆ. ನನಗೆ ವೈಯಕ್ತಿಕವಾಗಿ ಬಹಳ ಆಘಾತ ಉಂಟಾಗಿದೆ" ಎಂದರು.

**ಸಮಸ್ಯೆ ಪರಿಹಾರಕ್ಕೆ ಕ್ರಮ**

ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸದನದಲ್ಲಿ ಚರ್ಚೆಯಾಗಿರುವ ಕುರಿತು ಕೇಳಿದಾಗ, "ನನಗೆ ಇದರ ಬಗ್ಗೆ ಗೊತ್ತಿಲ್ಲ. ನನ್ನ ಇಲಾಖೆಯಿಂದ ಕುಡಿಯುವ ನೀರು ನೀಡಲು ಆದ್ಯತೆಯಿದೆ. ಈ ಬಗ್ಗೆ ನಮ್ಮ ಅಧಿಕಾರಿಗಳ ಬಳಿ ಮಾತನಾಡಿ ಏನು ಪರಿಹಾರ ಮಾಡಬೇಕೋ ಮಾಡುತ್ತೇನೆ" ಎಂದು ಹೇಳಿದರು.

# ಇಸ್ಲಾಮಿಕ್ ಸಮ್ಮರ್ ಕ್ಯಾಂಪ್ ಸಮಾರೋಪ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ**

ಜಮಾಅತ್ ಅಹ್ಲ್ ಇಸ್ಲಾಂ ಚಿಕ್ಕಬಳ್ಳಾಪುರದ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುತ್ತಿರುವ ಜಾಮಿಅಲ್ ಮಕಾತಿಬ್ ವತಿಯಿಂದ ಆಯೋಜಿಸಲಾದ ಇಸ್ಲಾಮಿಕ್ ಸಮ್ಮರ್ ಕ್ಯಾಂಪ್ ಸಮಾರೋಪ ಕಾರ್ಯಕ್ರಮವು ನಗರದ ಜಾಮಾ ಮಸೀದಿಯಲ್ಲಿ ನೆರವೇರಿತು.ಕಾರ್ಯಕ್ರಮದಲ್ಲಿ ಬೇಸಿಗೆ ಶಿಬಿರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ತಮ್ಮ ಧಾರ್ಮಿಕ ಜ್ಞಾನವನ್ನು ಪ್ರದರ್ಶಿಸಿದರು.

ನಗರದ ಮಸ್ಜಿದ್ ಎ ಹುಸೇನಿಯಾ ಇಮಾಮ್ ಮೌಲಾನಾ ಶುಹೆಬ್ ಸ್ವಾಗತ ಭಾಷಣದಲ್ಲಿ ಮಾತನಾಡಿ,ಮಕ್ಕಳಿಗೆ ಇಸ್ಲಾಮಿನ ಮೂಲಭೂತ



ಶಿಕ್ಷಣ ನೀಡುವ ಉದ್ದೇಶದಿಂದ ಸಮ್ಮರ್ ಕ್ಯಾಂಪ್ ಹಮ್ಮಿಕೊಳ್ಳಲಾಗಿದೆ ಅಲ್ಲಾಮಾ ಇಕ್ಬಾಲ್ ಅವರ ಮಾತುಗಳನ್ನು ಉಲ್ಲೇಖಿಸಿದ ಅವರು,ಸಮಾಜದಲ್ಲಿ ಧಾರ್ಮಿಕ ಶಿಕ್ಷಣದ ಮಹತ್ವವನ್ನು ಒತ್ತಿಹೇಳಿದರು. ಮಕ್ಕಳಲ್ಲಿ ದೀನಿ ಅರಿವು ಬೆಳೆಸಲು ಮಕಾತಿಬ್‌ಗಳ ಪಾತ್ರ ಅಗತ್ಯವಾಗಿದೆ ಎಂದು ತಿಳಿಸಿದರು.ಶಿಕ್ಷಕರ ಪರಿಶ್ರಮದಿಂದ ಅಲ್ಪಅವಧಿಯಲ್ಲಿ ಮಕ್ಕಳಲ್ಲಿ ಗಮನಾರ್ಹ ಧಾರ್ಮಿಕ ಅರಿವು ಮೂಡಿರುವುದನ್ನು ಅವರು ಪ್ರಶಂಸಿಸಿದರು.ಮಕ್ಕಳು ದೈನಂದಿನ ಜೀವನದಲ್ಲಿ ಧಾರ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡರೆ ಕುಟುಂಬಗಳಲ್ಲಿ ದೀನಿ ವಾತಾವರಣ ನಿರ್ಮಾಣವಾಗಲಿದೆ ಎಂದರು.

ಜಮಾಅತ್ ಅಹ್ಲ್ ಇಸ್ಲಾಂ ಅಧ್ಯಕ್ಷ ಜಾವೇದ್ ಪಾಶಾ ಅಧ್ಯಕ್ಷತೆ ವಹಿಸಿದ್ದರು.ಕಾರ್ಯದರ್ಶಿ ಮೌಲಾನಾ ಮೊಹಮ್ಮದ್ ಫಹದ್ ಕಾಸ್ಮಿ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮವು ಅಬು ರಹತ್ ಮಿಸ್ಬಾಹಿ ಅವರ ಖಿರಾಅತ್ ಹಾಗೂ ಮೌಲಾನಾ ಶಾಹಿದ್ ನದ್ವಿ ಅವರ ನಾತ್‌ನೊಂದಿಗೆ ಆರಂಭಗೊಂಡು,ಮುಫ್ತಿ ಮನ್ಸೂರ್ ಅವರ ಪ್ರಾರ್ಥನೆಯೊಂದಿಗೆ ಮುಕ್ತಾಯವಾಯಿತು.ಈ ಸಂದರ್ಭದಲ್ಲಿ ಜಮಾಅತ್ ಅಹ್ಲ್ ಇಸ್ಲಾಂ ಉಪಾಧ್ಯಕ್ಷ ಸಾಧಿಕ್ ಅಲಿ,ಜಂಟಿ ಕಾರ್ಯದರ್ಶಿ ನಯಾರುಘ್ ಪಾಶಾ,ಸದಸ್ಯರಾದ ಮಹಮದ್ ಜಾಫರ್,ಆಸಿಫ್ ಪಾಷಾ,ಹಾಫಿರುಘ್ ಮುಜೀಬ್,ಮುಬಾರಕ್,ಮಹಮ್ಮದ್ ತೌಸಿಫ್,ಮೌಲಾನಾ ಮೊಹಮ್ಮದ್ ಝುಬೇರ್,ಮುಫ್ತಿ ಅಬ್ದುಲ್ ಬಾರಿ ಸೇರಿದಂತೆ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ಬೆನಕಟ್ಟಿಯಲ್ಲಿ ಮಲ್ಲಮ್ಮ ಜಯಂತಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ತಾಲ್ಲೂಕಿನ ಬೆನಕಟ್ಟಿ ಗ್ರಾಮದಲ್ಲಿ ರವಿವಾರ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನ 604 ನೇ ಜಯಂತಿಯನ್ನು ಅತ್ಯಂತ ಸಡಗರ, ಸಂಭ್ರಮ ಹಾಗೂ ಶ್ರದ್ಧಾ–ಭಕ್ತಿಯಿಂದ ವೈಭವಪೂರಿತವಾಗಿ ಆಚರಿಸಲಾಯಿತು.

ಬೆಳಿಗ್ಗೆ ಹೇಮರಡ್ಡಿ ಮಲ್ಲಮ್ಮನ ಮೂರ್ತಿಗೆ ಅಭಿಷೇಕ, ಪೂಜೆ ನೆರವೇರಿದ ನಂತರ ಮಲ್ಲಮ್ಮಳ ತೊಟ್ಟಿಲೋತ್ಸವ ಕರ್ಯಕ್ರಮ ನಡೆಯಿತು. ನಂತರ ಮಲ್ಲಮ್ಮನ ಉತ್ಸವ ಮೂರ್ತಿಯುಳ್ಳ ಪಲ್ಲಕ್ಕಿ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು. 250 ಕ್ಕೂ ಹೆಚ್ಚು ಮಹಿಳೆಯರು ಕುಂಭ ಹೊತ್ತು ಸಾಗಿದ ದೃಶ್ಯ ಆಕರ್ಷಣೀಯವಾಗಿತ್ತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ 3 ಗಂಟೆಗಳ ಕಾಲ ನಡೆದ ಮೆರವಣಿಗೆಯ ಕಾಲಕ್ಕೆ ಕುಂಭ ಹೊತ್ತ ಮಹಿಳೆಯರಿಗೆ ಅಲ್ಲಲ್ಲಿ ವಿವಿಧ ಸಂಘಟನೆಗಳು ತಂಪು ಪಾನೀಯ, ಮಜ್ಜಿಗೆಯ ವ್ಯವಸ್ಥೆ ಮಾಡಿದ್ದವು.

ಹೇಮರಡ್ಡಿ ಮಲ್ಲಮ್ಮ ಹಾಗೂ ವೇಮನ ದೇವಸ್ಥಾನ ಸಮೀತಿಯ ಪದಾಧಿಕಾರಿಗಳು, ಗ್ರಾಮದ



ಹಿರಿಯರು, ಯುವಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ವಿವಿಧ ಮಹಿಳಾ ಸ್ವಸಹಾಯ ಸಂಘಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಮಧ್ಯಾಹ್ನ ಹನಮಂತ ಗೆಣ್ಣೂರ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಿದ್ದರು.



**ಬೀದರ್ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ "ನವರ 604ನೇ ಜಯಂತೋತ್ಸವ ಆಚರಿಸಲಾಯಿತು.**



**ಬೀದರ್ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ "ನವರ 604ನೇ ಜಯಂತೋತ್ಸವ ಆಚರಿಸಲಾಯಿತು.**

# ಬಾಂಗ್ಲಾದೇಶದವರಿಗೆ ಬಂಗಾಲವೇ ಹೆಬ್ಬಾಗಿಲಾಗಿತ್ತು: ಆರ್.ಅಶೋಕ್

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಪಶ್ಚಿಮ ಬಂಗಾಲವು ಬಾಂಗ್ಲಾದೇಶದ ಅಕ್ರಮ ನುಸುಳುಕೋರರಿಗೆ ಹೆಬ್ಬಾಗಿಲಾಗಿತ್ತು. ಆ ಹೆಬ್ಬಾಗಿಲನ್ನು ಒಡೆದು ದೇಶವನ್ನು ರಕ್ಷಿಸುವ ಕೆಲಸವನ್ನು ಬಿಜೆಪಿ ಮಾಡಲಿದೆ ಎಂದು ವಿಧಾನಸಭೆಯಲ್ಲಿನ ವಿರೋಧಪಕ್ಷದ ನಾಯಕ ಆರ್.ಅಶೋಕ್ ಅವರು ಹೇಳಿದರು.




ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಂಗಾಲವನ್ನು ಬಾಂಗ್ಲಾದೇಶದವರು ಗೇಟ್ ವೇ ಆಫ್ ಇಂಡಿಯಾ ರೀತಿ ಬಳಸುತ್ತಿದ್ದರು. ಪಶ್ಚಿಮ ಬಂಗಾಳಕ್ಕೆ ಬಂದು ದೇಶದ ವಿವಿಧೆಡೆ ಹರಡುತ್ತಿದ್ದರು. ಅವರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಅನ್ನು ಮಮತಾ ಬ್ಯಾನರ್ಜಿ ಅವರು ಕೊಟ್ಟು ದೇಶದಲ್ಲಿ ಎಲ್ಲಾದರೂ ಹೋಗಿ ಎಂದು ಹೇಳುತ್ತಿದ್ದರು ಎಂದರು.

ಕರ್ನಾಟಕದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಬಾಂಗ್ಲಾದೇಶವರು ಇದ್ದಾರೆ. ಬೆಂಗಳೂರಿನಲ್ಲಿ ಸಾಕಷ್ಟು ಬಾಂಗ್ಲಾ ಕ್ಯಾಂಪ್ ಗಳು ಇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರಿಗೆ ಬಾಂಗ್ಲಾದವರು ಬೇಕು. ಅವರು ಇವರಿಗೆ ನೆಂಟರ ರೀತಿ ಆಗಿದ್ದಾರೆ. ಯಾಕೆ ಎಂದರೆ ಅವರ ಓಟು ಬೇಕು. ಈ ಸರ್ಕಾರ ಓಟಿಗಾಗಿ ಕಣ್ಣು ಮುಚ್ಚಿಕೊಂಡು ಕೂತಿದೆ. ಓಟಿಗಾಗಿ ಬಾಂಗ್ಲಾದೇಶವರನ್ನು ಕಾಂಗ್ರೆಸ್‌ನವರು ದೇಶಕ್ಕೆ ಬಿಟ್ಟು–ಕೊಂಡಿದ್ದಾರೆ. ಇಂತಹ ಕೆಲಸ ಮಾಡುವ ಇವರಿಗೆ ನಾಚಿಕೆ ಆಗಬೇಕು. ಪಶ್ಚಿಮ ಬಂಗಾಳದಲ್ಲಿ ಬಾಂಗ್ಲಾದವರ ಹೆಬ್ಬಾಗಿಲು ಮುಚ್ಚಿದೆ. ಈಗ ಅವರು ಓಡು ಮಗಾ ಓಡು ಮಗಾ ಅಂತ ಓಡಬೇಕು. ಅವರು ಖದೀಮರು. ಡಕಾಯಿತಿ ಮಾಡ್ತ ಇದ್ದರು ಎಂದರು.

ಬೆಂಗಳೂರಿನ ಕೋಗಿಲುವಿನಲ್ಲಿ ಹತ್ತು ಎಕರೆ ಪಾಲಿಕೆ ಜಾಗದಲ್ಲಿ ಬಾಂಗ್ಲಾದವರು ಗುಡಿಸಲು ಹಾಕಿಕೊಂಡಿದ್ದರು. ಅವರಿಗೆ ಸಿದ್ದರಾಮಯ್ಯ ಸರ್ಕಾರ ಮನೆ ಕೊಡಲು ಹೊರಟಿತ್ತು. ಇದನ್ನು ಬಿಜೆಪಿ ವಿರೋಧಿಸಿತ್ತು. ಮಹದೇವಪುರದಲ್ಲೂ ಬಾಂಗ್ಲಾದವರು ಇದ್ದಾರೆ. ಕೊಡಗಿನಲ್ಲಿ ಕಡಿಮೆ ಕೂಲಿಗೆ ಸಿಗುತ್ತಾರೆ ಅಂತ ಬಾಂಗ್ಲಾದವರಿಗೆ ಕೆಲಸ ಕೊಡುತ್ತಿದ್ದಾರೆ. ಇದಕ್ಕೆಲ್ಲ ಮಮತಾ ಬ್ಯಾನರ್ಜಿಯೇ ಕಾರಣ ಎಂದು ದೂರಿದರು.

ರಾಜ್ಯದಲ್ಲಿ ಭಯೋತ್ಪಾದನಾ ಕೃತ್ಯ ಮಾಡುತ್ತಿರುವ ಬಾಂಗ್ಲಾದೇಶದವರಿಗೆ ಗೇಟ್ ಪಾಸ್ ಕೊಡಬೇಕಾಗಿದೆ. ಸಿದ್ದರಾಮಯ್ಯ ಅವರಂತೂ ಬಾಂಗ್ಲಾದವರನ್ನು ಓಡಿಸಲ್ಲ. ಆ ಕೆಲಸವನ್ನು ಪಶ್ಚಿಮ ಬಂಗಾಳದಿಂದ ಬಿಜೆಪಿ ಸರ್ಕಾರ ಮಾಡಲಿದೆ. ಅನ್ನಕ್ಕೆ ಗತಿಯಿಲ್ಲದ ಬಾಂಗ್ಲಾದವರನ್ನು ಸಾಕಿಕೊಂಡಿದ್ದ ಪಾಪಿ ಮಮತಾ ಬ್ಯಾನರ್ಜಿ. ಪಾಪದ ಕೆಲಸ ಮಾಡುವ ತೃಣಮೂಲ ಕಾಂಗಿಸ್‌ಗೆ ಬೆಂಬಲ ನೀಡಿದ್ದು ಕಾಂಗ್ರೆಸ್ ಎಂದು ಹೇಳಿದರು. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಕೂಗಿದವರಿಗೆ ಈ ಸರ್ಕಾರ ಏನೂ ಮಾಡಿಲ್ಲ. ಅದಕ್ಕೆಲ್ಲ ಅಂತ್ಯ ಹಾಡುವ ಕಾಲ ಬರ್ತಾ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪಶ್ಚಿಮ ಬಂಗಾಳದಲ್ಲಿ ರಕ್ತ ಚರಿತ್ರೆಯ ರಾಜ್ಯವನ್ನು ಅಂತ್ಯ ಮಾಡಿ ಪ್ರಜಾಪ್ರಭುತ್ವ ಸ್ಥಾಪಿಸಿದ್ದು ಪ್ರಧಾನಿ ನರೇಂದ್ರ ಮೋದಿ ಜೀ ಅವರು. ದೇಶದ ಭವಿಷ್ಯಕ್ಕೆ ಭದ್ರತೆಗೆ ಅಡ್ಡಿಯಾಗಿದ್ದ ಟಿಎಂಸಿ ಅನ್ನು ಓಡಿಸಿ ಆ ರಾಜ್ಯದಲ್ಲಿ ರಾಮರಾಜ್ಯ ಆರಂಭವಾಗುತ್ತಿದೆ. ಪಂಚರಾಜ್ಯ ಚುನಾವಣೆಯಲ್ಲಿ ಅಭೂತಪೂರ್ವ ಬಿಜೆಪಿ ಗೆಲುವಿನ ಹಿಂದೆ ಮೋದಿ ಜೀ ಅವರ ಶ್ರಮ ಸಾಕಷ್ಟು ಇದೆ. ಆ ಕಾರಣದಿಂದ ಅವರನ್ನು ಸನ್ಮಾನಿಸಲಾಗುತ್ತಿದೆ ಎಂದರು.

# ವಿಜಯ್ ಪ್ರಮಾಣ ವಚನ ಸ್ವೀಕಾರ




• **ಮಲ್ಲಮ್ಮ ನುಡಿ ವಾರ್ತೆ ಚೆನ್ನೈ**

ತಮಿಳುನಾಡಿನಲ್ಲಿ ಸಿಎಂ ಆಗಿ ನಟ ವಿಜಯ್ ಪ್ರಮಾಣ ವಚನ ಸ್ವೀಕರಿಸಿದ ಮೊದಲ ದಿನವೇ ಟಿವಿಕೆ ಮೈತ್ರಿ ಪಕ್ಷ ಸಿಪಿಐ ತಗಾದೆ ತೆಗೆದಿದೆ.

ತಮಿಳಗ ವೆಟ್ರಿಕಳಗಂ (ಟಿವಿಕೆ) ಮುಖ್ಯಸ್ಥ, ನಟ ಜೋಸೆಫ್ ವಿಜಯ್ ಅವರು ಮುಖ್ಯಮಂತ್ರಿಯಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸಿದ್ದು, ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಬೆಳಿಗ್ಗೆ 10ಕ್ಕೆ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಪ್ರಮಾಣವಚನ ಬೋಧಿಸಿದರು.

ತಮಿಳುನಾಡಿನಲ್ಲಿ ಸಾಂಪ್ರದಾಯಿಕ ದ್ರಾವಿಡ ಪಕ್ಷಗಳಾದ ಎಐಎಡಿಎಂಕೆ ಮತ್ತು ಡಿಎಂಕೆಗಳ ವಾಡಿಕೆಗಳನ್ನು ಮುರಿದು ವಿಜಯ್ ಅವರ ಟಿವಿಕೆ ಪಕ್ಷವು ಡಿಎಂಕೆಯ ಮೈತ್ರಿ ಪಕ್ಷಗಳೊಂದಿಗೆ ಸೇರಿ ಸರ್ಕಾರ ರಚಿಸಿದೆ. ಅಲ್ಲದೇ ರಾಜ್ಯದಲ್ಲಿ ಅಧಿಕಾರಕ್ಕೇರಿದ ಮೆಣಟಿಜಜಜಿಟಿಜಜದಲ ದ್ರಾವಿಡಯೇತರ ಪಕ್ಷ ಎನಿಸಿದೆ.

**ಮೊದಲ ದಿನವೇ ತಗಾದೆ ತೆಗೆದ CPI**

ಇನ್ನು ನಟ ವಿಜಯ್ ಟಿವಿಕೆ ಪಕ್ಷ ಅಧಿಕಾರಕ್ಕೇರಿದ ಮೊದಲ ದಿನವೇ ಅದರ ಮೈತ್ರಿ ಪಕ್ಷ ಸಿಪಿಐ ಅಸಮಾಧಾನ ವ್ಯಕ್ತಪಡಿಸಿದ್ದು, ಜನಗಣಮನ, ವಂದೇ ಮಾತರಂ ಕುರಿತು ತನ್ನ ಆಕ್ರೋಶ ವ್ಯಕ್ತಪಡಿಸಿದೆ.

**ಇಷ್ಟಕ್ಕೂ ವಿವಾದವೇನು? ಸಿಪಿಐ ಆರೋಪವೇನು?**

ತಮಿಳುನಾಡಿನ ಮುಖ್ಯಮಂತ್ರಿಯಾಗಿ C Joseph Vijay ಪ್ರಮಾಣ ವಚನ ಸ್ವೀಕರಿಸಿದ ಸಮಾರಂಭದಲ್ಲಿ ವಂದೇ ಮಾತರಂ, ಜನಗಣಮನ ಮತ್ತು ತಮಿಳು ರಾಜ್ಯಗೀತೆ 'ತಮಿಳ್ ತಾಯಿ ವಾಳ್ತು' ಮೂರು ಹಾಡುಗಳನ್ನು ಹಾಡಲಾಗಿತ್ತು. ಇದೇ ವಿಚಾರವಾಗಿ ಸಿಪಿಐ ತಗಾದೆ ತೆಗೆದಿದ್ದು, ತಮಿಳು ರಾಜ್ಯ ಗೀತೆಯನ್ನು ನಿರ್ಲಕ್ಷಿಸಲಾಗಿದೆ ಎಂದು ಆರೋಪಿಸಿದೆ.

ಈ ಬಗ್ಗೆ ಮಾತನಾಡಿರುವ ಎಂ ವೀರಪಾಂಡಿಯನ್, 'ಸರ್ಕಾರದ ಕಾರ್ಯಕ್ರಮಗಳ ಪ್ರೋಟೋಕಾಲ್‌ನಲ್ಲಿ **Tamil Thaai Vaazhthu** ಗೆ ಅಗ್ರ ಸ್ಥಾನ ನೀಡಬೇಕು ಎಂದು ಹೇಳಿದ್ದಾರೆ. ಆ ಸಮಾರಂಭದಲ್ಲಿ ಮೊದಲು **Vande Mataram,** ನಂತರ ರಾಷ್ಟ್ರೀಯ ಗೀತೆ **JanaGanaMana** ಹಾಗೂ ಮೂರನೇ ಸ್ಥಾನದಲ್ಲಿ ತಮಿಳ್ ತಾಯಿ ವಾಳ್ತು ಹಾಡಿಸಲಾಯಿತು ಎಂದು ಹೇಳಿದ್ದಾರೆ.

## ಗುತ್ತಿಗೆ ಆಧಾರದ ಮೇಲೆ 550 ಮಾಜಿ ಸೈನಿಕರ ನೇಮಕಾತಿಗಾಗಿ ಪರೀಕ್ಷೆ

**ಬೆಂಗಳೂರು:** ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಗೆ ಗುತ್ತಿಗೆ ಆಧಾರದ ಮೇಲೆ 550 ಮಾಜಿ ಸೈನಿಕರ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ (ಕೆ.ಎಸ್.ಆರ್.ಪಿ) ಕೋರಮಂಗಲ 3ನೇ ಮತ್ತು 4ನೇ ಬೆಟಾಲಿಯನ್, ಕವಾಯತು ಮೈದಾನ, ಮಡಿವಾಳ, ಬೆಂಗಳೂರು, ಇಲ್ಲಿ ಮೇ 11 ರಿಂದ 16 ರ ವರೆಗೆ 6 ದಿನಗಳ ಕಾಲ ಬೆಳಿಗ್ಗೆ 6.30 ಕ್ಕೆ ದೈಹಿಕ ಪರೀಕ್ಷೆ ಹಾಗೂ ಶೇಪ್ ಒನ್ ದೇಹದಾರ್ಢ್ಯತೆ ಪರೀಕ್ಷೆಯನ್ನು ನಡೆಸಲಿದೆ. ಯಾವುದೇ ಕ್ರಿಮಿನಲ್ ದಾಖಲೆಯನ್ನು ಹೊಂದಿಲ್ಲದ, ಶೇಪ್ ಒನ್ ದೈಹಿಕ ಸದೃಢತೆಯನ್ನು ಹೊಂದಿರುವ ಹಾಗೂ 3 ಕಿ.ಮೀ. ದೂರವನ್ನು 20 ನಿಮಿಷಗಳಲ್ಲಿ ಪೂರ್ಣಗೊಳಿಸುವ ಸಾಮರ್ಥ್ಯ ಹೊಂದಿರುವ 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಈ ಪರೀಕ್ಷೆಯಲ್ಲಿ ಭಾಗವಹಿಸಬಹುದಾಗಿದೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಪೊಲೀಸ್ ಮಹಾನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗೆ ಸಹಾಯವಾಣಿ 080–22262263 ಅಥವಾ 7483498052 ಅನ್ನು ಸಂಪರ್ಕಿಸಬಹುದು.

## ಸರ್ಕಾರಿ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಸಾರ್ವಜನಿಕ ರಜೆ ಘೋಷಣೆ

**ಬೆಂಗಳೂರು:** ಸರ್ಕಾರವು ಯೋಜನಾ ಮತ್ತು ಸಾಂಖ್ಯಿಕ ಸಚಿವರಾದ ಡಿ. ಸುಧಾಕರ್ ನಿಧನದ ಹಿನ್ನೆಲೆಯಲ್ಲಿ ಮೇ 11 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಕಚೇರಿಗಳು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಹಾಗೂ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸಾರ್ವಜನಿಕ ರಜೆ ಘೋಷಣೆ ಮಾಡಿದೆ. ಹಾಗೆಯೇ ಮೇ 10 ರಿಂದ 12 ರ ವರೆಗೆ ರಾಜ್ಯಾದ್ಯಂತ ಮೂರು ದಿನಗಳ ಶೋಕಾಚರಣೆಯನ್ನು ಆಚರಿಸುವ ಜೊತೆಗೆ ಈ ಅವಧಿಯಲ್ಲಿ ಯಾವುದೇ ಸಾರ್ವಜನಿಕ ಮನರಂಜನಾ ಕಾರ್ಯಕ್ರಮಗಳು ಇರುವುದಿಲ್ಲ. ನಿಯಮಿತವಾಗಿ ಹಾರಿಸಲ್ಪಡುವ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು. ಎಂದು ಸರ್ಕಾರವು ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

## ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ




**ವಿಜಯಪುರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿ ಆಚರಿಸಲಾಯಿತು.

ಜಯಂತಿ ಕಾರ್ಯಕ್ರಮದ ಅಂಗವಾಗಿ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ರಾಜಶೇಖರ್ ಡಂಬಳ್, ನಿರ್ಮಿತಿ ಕೇಂದ್ರದ ಯೋಜನೆ ನಿರ್ದೇಶಕರಾದ ಆಕಾಶ್ ತಿಮಶೆಟ್ಟಿ,ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ್ ಭೋವಿ, ಸುರೇಶ್ ದೇಸಾಯಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಎಲ್ ಎಚ್ ಬಿದರಿ, ವಿದ್ಯಾವತಿ ಅಂಕಲಗಿ ಸೇರಿದಂತೆ ವಿವಿಧ ಸಮಾಜದ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

## ತ್ಯಾಗದ ಜೀವಂತ ರೂಪ ತಾಯಿ ಅವಳ ಪ್ರೀತಿ ಅನಂತ



• ಭಾಗ್ಯಶ್ರೀ ಜೋಶಿ

ಮಾನವನ ಜೀವನದಲ್ಲಿ ಅನೇಕ ಸಂಬಂಧಗಳು ಬಂದು ಹೋಗುತ್ತವೆ. ಆದರೆ ಜನದಿಂದ ಅಂತ್ಯದವರೆಗೂ ನೆರಳಿನಂತೆ ಜೊತೆಯಾಗಿರುವ, ಯಾವುದೇ ನಿರೀಕ್ಷೆಗಳಿಲ್ಲದೆ ಪ್ರೀತಿಯನ್ನು ನೀಡುವ ಸಂಬಂಧವೆಂದರೆ ಅದು ತಾಯಿ. ಎಂದು ಪತ್ರಕರ್ತೆ ಭಾಗ್ಯಶ್ರೀ ಜೋಶಿ ಅಭಿಪ್ರಾಯಪಟ್ಟರು. ಒಂದು ಮಗು ಹುಟ್ಟುವುದಕ್ಕಿಂತಲೂ ಮುಂಚೆಯೇ ತಾಯಿ ತನ್ನ ಜೀವನವನ್ನು ಮಗುವಿನ ಸುತ್ತ ರೂಪಿಸಿಕೊಳ್ಳುತ್ತಾಳೆ.



ಆಕೆಯ ಕನಸುಗಳು,ಆಕಾಂಕ್ಷೆಗಳು ಮತ್ತು ಆಸೆಗಳು ಎಲ್ಲವೂ ಮಗುವಿನ ಭವಿಷ್ಯದ ಮೇಲೆ ಬೆಸೆದುಕೊಳ್ಳುತ್ತವೆ. ಮಗುವಿನ ಒಂದು ನಗೆ ಆಕೆಗೆ ಪರಮಾನಂದವನ್ನು ಕೊಡುತ್ತದೆ. ಒಂದು ಕಣ್ಣೀರು ಆಕೆಯ ಹೃದಯವನ್ನು ಕದಡುತ್ತದೆ. ಈ ರೀತಿಯ ಪ್ರೀತಿಗೆ ಯಾವುದು ಸಮಾನವಲ್ಲ. ತಾಯಿಯ ಪ್ರೀತಿ ಯಾವಾಗಲೂ ಕೊಡುವುದೇ ಹೊರತು ಪಡೆಯುವುದಕ್ಕೆ ಅಲ್ಲ ಎಂಬುದು ಸತ್ಯವಾದ ಮಾತಾಗಿದೆ. ಕೆಲವು ಸಂದರ್ಭಗಳಲ್ಲಿ ಹಿರಿಯ ತಾಯಂದಿರನ್ನು ನಿರ್ಲಕ್ಷಿಸುವ ಘಟನೆಗಳು ಸಮಾಜದಲ್ಲಿ ಕಂಡುಬರುತ್ತವೆ.

ತಮ್ಮ ಜೀವನವನ್ನು ಮಕ್ಕಳಿಗಾಗಿ ಅರ್ಪಿಸಿದ ತಾಯಂದಿರನ್ನು ವೃದ್ಧಾಪ್ಯದಲ್ಲಿ ಕಡೆಗಣಿಸುವುದು ಅತ್ಯಂತ ವಿಷಾದನೀಯ. ಇದು ಕೇವಲ ಕುಟುಂಬದ ಸಮಸ್ಯೆಯಲ್ಲ, ಇದು ಸಮಾಜದ ಮೌಲ್ಯಗಳ ಕುಸಿತದ ಸೂಚನೆ. ಈ ಮನೋಭಾವನೆಯನ್ನು ಬದಲಾಯಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ

**ಪ್ರತಿದಿನ ಗೌರವಿಸಿ:** ಈ ತಾಯಂದಿರ ದಿನದ ಸಂದರ್ಭದಲ್ಲಿ ನಾವು ಒಂದು ಸಂಕಲ್ಪ ಮಾಡೋಣ. ತಾಯಿಯನ್ನು ಪ್ರತಿದಿನವೂ ಗೌರವಿಸುವುದಾಗಿ. ಆಕೆಯ ತ್ಯಾಗಗಳನ್ನು ಮರೆಯಬಾರದು. ಆಕೆಯ ಪ್ರೀತಿಯನ್ನು ಕಾಪಾಡಬೇಕು. ನಮ್ಮ ಜೀವನದಲ್ಲಿ ತಾಯಿಯ ಸ್ಥಾನವನ್ನು ಅರಿತು, ಆಕೆಗೆ ತಕ್ಕ ಗೌರವವನ್ನು ನೀಡಬೇಕು. ತಾಯಿ ಎಂದರೆ ಕೇವಲ ಒಂದು ಪದವಲ್ಲ. ಅವಳು ಒಂದು ಶಕ್ತಿ. ಒಂದು ಭಾವನೆ. ಒಂದು ಜೀವನದ ಬೆಳಕು. ತಾಯಿಯ ಪ್ರೀತಿ ನಮ್ಮ ಬದುಕಿಗೆ ದಿಕ್ಕು ತೋರಿಸುವ ದೀಪವಾಗಿದೆ. ಆ ಬೆಳಕನ್ನು ಸದಾ ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯ. ತಾಯಿಯ ಪ್ರೀತಿ ಶಾಶ್ವತ. ತಾಯಿಯ ಮಾರ್ಗದರ್ಶನ ಜೀವನದ ದಿಕ್ಕು ತೋರಿಸುತ್ತದೆ. ತಾಯಿಯ ತ್ಯಾಗ ಮಾನವೀಯತೆಯ ಮಹತ್ವದ ಸಂಕೇತವಾಗಿದೆ ಎಂದು ಹೇಳಬಹುದು ಎಂದರು.

# ಕಂದಾಯ ಸೇವೆಯಲ್ಲಿ ಕರ್ನಾಟಕ ದೇಶದಲ್ಲೇ ನಂಬರ್–1

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಂದಾಯ ಸೇವೆಗಳನ್ನು ಪಡೆಯಲು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲೆಂದೆ ಸರ್ಕಾರ ಅನೇಕ ಸೇವೆಗಳನ್ನು ಡಿಜಿಟಲ್ ಮೂಲಕ ಜನರ ಮನೆಗೆ ಆಡಳಿತ ತೆಗೆದುಕೊಂಡು ಹೋಗಿದ್ದು, ಕಂದಾಯ ಸೇವೆ ಮತ್ತು ಪಂಚಾಯತ್ ರಾಜ್ ಸೇವೆ ನೀಡುವಲ್ಲಿ ಕರ್ನಾಟಕ ದೇಶದಲ್ಲೇ ನಂಬರ್ 1 ಸ್ಥಾನದಲ್ಲಿದೆ ಎಂದು ಹೇಳಿದರು.

ಶನಿವಾರ ನಗರದ ಡಾ. ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಕಂದಾಯ ಇಲಾಖೆಯ ಯೋಜನೆ ಫಲಾನುಭವಿಗಳಿಗೆ ಹಕ್ಕುಪತ್ರ. ಪಹಣಿ. ಪಿಂಚಣಿ ಮತ್ತಿತರ ವಿವಿಧ ಸೌಲಭ್ಯ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ನಮ್ಮ ಸರ್ಕಾರ ಈಗಾಗಲೇ ನುಡಿದಂತೆ ಐದು ಗ್ಯಾರಂಟಿಗಳನ್ನು ಜನರಿಗೆ ತಲುಪಿಸಿದ್ದೇವೆ. ಜನಸಾಮಾನ್ಯರಿಗೆ ಅವರ ಆಸ್ತಿಯ ಕಾನೂನಾತ್ಮಕ ಹಕ್ಕು ದಾಖಲೆಗಳನ್ನು ಒದಗಿಸುವ ಭೂ ಗ್ಯಾರಂಟಿ ಆರನೇ ಗ್ಯಾರಂಟಿ ಇದ್ದಂತೆ ಎಂದರು.

ಇಂದಿಲ್ಲಿ ವಿತರಿಸಿದ ಹಕ್ಕುಪತ್ರಗಳು, ದರಖಾಸ್ತು ಪೋಡಿ, ಇ–ಫೌತಿ ಕೇವಲ ಕಾಗದವಲ್ಲ, ಇವು ಬಡವರ ಸ್ವಾಭಿಮಾನದ ಬದುಕು ಮತ್ತು ಆರ್ಥಿಕ ಭದ್ರತೆಯ ಅಡಿಪಾಯವಾಗಿವೆ. ಒಬ್ಬ ವ್ಯಕ್ತಿಗೆ ತನ್ನ ಸ್ವಂತ ನೆಲದ ಮೇಲೆ ಅಧಿಕೃತ ಹಕ್ಕು ಸಿಕ್ಕಾಗ ಮಾತ್ರ ಅವನಿಗೆ ಸ್ವಾಭಿಮಾನದ ಬದುಕು ಲಭಿಸುತ್ತದೆ. ಇಂದು ವಿತರಿಸಲಾದ ದಾಖಲೆಗಳು ಕೇವಲ ಕಾಗದದ ತುಂಡುಗಳಲ್ಲ, ಇವು ಬಡವರ ಆರ್ಥಿಕ ಸಬಲೀಕರಣದ ಭರವಸೆಗಳಾಗಿವೆ.




ದಾಖಲೆಗಳ ಮೂಲಕ ರೈತರು ಮತ್ತು ಬಡವರು ಬ್ಯಾಂಕ್ ಸಾಲ, ಬೆಳೆ ವಿಮೆ ಹಾಗೂ ಸರ್ಕಾರಿ ಸಬ್ಸಿಡಿಗಳನ್ನು ಸುಲಭವಾಗಿ ಪಡೆಯಬಹುದು. ಕಳೆದ ಮೂರು ವರ್ಷದಲ್ಲಿ ಕಂದಾಯ ಇಲಾಖೆ ಜಿಲ್ಲೆಯ ಇತಿಹಾಸದಲ್ಲೇ ಗಮನಾರ್ಹ ಸಾಧನೆ ಮಾಡಿದ ಪರಿಣಾಮ ಇಂದಿಲ್ಲಿ 1,14,337 ಫಲಾನುಭವಿಗಳು ಏಕಕಾಲದಲ್ಲಿ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಇದಕ್ಕೆ ಹಗಲಿರುಳು ಶ್ರಮಿಸಿದ ಜಿಲ್ಲಾಧಿಕಾರಿ ಬಿ.ಫೌಜಿಯಾ ನೇತೃತ್ವದ ಕಂದಾಯ ಇಲಾಖೆಯ ಇಡೀ ತಂಡದ ಕಾರ್ಯ ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆಯ ಮಾತುಗಳನ್ನಾಡಿದರು.

40 ವರ್ಷದಿಂದ ಬಾಕಿ ಇದ್ದ ದರಖಾಸ್ತು ಪೋಡಿಗಳ ದುರಸ್ತಿಗೆ ಮುಕ್ತಿ ನೀಡಲಾಗಿದೆ. 94ಸಿ, 94 ಸಿ.ಸಿ.ನಲ್ಲಿ ಮನೆ ಹಕ್ಕು ಪತ್ರ ನೀಡಲಾಗಿದೆ. ಆಸ್ತಿ ಕಬಳಿಕೆ ತಡೆಯಲು ಆರ್.ಟಿ.ಸಿ.ಗೆ ಆಧಾರ್ ಸೀಡಿಂಗ್ ಮಾಡಿಸಲಾಗಿದೆ. ಹಿಂದೆಂದೂ ಆಗದ ಕೆಲಸ ಕಳೆದ 3 ವರ್ಷದ ನಮ್ಮ ಸರ್ಕಾರದ ಅವಧಿಯಲ್ಲಿ ಜಿಲ್ಲೆಯಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ. ಹಿಂದಿನ ಬಿ.ಜೆ.ಪಿ. ಸರ್ಕಾರದಲ್ಲಿ ಅತಿವೃಷ್ಟಿಗೆ ಜಿಲ್ಲೆಗೆ ಗರಿಷ್ಠ ಪರಿಹಾರ ನೀಡಿದ್ದು 22 ಕೋಟಿ ರೂ. ಮಾತ್ರ. ನಮ್ಮ ಅವಧಿಯಲ್ಲಿ ಕಳೆದ ಮೂರು ವರ್ಷದಲ್ಲಿ 2,590 ಕೋಟಿ ರೂ. ಪರಿಹಾರ ಜನರಿಗೆ ನೀಡಿದ್ದೇವೆ. ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಯ ಪ್ರಮಾಣಿಕ ಪ್ರಯತ್ನದಿಂದ ರೈತರಿಗೆ ನ್ಯಾಯಯುತ ಬೆಳೆ ವಿಮೆ, ಪರಿಹಾರ ಲಭಿಸಿದೆ. ಬೆಳೆ ವಿಮೆ ಪರಿಹಾರ ನೀಡುವಲ್ಲಿ ಕಲಬುರಗಿ ಜಿಲ್ಲೆ ರಾಷ್ಟ್ರದಲಿಯೆ ನಂಬರ್–2ನೇ ಸ್ಥಾನದಲ್ಲಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ದಕ್ಷಿಣ ಮತಕ್ಷೇತ್ರ ಶಾಸಕ ಅಲ್ಲಮಪ್ರಭು ಪಾಟೀಲ್ ಅವರು ಮಾತನಾಡಿ ಜಿಲ್ಲೆಯಲ್ಲಿ ಕಳೆದ 3 ವರ್ಷದ ಅವಧಿಯಲ್ಲಿ ದಾಖಲೆ ಪ್ರಮಾಣದಲ್ಲಿ 6,060 ಹಕ್ಕು ಪತ್ರಗಳನ್ನು ನೀಡಿಲಾಗಿದೆ. ಇದು ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಸಾಧನೆಯಾಗಿದೆ. ಶೇ.76 ರಷ್ಟು ಪಹಣಿಗಳಿಗೆ ಆಧಾರ್ ಜೋಡಣೆ ಮಾಡುವ ಮೂಲಕ ಭೂ ದಾಖಲೆಗಳ ನಿರ್ವಹಣೆಯಲ್ಲಿ ಸುರಕ್ಷತೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಲಾಗಿದೆ ಎಂದರು.

ಇನ್ನು ಸಚಿವ ಪ್ರಿಯಾಂಕ್ ಖರ್ಗೆ ಅವರು ಪ್ರಗತಿ ಪಥ ಯೋಜನೆಯಡಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಸುಮಾರು 80 ಕಿ.ಮೀ ಗ್ರಾಮೀನ ರಸ್ತೆ ಅಭಿವೃದ್ಧಿ ಪಡಿಸುತ್ತಿದ್ದಾರೆ. ಜನರ ಅನುಕೂಲಕ್ಕಾಗಿ ಪ್ರತಿ ಹೋಬಳಿ ಮಟ್ಟದಲ್ಲಿ ತಲಾ 60 ಲಕ್ಷ ರೂಪಾಯಿ ವೆಚ್ಚದಲ್ಲಿ 'ಪ್ರಜಾ ಸೌಧ' ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ವಿಪತ್ತು ನಿರ್ವಹಣೆ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳನ್ನು ನೇರವಾಗಿ ಬಡವರ ಮನೆಬಾಗಿಲಿಗೆ ತಲುಪಿಸುವಲ್ಲಿ ಜಿಲ್ಲಾಡಳಿತವು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಇಂತಹ ಅನೇಕ ಜನಪರ ಯೋಜನೆಗಳು ಇಡೀ ರಾಜ್ಯಕ್ಕೆ ಮಾದರಿಯಾಗಿವೆ ಎಂದು ಹೇಳಿದರು.

330 ಕಂದಾಯ ಗ್ರಾಮ ಘೋಷಣೆ,23 ಸಾವಿರ ಪಹಣಿ ತಿದ್ದುಪಡಿ: ಇದಕ್ಕು ಮುನ್ನ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಕಳೆದ ಮೂರು ವರ್ಷದಲ್ಲಿ ಕಂದಾಯ ಗ್ರಾಮ ಯೋಜನೆಯಡಿ 368 ಗ್ರಾಮ ಗುರುತಿಸಿ ಅದರಲ್ಲಿ 330 ಗ್ರಾಮಗಳನ್ನು ಘೋಷಿಸಿ, 6,060 ಡಿಜಿಟಲ್ ಹಕ್ಕುಪತ್ರ ವಿತರಿಸಲಾಗಿದೆ. 23,447 ಪಹಣಿ ತಿದ್ದುಪಡಿ ಮಾಡಿಕೊಡಲಾಗಿದೆ. 542 ಪ್ರಕರಣಗಳಲ್ಲಿ ಅನುಬಂಧ–1 ಸೃಜಿಸಿ 1,660 ಮಂಜೂರುದಾರರ ಒಳಗೊಂಡ 978 ದಾಖಲೆಗಳು ದರಖಾಸ್ತು ಪೋಡಿ ದುರಸ್ತಿ ಮಾಡಿ 965 ಪಹಣಿ ಸೃಜಿಸಿದೆ. ಇದರಿಂದ ಗ್ರಾಮೀಣ ಜನರಿಗೆ ಹಕ್ಕು ಪತ್ರ ನೀಡುವುದರೆ ಜೊತೆಗೆ ಸರ್ಕಾರಿ ಸೌಲಭ್ಯ ಪಡೆಯಲು ಅವಕಾಶ ಮಾಡಿಕೊಡಲಾಗಿದೆ ಎಂದರು.

# ಸಚಿವ ಸುಧಾಕರ್ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಯೋಜನೆ ಮತ್ತು ಸಾಂಖ್ಯಿಕ ಸಚಿವರಾದ ಡಿ. ಸುಧಾಕರ್ ಅವರ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟವುಂಟಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಸದಾಶಿವ ನಗರದಲ್ಲಿರುವ ಸಚಿವ ಸುಧಾಕರ್ ಅವರ ನಿವಾಸದಲ್ಲಿ ಅಂತಿಮ ದರ್ಶನ ಪಡೆದು ಮಾಧ್ಯಮದವರೊಂದಿಗೆ ಮಾತನಾಡಿದರು.

**ಸಹಕಾರ ಕ್ಷೇತ್ರಕ್ಕೂ ಕೊಡುಗೆ:** ಸುಧಾಕರ್ ಅವರು ಮೂಲತಃ ಚಳ್ಳಕೆರೆಯವರು. 2008 ರಿಂದ ಹಿರಿಯೂರು ಶಾಸಕರಾಗಿದ್ದರು. ಎರಡನೇ ಬಾರಿಗೆ ಮಂತ್ರಿಯಾಗಿದ್ದ ಅವರು ಅತ್ಯಂತ ಜನಪ್ರಿಯ



ವ್ಯಕ್ತಿ. ಸಮಾಜ ಕಲ್ಯಾಣ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿಯೂ ಸಾಕಷ್ಟು ಕೊಡುಗೆ ನೀಡಿರುವ ಅವರು ಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆಗಿದ್ದರು. ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಸುಧಾಕರ್ ಅವರ ಚಿಕ್ಕಪ್ಪ ಜಯಣ್ಣ ಕೂಡಾ ಶಾಸಕರಾಗಿದ್ದವರು. ರಾಜಕೀಯ ಕ್ಷೇತ್ರದಲ್ಲಿ ಅಪಾರ ಜನಪ್ರಿಯತೆ ಗಳಿಸಿಕೊಂಡಿದ್ದರು. ಚಳ್ಳಕೆರೆ ಎಸ್.ಟಿ ಮೀಸಲು ಕ್ಷೇತ್ರವಾಗಿದ್ದರಿಂದ ಹಿರಿಯೂರಿನಿಂದ ಸ್ಪರ್ಧಿಸಿ ಗೆದ್ದಿದ್ದರು ಎಂದು ವಿವರಿಸಿ, ರೈತರ ಹಾಗೂ ಬಡವರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಜನಪ್ರಿಯ ವ್ಯಕ್ತಿಯಾಗಿದ್ದರು ಎಂದರು.

**ಆತ್ಮಕ್ಕೆ ಚಿರಶಾಂತಿ ದೊರಕಲಿ:** ಸುಧಾಕರ್ ಅವರು ಪತ್ನಿ, ಪುತ್ರಿ ಹಾಗೂ ಪುತ್ರ ಸೇರಿದಂತೆ ಅಪಾರ ಬಂಧುಬಳಗ, ಅಭಿಮಾನಿಗಳನ್ನು ಬಿಟ್ಟು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಕುಟುಂಬದವರಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುವುದಾಗಿ ಹೇಳಿದರು.

**ಮೂರು ದಿನಗಳ ಶೋಕಾಚರಣೆ:** ಚಿತ್ರದುರ್ಗ ಜಿಲ್ಲೆಯಲ್ಲಿ ಮೂರು ದಿನಗಳ ಕಾಲ ಶೋಕಾಚರಣೆ ಮಾಡುತ್ತಿದ್ದು, ಚಿತ್ರದುರ್ಗದಲ್ಲಿ ಸೋಮವಾರ ರಜೆ ಘೋಷಣೆ ಮಾಡಲಾಗಿದೆ ಎಂದರು.

**ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ:** ನಾಳೆ ಚಳ್ಳಕೆರೆಯಲ್ಲಿ ಸಂಜೆ 4.00 ಗಂಟೆಗೆ ನಡೆಯಲಿರುವ ಅಂತಿಮ ಸಂಸ್ಕಾರದಲ್ಲಿ ಭಾಗಿಯಾಗುವುದಾಗಿ ತಿಳಿಸಿದ ಮುಖ್ಯಮಂತ್ರಿಗಳು ಅವರ ಮತಕ್ಷೇತ್ರ ಹಿರಿಯೂರಿಗೆ ಅವರ ಪಾರ್ಥಿವ ಶರೀರವನ್ನು ದರ್ಶನಕ್ಕಾಗಿ ಇರಿಸಿದ್ದು, ನಾಳೆ ಚಳ್ಳಕೆರೆಗೆ ಕರೆದೊಯ್ಯಲಾಗುವುದು ಎಂದು ವಿವರಿಸಿದರು. ಎಲ್ಲಾ ಸರ್ಕಾರಿ ಗೌರವದೊಂದಿಗೆ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದರು.

# 18 ವರ್ಷಗಳ ಸೇವಾ ಪಯಣಕ್ಕೆ ಸಂಭ್ರಮಾಚರಣೆ

• ಮಲ್ಲಮ್ಮ ನುಡಿ ವಾರ್ತೆ ನೆಲಮಂಗಲ

ನಗರದ ವಿ.ವಿ.ಎಸ್. ಕನ್ವೆಂಷನ್ ಹಾಲ್ ನಲ್ಲಿ ನೆಲಮಂಗಲ ರೋಟರಿ ಸಂಸ್ಥೆಯ 19ನೇ ಸಂಸ್ಥಾಪಕ ದಿನಾಚರಣೆ ಹಾಗೂ 18 ವರ್ಷಗಳ ಯಶಸ್ವಿ ಸೇವಾ ಪಯಣದ ಸಂಭ್ರಮ ಕಾರ್ಯಕ್ರಮ ಭಾನುವಾರ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಸ್ಥಾಪಕ ಅಧ್ಯಕ್ಷ ಹೆಚ್.ಜಿ. ರಾಜು, ರೋಟರಿ ಸಂಸ್ಥೆ ವಿಶ್ವದ 220ಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, 122 ವರ್ಷಗಳ ಇತಿಹಾಸ ಹೊಂದಿರುವ ಅಂತರರಾಷ್ಟ್ರೀಯ ಸೇವಾ ಸಂಸ್ಥೆಯಾಗಿದೆ ಎಂದು ಹೇಳಿದರು. "ಖಜಡಿ–ತುಛಿಜ ಂಛಠತಜ ಖಜಟಜ" (ಸ್ವಯಂ ಸೇವೆ) ಎಂಬ ಘೋಷವಾಕ್ಯದೊಂದಿಗೆ ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳುತ್ತಿರುವ ರೋಟರಿ, ವಿಶ್ವದಾದ್ಯಂತ ಉಚಿತ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ ನಡೆಸುತ್ತಿರುವುದು ಅತ್ಯಂತ ಮಹತ್ವದ ಸೇವೆಯಾಗಿದೆ ಎಂದು ತಿಳಿಸಿದರು.

ರೋಟರಿ ಅಧ್ಯಕ್ಷ ಜಿ.ಆರ್. ನಾಗರಾಜು ಮಾತನಾಡಿ, ನೆಲಮಂಗಲ ರೋಟರಿ ಸಂಸ್ಥೆ ಸ್ಥಾಪನೆಯಾದ ದಿನದಿಂದಲೂ ಅನೇಕ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ಬರುತ್ತಿದೆ ಎಂದು ಹೇಳಿದರು. ಗ್ರಾಮೀಣ ಪ್ರದೇಶಗಳಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು, ಪಶುವೈದ್ಯಕೀಯ ಸೇವೆಗಳು, ರಕ್ತದಾನ ಶಿಬಿರಗಳು, ರಿಯಾಯಿತಿ ದರದಲ್ಲಿ ಡಯಾಲಿಸಿಸ್ ಸೇವೆ, ಬಡ ಕುಟುಂಬಗಳಿಗೆ ಉಚಿತ ಹಸು–ಕರುಗಳ ವಿತರಣೆ ಹಾಗೂ ಉಚಿತ ಹೃದಯ ಶಸ್ತ್ರಚಿಕಿತ್ಸೆ ನೆರವು ನೀಡಲಾಗುತ್ತಿದೆ ಎಂದು ವಿವರಿಸಿದರು.

ಇದಲ್ಲದೆ, ಶಾಲೆಗಳಿಗೆ ಉಚಿತ ಡೆಸ್ಕ್, ಸ್ಮಾರ್ಟ್ ಬೋರ್ಡ್, ಕಲಿಕಾ ಸಾಮಗ್ರಿ ಹಾಗೂ ಬ್ಯಾಗ್ ವಿತರಣೆ, ಅಂಗನವಾಡಿ ಮತ್ತು ಶಾಲೆಗಳ ಮರುನವೀಕರಣ, ಕುಡಿಯುವ ನೀರಿನ ಘಟಕಗಳ ಸ್ಥಾಪನೆ, ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಕೆ ಸೇರಿದಂತೆ ಶಿಕ್ಷಣ ಮತ್ತು ಪರಿಸರ ಸಂರಕ್ಷಣೆಗೆ ಒತ್ತು ನೀಡಲಾಗುತ್ತಿದೆ ಎಂದು ಹೇಳಿದರು.

ಮಹಿಳಾ ಸಬಲೀಕರಣದ ಭಾಗವಾಗಿ ಉಚಿತ ಟೈಲರಿಂಗ್ ತರಬೇತಿ, ಹೊಲಿಗೆ ಯಂತ್ರ ವಿತರಣೆ, ಬ್ಯೂಟಿ ಪಾರ್ಲರ್ ಹಾಗೂ ಸ್ಯಾರಿ ಕುಚ್ಚು ತರಬೇತಿ ನೀಡಲಾಗುತ್ತಿದ್ದು, ಯುವಕರಿಗೆ ಕೆರಿಯರ್ ಗೈಡನ್ಸ್, ಸ್ಟಾರ್ಟ್‌ಅಪ್ ತರಬೇತಿ, ರೈಲಾ ಕಾರ್ಯಕ್ರಮಗಳು ಹಾಗೂ ವಿದ್ಯಾರ್ಥಿ ಸಂಘಟನೆಗಳ ರೂಪದಲ್ಲಿ ಇಂಟರಾಕ್ಟ್ ಮತ್ತು ರೋಟರಾಕ್ಟ್ ಕ್ಲಬ್‌ಗಳ ಸ್ಥಾಪನೆ ಮಾಡಲಾಗಿದೆ ಎಂದು ತಿಳಿಸಿದರು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತ ತಡೆ ಜಾಗೃತಿ ಫಲಕಗಳ ಅಳವಡಿಕೆ, ಮಹಿಳಾ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು, ಉಚಿತ ಸ್ಯಾನಿಟರಿ ಪ್ಯಾಡ್ ವಿತರಣೆ, ಪಲ್ಸ್ ಪೋಲಿಯೋ ಜಾಗೃತಿ ಅಭಿಯಾನ, ಸ್ವಚ್ಛತಾ ಆಂದೋಲನ ಹಾಗೂ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ತುರ್ತು ನೆರವು ಕಾರ್ಯಗಳನ್ನು ಕೂಡ ಸಂಸ್ಥೆ ನಿರಂತರವಾಗಿ ಕೈಗೊಳ್ಳುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷ ಜಿ.ಆರ್.ನಾಗರಾಜು, ಕಾರ್ಯದರ್ಶಿ ಆರ್. ರವಿಕುಮಾರ್, ಜಂಟಿ ಕಾರ್ಯದರ್ಶಿ ಸೋಮಶೇಖರ್, ಟ್ರಸ್ಟ್ ಅಧ್ಯಕ್ಷ ಎಂ.ಎನ್. ಹರೀಶ್ ಕುಮಾರ್, ವಲಯ ರಾಯಭಾರಿ ಮಂಜುನಾಥ್ ಪಾಟೀಲ್ ಸೇರಿದಂತೆ ಮಾಜಿ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

# ಭಕ್ತಸಾಗರದ ಮಧ್ಯೆ ಹೇಮರೆಡ್ಡಿ ಮಲ್ಲಮ್ಮ ರಥೋತ್ಸವ

## ಕೆಂಭಾವಿಯಲ್ಲಿ ಮಲ್ಲಮ್ಮಾಂಬೆಯ ರಥ ಎಳೆದು ಭಕ್ತಿ ಮೆರೆದ ಮಹಿಳೆಯರು, ಎಲ್ಲೆಲ್ಲೂ ಮಲ್ಲಮ್ಮನ ಸ್ಮರಣೆ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣದ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮಳ ರಥೋತ್ಸವ ರವಿವಾರ ಸಾಯಂಕಾಲ 6–30ಕ್ಕೆ ಸಾವಿರಾರು ಭಕ್ತ ಸಮುಹದ ಮಧ್ಯೆ ಅದ್ದೂರಿಯಾಗಿ ಜರುಗಿತು. ವಿಶೇಷವಾಗಿ ಮಹಿಳೆಯರೆ ರಥವನ್ನೆಳೆದು ಸಂಭ್ರಮಿಸಿ ಭಕ್ತಿ ಭಾವ ಮೆರೆದರು.

ಶಿವಶರಣೆ ಹೇಮರಡ್ಡಿ ಮಲ್ಲಮ್ಮನ 11ನೇ ವರ್ಷದ ಜಾತ್ರಾಮಹೋತ್ಸವ ಅಂಗವಾಗಿ ನಡೆದ ನಾಲ್ಕನೇ ವರ್ಷದ ರಥೋತ್ಸವ ಇದಾಗಿದ್ದು, ರಥೋತ್ಸವದಲ್ಲಿ ಪಟ್ಟಣವು ಸೇರಿದಂತೆ ವಲಯದ ಹಲವು ಗ್ರಾಮಗಳ ಭಕ್ತರು ಭಾಗವಹಿಸಿ ರಥೋತ್ಸವದ ವೈಭವವನ್ನು ಕಣ್ತುಂಬಿಕೊಂಡರು. ಇದಕ್ಕೂ ಮುಂಚೆ ಶ್ರೀಧರಯ್ಯ ಹಿರೇಮಠ ಹಾಗೂ ಅರ್ಚಕ ಬಸಯ್ಯ ಸ್ವಾಮಿ ಇವರಿಂದ ಮಲ್ಲಮ್ಮಾಂಬೆಗೆ ಪೂಜಾ ವಿಧಿ ವಿಧಾನಗಳು ನೆರವೇರಿದವು.

ನಾನಾ ವಿಧದ ಪುಷ್ಪಲಂಕಾರದೊಂದಿಗೆ ಸಿಂಗಾರಗೊಂಡ ರಥದ ಉತ್ಸವಕ್ಕೆ ಕಳಸಾರೋಹಣವಾಗುತ್ತಿದ್ದಂತೆ ಹಿರೇಮಠದ ಪೀಠಾಧಿಪತಿ ಚನ್ನಬಸವ ಶಿವಾಚಾರ್ಯರು ಚಾಲನೆ ನೀಡಿದರು. ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಮಾತಾ ಕಿ ಜೈ ಎಂದು ಜೈಕಾರ ಮೊಳಗುತ್ತ ತೇರಿಗೆ ಉತ್ತತ್ತಿ, ಬಾಳೆಹಣ್ಣು ಹಾರಿಸಿದ ಭಕ್ತ ಸಮೂಹ ರಥೋತ್ಸವದ ನಂತರ ತೆಂಗು ಒಡೆದು ಸರತಿ ಸಾಲಿನಲ್ಲಿ ನಿಂತು ಮಲ್ಲಮ್ಮಾಂಬೆ ದರ್ಶನ ಪಡೆದು



ಪುನಿತ ಭಾವ ಮೆರೆದರು.

ಇದೇ ಸಂದರ್ಭದಲ್ಲಿ ನಡೆದ ಧರ್ಮ ಸಭೆಯಲ್ಲಿ ಮಾಗಣಗೇರಿ ಬ್ರಹನ್ಮಠದ ಷ ಬ್ರ ಡಾ. ವಿಶ್ವಾರಾಧ್ಯ ಶಿವಾಚಾರ್ಯರರು, ಹಾಗೂ ಕೆಂಭಾವಿ ಹಿರೇಮಠದ ಚನ್ನಬಸವ ಶಿವಾಚಾರ್ಯರು, ನಗನೂರು ಸೂಗುರೇಶ್ವರ ಶಿವಾಚಾರ್ಯರಯ, ಏಕಾಕ್ಷರ ಶಿವಾಚಾರ್ಯರು, ಚನ್ನಯ್ಯ ಸ್ವಾಮಿ ಚಿಕ್ಕಮಠ ರವರಿಂದ ಆಶೀರ್ವಚನ ಜರುಗಿತು. ಪ್ರತಿವರ್ಷದಂತೆ ಹತ್ತು ದಿನಗಳ ಪರ್ಯಂತ ನಡೆದ ಶಿವಶರಣೆಯ ಪುರಾಣ ಪ್ರವಚನವು ಶಾಹಪುರ ಏಕದಂಡಗಿ ಮಠದ ಕಾಳಹಸ್ತೇಂದ್ರ ಮಹಾಸ್ವಾಮಿಗಳು ಅವರಿಂದ ಮಹಾಮಂಗಲಗೊಂಡಿತು. ಕಾರ್ಯಕ್ರಮದಲ್ಲಿ ಖ್ಯಾತ ಹಿಂದುಸ್ಥಾನಿ ಗಾಯಕ ಭಸವರಾಜ್ ಭಂಟನೂರು ಹಾಗೂ ಯಮುನೇಶ ಯಾಳಗಿಯವರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಧರ್ಮ ಸಭೆಯಲ್ಲಿ ದೇವಸ್ಥಾನ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಸಕಲ ಸದ್ಭಕ್ತರು ಭಾಗವಹಿಸಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)